ಶ್ರೀ ಸಿದ್ದರಾಮಯ್ಯ:- ಬಿಜೆಪಿ ಪಕ್ಷದವು ರಾಜಕೀಯಕ್ಕೋಸ್ಕರ ಈ ರೀತಿ ಮಾಡುವುದಕ್ಕೆ ಹೊರಟಿದ್ದಾರೆ.

ಅಧ್ಯಕ್ಷರು:- ಮಾನ್ಯ ಸಚಿವರೆ ತಾವು ಉತ್ತರವನ್ನು ಕೊಡಿ.

ಶ್ರೀ ಹೆಚ್.ಡಿ.ರೇವಣ್ಣ:- ಮಾನ್ಯ ಅಧ್ಯಕ್ಷರೆ, ನನಗೆ ಮಾತನಾಡುವುದಕ್ಕೆ ಅವಕಾಶ ಕೊಡಿ.

ಅಧ್ಯಕ್ಷರು:- ತಾವೆಲ್ಲರೂ ಕುಳಿತುಕೊಳ್ಳಿ.

ಶ್ರೀ ಆರ್.ವಿ.ದೇಶಪಾಂಡೆ:- ಚರ್ಚೆಗೆ ಅವಕಾಶ ಮಾಡಿಕೊಡುತ್ತೇವೆ.

ಶ್ರೀ ಹೆಚ್.ಡಿ.ರೇವಣ್ಣ:- ಮಾನ್ಯ ಅಧ್ಯಕ್ಷರೆ, ನನಗೆ ಮಾತನಾಡುವುದಕ್ಕೆ ಅವಕಾಶ ಕೊಡಿ.

ಅಧ್ಯಕ್ಷರು:- ಮಾನ್ಯ ರೇವಣ್ಣನವರೆ, ಈಗ ಬೇಡ. ಈಗ ಮಾನ್ಯ ಸಚಿವರು ಉತ್ತರವನ್ನು ಕೊಡಲಿ. ಮೊನ್ನೆ ದಿನ ಈ ಬಗ್ಗೆ ಉತ್ತರ ಕೊಡಬೇಕಾಗಿತ್ತು, ನಿನ್ನೆಯು ಕೂಡ ಈ ಬೇಡಿಕೆಯ ಮೇಲೆ ಉತ್ತರ ಕೊಡಿಸುವುದಕ್ಕಾಗಲಿಲ್ಲ. ದಯವಿಟ್ಟು ನಾನು ನಿಮಗೆ ಕೈಮುಗಿಯುತ್ತೇನೆ ತಾವು ಕುಳಿತುಕೊಳ್ಳಿ, ಮಾನ್ಯ ಸಚಿವರೆ ತಾವು ಉತ್ತರ ಕೊಡಿ.

3) ವಿತ್ತೀಯ ಕಾರ್ಯಕಲಾಪಗಳು

ಅ. 2014-15ನೇ ಸಾಲಿನ ಶಿಕ್ಷಣ ಇಲಾಖೆಯ ಬೇಡಿಕೆಯ ಮೇಲಿನ ಚರ್ಚೆಗೆ ಮಾನ್ಯ ಉನ್ನತ ಶಿಕ್ಷಣ ಮಂತ್ರಿಗಳಿಂದ ಉತ್ತರ

ಶ್ರೀ ಆರ್.ವಿ.ದೇಶಪಾಂಡೆ(ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಸಚಿವರು):- ಮಾನ್ಯ ಅಧ್ಯಕ್ಷರೆ, ವಿರೋಧ ಪಕ್ಷದವರ ಈ ತರಹದ ವರ್ತನೆಯನ್ನು ಈ ಸದನವು ಖಂಡಿಸಬೇಕಾಗಿದೆ. ಈ ಮನೆಯ ಗೌರವಾನ್ವಿತ ಸದಸ್ಯರಾದ ಶ್ರೀ ಅರವಿಂದ ಲಿಂಬಾವಳಿಯವರು, ಶ್ರೀ ಕೆ.ಆರ್.ರಮೇಶ್ ಕುಮಾರ್‌ರವರು, ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿಯವರು,

ಶ್ರೀ ಎನ್.ಹೆಚ್.ಕೋನರೆಡ್ಡಿಯವರು, ಶ್ರೀಮತಿ ವಿನಿಶಾ ನೀರೋರವರು, ಶ್ರೀ ಕೆ.ಎಸ್.ಪುಟ್ಟಣ್ಣಯ್ಯನವರು, ಶ್ರೀ ಈಶ್ವರ ಖಂಡ್ರೆಯವರು, ಶ್ರೀ ಡಿ.ಸಿ.ತಮ್ಮಣ್ಣನವರು, ಶ್ರೀ ಅಶ್ವಥ್ ನಾರಾಯಣರವರು, ಶ್ರೀ ರುದ್ರಪ್ಪ ಲಮಾಣಿಯವರು, ಶ್ರೀ ತಿಪ್ಪರಾಜು ಮತ್ತು ಶ್ರೀ ರಾಜೀವ್‌ರವರು ಇನ್ನಿತರ ಹಲವಾರು ಸದಸ್ಯರು ಪ್ರಾಥಮಿಕ ಶಿಕ್ಷಣ ಮತ್ತು ಉನ್ನತ ಶಿಕ್ಷಣದ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಹಲವಾರು ಒಳ್ಳೆಯ ಸಲಹೆಯನ್ನು ಸಹ ಕೊಟ್ಟಿದ್ದಾರೆ. ಮುಖ್ಯವಾಗಿ ಕರ್ನಾಟಕ ರಾಜ್ಯ ಈ ದೇಶದಲ್ಲಿ ಒಂದು Knowledge Capital ಎಂದು ನಾವು ಪ್ರಸಿದ್ಧಿ ಪಡೆದಿದ್ದೇವೆ. ಹಾಗಾಗಿ ಸರ್ಕಾರ ಇವತ್ತು ಮುಖ್ಯವಾಗಿ ಶಿಕ್ಷಣ ರಂಗದಲ್ಲಿ ನಮ್ಮ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ಸಿಗಬೇಕಾಗಿದೆ, ಮೂಲಭೂತ ಸೌಕರ್ಯಗಳ ವ್ಯವಸ್ಥೆಯಾಗಬೇಕಾಗಿದೆ. ಇಂಥ ಪರಿಸ್ಥಿತಿಯಲ್ಲಿ ಸರ್ಕಾರ ಹಲವಾರು ಕ್ರಮಗಳನ್ನು ತೆಗೆದುಕೊಂಡಿದೆ. ನಾವು 21ನೇ ಶತಮಾನದಲ್ಲಿದ್ದೇವೆ. 21ನೇ ಶತಮಾನ ಇದು ಸ್ಪರ್ಧೆಯ ಶತಮಾನ, ಇದು ಗುಣಮಟ್ಟದ ಶತಮಾನ. Struggle for existence and survival of the fittest. ಹಾಗಾಗಿ ನಮ್ಮ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ಸಿಗಬೇಕಾಗಿದೆ. ಹಿಂದೆ ಒಂದು ಕಾಲವಿತ್ತು, ಶಿಕ್ಷಣಕ್ಕೆ ಹೆಚ್ಚಿನ ಮಹತ್ವವಿರಲಿಲ್ಲ. ಕಳೆದ 15–20 ವರ್ಷಗಳಲ್ಲಿ ಯಾರು ಸರಸ್ವತಿ ಸಂಪಾದನೆ ಮಾಡುವುದಿಲ್ಲ ಅವನ ಜೀವನ ವ್ಯರ್ಥವೆಂದು ನಾವು ಹೇಳಬೇಕಾಗುತ್ತದೆ. ಆ ದಿಕ್ಕಿನಲ್ಲಿ ಇವತ್ತು ನಮ್ಮ ವಿದ್ಯಾರ್ಥಿಗಳು ಇಡೀ ವಿಶ್ವ ಮಾರುಕಟ್ಟೆಯಲ್ಲಿ ಸ್ಪರ್ಧೆಗೆ ಸಿದ್ಧವಾಗಬೇಕಾಗಿದೆ. ಆ ದಿಕ್ಕಿನಲ್ಲಿ ಇವತ್ತು ನಮ್ಮ ಸರ್ಕಾರ, ನಮ್ಮ ವಿಶ್ವವಿದ್ಯಾಲಯಗಳು ಇರಬಹುದು, ನಮ್ಮ ಕಾಲೇಜುಗಳಿರಬಹುದು, ಇಂಜಿನಿಯರಿಂಗ್ ಕಾಲೇಜುಗಳಿರಬಹುದು, ತಾಂತ್ರಿಕ ಕಾಲೇಜುಗಳಾದ ಪಾಲಿಟೆಕ್ನಿಕ್‌ಗಳು ಇರಬಹುದು. ಇವೆಲ್ಲಾ ಈ ಸ್ಪರ್ಧೆಯಲ್ಲಿ ಉತ್ತೀರ್ಣವಾಗಲಿಕ್ಕೆ ನಮ್ಮ ಯುವಕರಿಗೆ, ನಮ್ಮ ವಿದ್ಯಾರ್ಥಿಗಳಿಗೆ ಒಂದು ವಾತಾವರಣ ಸೃಷ್ಟಿ ಮಾಡಬೇಕಾಗಿದೆ. ಇವತ್ತು ಮುಖ್ಯವಾಗಿ ಕರ್ನಾಟಕದ ಶಿಕ್ಷಣ ಕ್ಷೇತ್ರದಲ್ಲಿ ನಾವು ಇವತ್ತು fore frontನಲ್ಲಿದ್ದೇವೆ. ದೇಶದಲ್ಲಿರುವ educational institutions ನಲ್ಲಿ 18% institutions ಕರ್ನಾಟಕದಲ್ಲಿವೆ. ದೇಶದಲ್ಲಿ ನಾವು ನಾಲ್ಕನೇ ಸ್ಥಾನದಲ್ಲಿದ್ದೇವೆ. ಸರ್ಕಾರಿ aided colleges,

Universitiy costed colleges ಕರ್ನಾಟಕದಲ್ಲಿ ಇಡೀ ದೇಶದಲ್ಲಿ highest numbers ಇವೆ. 1.00 ಲಕ್ಷ populationಗೆ ನಮ್ಮ college ratio ಬಗ್ಗೆ ನಾವು ಮೂರನೇ ಸ್ಥಾನದಲ್ಲಿದ್ದೇವೆ after ಪಾಂಡಿಚೇರಿ ಸಣ್ಣದು ಅಥವಾ ಆಂಧ್ರಪ್ರದೇಶ. ಇವತ್ತು ಬೆಂಗಳೂರು ಜಿಲ್ಲೆಯಲ್ಲಿ ಏನು ಶಿಕ್ಷಣ ಸಂಸ್ಥೆ ಇದೆ 924 ಕ್ಕಿಂತ ಹೆಚ್ಚು ಶಿಕ್ಷಣ ಸಂಸ್ಥೆಗಳಿವೆ. ಇಡೀ ದೇಶದಲ್ಲಿ Bangalore *is in* No.1 position ಶಿಕ್ಷಣ ಸಂಸ್ಥೆಗಳೇನಿವೆ, ಅದರಲ್ಲಿ ನಾವು ಒಂದನೇ ಸ್ಥಾನದಲ್ಲಿದ್ದೇವೆ. ಇಂಥ ಪರಿಸ್ಥಿತಿಯಲ್ಲಿ ಗೌರವಾನ್ವಿತ ಸದಸ್ಯರು ಹಲವಾರು ಸಲಹೆಗಳನ್ನು ಕೊಟ್ಟಿದ್ದಾರೆ. ನಾನು ಒಪ್ಪಿಕೊಳ್ಳುತ್ತೇನೆ, ನನಗೂ ನೋವಾಗಿದೆ, ಹಲವಾರು ಡಿಗ್ರಿ ಕಾಲೇಜುಗಳಲ್ಲಿ ಇನ್ನೂ ಸರಿಯಾದ ಮೂಲಭೂತ ಸೌಕರ್ಯಗಳಿಲ್ಲ. ಶಿಕ್ಷಕರ ಕೊರತೆಯಿದೆ, ಹಾಗಾಗಿ ಈ ಸರ್ಕಾರ ನಮ್ಮ ಮುಂಗಡ ಪತ್ರದಲ್ಲಿ 2012-13ನೇ ಸಾಲಿನ ಬಜೆಟ್‌ನಲ್ಲಿ ಉನ್ನತ ಶಿಕ್ಷಣಕ್ಕೆ 2,087 ಕೋಟಿ ರೂಪಾಯಿಗಳಿತ್ತು. ಈ ಒಂದೂಕಾಲು ವರ್ಷಗಳಲ್ಲಿ ಎರಡು ಬಜೆಟ್‌ಗಳು present ಆದವು. ಮಾನ್ಯ ಮುಖ್ಯಮಂತ್ರಿಗಳು ಶಿಕ್ಷಣ ರಂಗದ ಒಂದು ಮಹತ್ವವನ್ನು ತಿಳಿದುಕೊಂಡು ಮುಂಗಡ ಪತ್ರದಲ್ಲಿ ಇಡೀ ಶಿಕ್ಷಣ ರಂಗಕ್ಕೆ 18,000-00 ಕೋಟಿ ರೂಪಾಯಿಗಳನ್ನು ಒದಗಿಸಲಿಕ್ಕೆ ಅವಕಾಶವನ್ನು ಮಾಡಿಕೊಟ್ಟಿದ್ದಾರೆ. ಉನ್ನತ ಶಿಕ್ಷಣಕ್ಕೆ ಈ ವರ್ಷ Plan and Non-Planನಲ್ಲಿ 3,780.00 ಕೋಟಿ ರೂಪಾಯಿಗಳು. ಅಂದರೆ ಒಂದೂಕಾಲು ವರ್ಷಗಳಲ್ಲಿ 1,280 ಕೋಟಿ ರೂಪಾಯಿಗಳಷ್ಟು ಹೆಚ್ಚಿನ ಮೊತ್ತವನ್ನು ಬಜೆಟ್‌ನಲ್ಲಿ provision ಮಾಡಿದ್ದೇವೆ. ಇದನ್ನು ಏಕೆ ಹೇಳುತ್ತಿದ್ದೇವೆಂದರೆ ಮುಖ್ಯವಾಗಿ ಆರೋಗ್ಯ ಮತ್ತು ಶಿಕ್ಷಣ ಇವೆರಡೂ ಬಹಳ ಮಹತ್ವವನ್ನು ಪಡೆದಿವೆ. ಏಕೆಂದರೆ ಪ್ರತಿಯೊಬ್ಬರಿಗೂ ಒಳ್ಳೆಯ ಆರೋಗ್ಯ ಇರಬೇಕು, ಪ್ರತಿಯೊಬ್ಬರೂ ಸರಸ್ವತಿ ಸಂಪಾದನೆಯನ್ನು ಮಾಡಬೇಕು. Knowledge driven economyಯಲ್ಲಿ ಇವತ್ತು ಆರೋಗ್ಯವೂ ಇಲ್ಲ, ಶಿಕ್ಷಣ ಇಲ್ಲ ಅಥವಾ ಶಿಕ್ಷಣ ಇದೆ, ಆರೋಗ್ಯವಿಲ್ಲ. ಇಂಥ ಪರಿಸ್ಥಿತಿ ನಿರ್ಮಾಣವಾದರೆ ನಮ್ಮ ನಾಡಿಗೆ ಭವಿಷ್ಯವಿಲ್ಲ. ನಮ್ಮ ರಾಷ್ಟ್ರಕ್ಕೂ ಭವಿಷ್ಯವಿಲ್ಲ. ಇವತ್ತು ಉನ್ನತ ಶಿಕ್ಷಣ ಇಲಾಖೆಯಲ್ಲಿ 18 ರಿಂದ 35 ವರ್ಷದ ಯುವಕರು ನಮ್ಮ ರಾಜ್ಯದಲ್ಲಿ 70 ಲಕ್ಷ ಜನರಿದ್ದಾರೆ. ಉನ್ನತ ಶಿಕ್ಷಣ ಇಲಾಖೆಯಲ್ಲಿ ವಿದ್ಯಾಭ್ಯಾಸ ಮಾಡುವ

ಯುವಕ ಯುವತಿಯುವರು ಕೇವಲ 18 ಲಕ್ಷ ಜನರಿದ್ದಾರೆ. ಅಂದರೆ 52 ಲಕ್ಷ ಯುವಕ ಯುವತಿಯರು ಉನ್ನತ ಶಿಕ್ಷಣದಿಂದ ಇನ್ನೂ ದೂರವಿದ್ದಾರೆ. ಇವತ್ತು ರಾಷ್ಟ್ರಮಟ್ಟದಲ್ಲಿ Gross Enrollment Ratio 19.5 ಇದೆ. ಕರ್ನಾಟಕದಲ್ಲಿ 25.5 ಇದೆ. ಹೈದರಾಬಾದ್–ಕರ್ನಾಟಕದ ಏರಿಯಾಗೆ ಹೋದಾಗ ಬಹಳ ಹಿಂದುಳಿದಿದೆ ಎಂದು ನಮಗೆ ಬಹಳ ನೋವಾಗುತ್ತದೆ. ನಿರಕ್ಷರಸ್ಥರ ಸಂಖ್ಯೆ ಬಹಳ ಹೆಚ್ಚಿದೆ. National averageಗಿಂತ 17% GER ಹೈದರಾಬಾದ್ ಕರ್ನಾಟಕದ ಏರಿಯಾದಲ್ಲಿದೆ. ಹಾಗಾಗಿ 2,020 ಹಣದಲ್ಲಿ ಕರ್ನಾಟಕದಲ್ಲಿ Gross Enrollment Ratio 35% ಆಗಬೇಕೆನ್ನುವ ಗುರಿ ಇಟ್ಟುಕೊಂಡು ನಾವು ಮುಂದಿನ ಹೆಜ್ಜೆಯನ್ನು ಹಾಕುತ್ತಿದ್ದೇವೆ. ಇದರಲ್ಲಿ ಹೈದರಾಬಾದ್ ಕರ್ನಾಟಕ ಏರಿಯಾದಲ್ಲಿ ಹೈದರಾಬಾದ್ ಕರ್ನಾಟಕ ಬೋರ್ಡ್ ಜೊತೆಗೆ ಈ ವರ್ಷ ಮುಖ್ಯಮಂತ್ರಿಗಳು ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ಅವರ ಜೊತೆ ಒಪ್ಪಂದವನ್ನು ಮಾಡಿಕೊಂಡು ಹೆಚ್ಚಿನ ಆದ್ಯತೆ ಆ ಭಾಗದ ಪ್ರದೇಶಗಳಿಗೆ ಕೊಟ್ಟು ಅಲ್ಲಿಯೂ ಸಹ ಹೆಚ್ಚಿನ ಯುವಕ ಯುವತಿಯರು ಶಿಕ್ಷಣ ಕ್ಷೇತ್ರಕ್ಕೆ ಬರುವ ಹಾಗೆ ಕಾರ್ಯಕ್ರಮವನ್ನು ನಮ್ಮ ಇಲಾಖೆಯಿಂದ ನಾವು ಹಾಕುತ್ತಿದ್ದೇವೆ. ನಮ್ಮ ರಾಜ್ಯದಲ್ಲಿ 411 ಸರ್ಕಾರಿ First Grade Colleges ಇವೆ. 321 Aided Colleges ಇವೆ. 54 Privat Aided B.Ed., Colleges ಇವೆ. ತಾಂತ್ರಿಕ ಶಿಕ್ಷಣದಲ್ಲಿ, ರಾಜ್ಯದಲ್ಲಿ 81 Private Polytechnic Colleges ಇವೆ. ಅದೇ ಪ್ರಕಾರ ಸರ್ಕಾರದ 10 Government Engineering Colleges ಇವೆ. ಮತ್ತು 9 Aided Engineering Colleges ಇವೆ ಮತ್ತು 192 Un-aided Engineering Colleges ರಾಜ್ಯದಲ್ಲಿವೆ. ಈ ಇಲಾಖೆಯ ವ್ಯಾಪ್ತಿಯಲ್ಲಿ 17 ವಿಶ್ವವಿದ್ಯಾನಿಲಯಗಳು ಬರುತ್ತವೆ. ಮುಖ್ಯವಾಗಿ ನಮ್ಮ challenge ಏನಿದೆ ಎಂದರೆ ಯಾವರೀತಿಯಿಂದ ಉನ್ನತ ಶಿಕ್ಷಣ ಇಲಾಖೆಯಲ್ಲಿ GER ಹೆಚ್ಚು ಮಾಡಬೇಕು. ಯಾವ ಮಕ್ಕಳಿಗೆ ಇವತ್ತು access ಇಲ್ಲ, ಯಾವ ರೀತಿಯಿದ ಉನ್ನತ ಶಿಕ್ಷಣ ಇಲಾಖೆಯನ್ನು ತಂದು ಅವರಿಗೆ ಶಿಕ್ಷಣದ ಲಾಭ ಮಾಡಿಕೊಡಬೇಕು ಎಂಬುದು ಒಂದು challenge ಆಗಿದೆ. ನಮ್ಮ ಮೂಲಭೂತ ಸೌಕರ್ಯಗಳನ್ನು ಒದಗಿಸಿ ಸುಧಾರಿಸಬೇಕಾಗಿದೆ. ಶಿಕ್ಷಣದ ಗುಣ ಮಟ್ಟವನ್ನು ತರಬೇಕಾಗಿದೆ ಮತ್ತು ರಾಷ್ಟ್ರ ಮಟ್ಟದಲ್ಲಿ ರಾಷ್ಟ್ರ

ಮಟ್ಟದ, ಅಂತರ್ ರಾಷ್ಟ್ರ ಮಟ್ಟದ institutions ಬರಬೇಕಾಗಿದೆ. ಇದನ್ನು ಹೇಳುವಾಗ ನಾನು ಟೀಕೆ ಮಾಡಲಿಕ್ಕೆ ಹೇಳಲಿಲ್ಲ. ನಮ್ಮ ಕೇಂದ್ರದ HRD ಸಚಿವೆ ಒಂದು ಹೇಳಿಕೆ ಕೊಟ್ಟಿದ್ದಾರೆ. ಕರ್ನಾಟಕ ಸರ್ಕಾರ ನಮ್ಮನ್ನು IIT ಬೇಕೆಂದು ಕೇಳಲಿಲ್ಲವೆಂದು ಪತ್ರಿಕೆಯಲ್ಲಿ ಹೇಳಿಕೆ ಕೊಟ್ಟಿದ್ದಾರೆ. ಪ್ರಸ್ತಾವನೆ ಕಳುಹಿಸಿದರೆ ನಾವು ಪರಿಶೀಲಿಸುತ್ತೇವೆಂದು ಇವತ್ತಿನ ಪತ್ರಿಕೆಯಲ್ಲಿದೆ. ನನಗೆ ಬಹಳ ಆಶ್ಚರ್ಯವಾಗುತ್ತದೆ. ಪತ್ರಿಕೆಯಲ್ಲಿ ಅವರ ಹೇಳಿಕೆ ಬಂದ ನಂತರ ತಕ್ಷಣ ನಾನು ಅವರಿಗೆ ಪತ್ರವನ್ನು ಬರೆದಿದ್ದೇನೆ. ಸರ್ಕಾರದಿಂದ 500 ಎಕರೆ free land ಕೊಡುತ್ತೇವೆ ಎಂದು offer ಮಾಡಿದ್ದೇವೆ. ಮಾನ್ಯ ಮುಖ್ಯಮಂತ್ರಿಗಳು ಗೌರವಾನ್ವಿತ ಪ್ರಧಾನ ಮಂತ್ರಿಗಳಿಗೆ ಪತ್ರ ಬರೆದಿದ್ದಾರೆ. ನಾನು ಕೇಂದ್ರ ಸಚಿವರಾಗಿರುವಂತಹ ಮೂವರು ನಮ್ಮ ಕರ್ನಾಟಕದ ಸಚಿವರಿಗೆ ಪತ್ರ ಬರೆದಿದ್ದೇನೆ. ಅವರನ್ನು 8ನೇ ತಾರೀಖಿಗೆ ಭೇಟಿ ಆಗಿ ಬಂದಿದ್ದೇನೆ. ಹಾಗೆ ಯಾವ ಅರ್ಥದಲ್ಲಿ ಅವರು ಹೇಳಿದ್ದಾರೆ ನನಗೆ ಗೊತ್ತಿಲ್ಲ. ಆದರೆ, ಕರ್ನಾಟಕ ನಮ್ಮ ಕಡೆ we are starving for IIT. ಬಹಳ ವರ್ಷಗಳಿಂದ ನಾವು ಪ್ರಯತ್ನ ಮಾಡುತ್ತಿದ್ದೇವೆ. ಹಾಗಾಗಿ records straight ಮಾಡುವುದಕ್ಕೆ ಈ ಒಂದು ವಿಚಾರವನ್ನು ಸದನದಲ್ಲಿ ಪ್ರಸ್ತಾಪ ಮಾಡುತ್ತಿದ್ದೇನೆ. ಮುಖ್ಯವಾಗಿ ಈ ನಮ್ಮ ಗೌರವಾನ್ವಿತ ಸದಸ್ಯರಾದಂತಹ ಮಾನ್ಯ ರಮೇಶ್ ಕುಮಾರ್ ಹಾಗೂ ಮಾನ್ಯ ಅರವಿಂದ ಲಿಂಬಾವಳಿಯವರು ಹೇಳಿದರು. Affordable education ಇರಬೇಕು. ಒಬ್ಬ ವಿದ್ಯಾರ್ಥಿ ಏನು ಅಪೇಕ್ಷೆ ಮಾಡುತ್ತಾನೆ? ಗುಣಮಟ್ಟಣದ ಶಿಕ್ಷಣ ಸಿಗಬೇಕು. Affordable education ಇರಬೇಕು. ಒಬ್ಬ ವಿದ್ಯಾರ್ಥಿ ಏನು ಅಪೇಕ್ಷೆ ಮಾಡುತ್ತಾನೆ? ಗುಣಮಟ್ಟದ ಶಿಕ್ಷಣ ಸಿಗಬೇಕು. Choice of disciplines ಇರಬೇಕು ಮತ್ತು ಶಿಕ್ಷಣ affordable ಇರಬೇಕು. ಶಿಕ್ಷಣವಾದ ನಂತರ ಅವನಿಗೆ ಉದ್ಯೋಗ ಸಿಗಬೇಕು ಅಥವಾ ಅವನು ಸ್ವಯಂ ಉದ್ಯೋಗ ಮಾಡಬೇಕು. ಆ ದಿಕ್ಕಿನಲ್ಲಿ ಇವತ್ತು ನಾವು ಹಲವಾರು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ. ಇವತ್ತು ಮುಖ್ಯವಾಗಿ ಈ ವೃತ್ತಿ ಶಿಕ್ಷಣ ಮತ್ತು Skill development. ಕೇಂದ್ರದಲ್ಲಿ UPA ಸರ್ಕಾರವಿದ್ದಾಗ, HRD Ministry, AICTE ಗಳು ಇದರ ಮೇಲೆ ಸಾಕಷ್ಟು ಒತ್ತನ್ನು ಕೊಟ್ಟಿದ್ದಾರೆ. ಹಾಗೆಯೇ

ನವು ಸಹ 'ನೈಪುಣ್ಯ ನಿಧಿ' ಎಂದು ಒಂದು ಕಾರ್ಯಕ್ರಮವನ್ನು ಜಾರಿಗೆ ತಂದಿದ್ದೇವೆ. Skillಗೆ ಸಂಬಂಧಿಸಿದಂತೆ ಒಬ್ಬ with Geography, History ಮಾಡಿ graduate ಆಗುತ್ತಾನೆ. ಆದರೆ, ಆ ಒಂದು ಶಿಕ್ಷಣದಲ್ಲಿ ಕೆಲವು ಸಲ ಉದ್ಯೋಗ ಸಿಗುವುದು ಕಷ್ಟವೂ ಆಗುತ್ತದೆ. ಆದರೆ, ಕೌಶಲ್ಯವಿದ್ದರೆ, skill ಇದ್ದರೆ ಉದ್ಯೋಗ ಸಿಗುವುದಕ್ಕೆ ಅವಕಾಶವಿದೆ. ಹಾಗಾಗಿ ಇವತ್ತು ನಮ್ಮ ಪಾಲಿಟೆಕ್ನಿಕ್‌ಗಳಲ್ಲಿ, ಡಿಗ್ರಿ ಕಾಲೇಜಿನಲ್ಲಿ ನಾವು skill ಕೊಡುವ ಕಾರ್ಯಕ್ರಮವನ್ನು 'ನೈಪುಣ್ಯ ನಿಧಿ' ಮುಖಾಂತರ ಹಾಕಿಕೊಂಡಿದ್ದೇವೆ. ಇವತ್ತು ಮುಖ್ಯವಾಗಿ ಕಳೆದ ವರ್ಷ ನಾವು 51 ಡಿಗ್ರಿ ಕಾಲೇಜುಗಳನ್ನು ಮಂಜೂರು ಮಾಡಿ, ಈ ವರ್ಷ ಅವುಗಳನ್ನು ಪ್ರಾರಂಭ ಮಾಡಿದ್ದೇವೆ. ಅದರಲ್ಲಿ ಮುಖ್ಯವಾಗಿ 24 ಮಹಿಳಾ ಕಾಲೇಜುಗಳಿವೆ ಮತ್ತು 26 ಕಾಲೇಜುಗಳು colleges ಇವೆ. ತಮ್ಮ ಕ್ಷೇತ್ರಗಳಲ್ಲಿ ಡಿಗ್ರಿ ಕಾಲೇಜುಗಳು ಆಗಬೇಕು ಎನ್ನುವ ಬೇಡಿಕೆಗಳು ಹಲವಾರು ಸದಸ್ಯರುಗಳಿಂದ ಇದೆ. ಆ ಪ್ರಸ್ತಾವನೆಯನ್ನು ಹಣಕಾಸು ಇಲಾಖೆಗೆ ಕಳುಹಿಸಿದ್ದೇವೆ. ಅದನ್ನು ಕ್ಯಾಬಿನೆಟ್‌ಗೆ ತೆಗೆದುಕೊಂಡು ಹೋಗಿ ನಂತರ ಅದರಲ್ಲಿ ತೀರ್ಮಾನವಾಗುತ್ತೆ. ಆದರೆ, ಹಿಂದುಳಿದ ಪ್ರದೇಶದಲ್ಲಿ private institutions, ಒಂದು ಕಾಲದಲ್ಲಿ ಹೋಗಿದ್ದಾರೆ, ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. Bombay-Karnataka area ದಲ್ಲಿ, Hyderabad-Karnataka area ದಲ್ಲಿ private institutions ಗಳು ಹಿಂದುಳಿದ ಪ್ರದೇಶಗಳಲ್ಲೂ ಪ್ರಾರಂಭ ಮಾಡಿದ್ದಾರೆ. ಆದರೆ, ಇವತ್ತು ಹಾಗೆ ಮಾಡುವವರು ಯಾರು? ಯಾವುದೇ ಇಂಜಿನಿಯರಿಂಗ್ ಕಾಲೇಜು ಪ್ರಾರಂಭ ಮಾಡಬೇಕು, ಡಿಪ್ಲೋಮಾ ಕಾಲೇಜು ಪ್ರಾರಂಭ ಮಾಡಬೇಕು, ಡಿಗ್ರಿ ಕಾಲೇಜು ಪ್ರಾರಂಭ ಮಾಡಬೇಕು ಎಂದರೆ ಬೆಂಗಳೂರಿನಲ್ಲಿಯೇ ಮಾಡಬೇಕು ಅಥವಾ ಬೆಳಗಾಂನಲ್ಲಿ ಮಾಡಬೇಕು ಅಥವಾ ಹುಬ್ಬಳ್ಳಿಯಲ್ಲಿ ಮಾಡಬೇಕು. ಹಾಗಾಗಿ ಹಿಂದುಳಿದ ಪ್ರದೇಶದಲ್ಲಿ Education Insitutions ಪ್ರಾರಂಭ ಮಾಡುವ ಜವಾಬ್ದಾರಿ ಸರ್ಕಾರದ ಮೇಲಿದೆ. ಆ ದಿಕ್ಕಿನಲ್ಲಿ ಇವತ್ತು ಸರ್ಕಾರ ಕ್ರಮವನ್ನು ತೆಗೆದುಕೊಳ್ಳುತ್ತಿದೆ. ಅದರಲ್ಲಿ ವಿದ್ಯಾರ್ಥಿಗಳಿಗೆ ಶಿಕ್ಷಣದ ಲಾಭ ಸಿಗಬೇಕು. ಅದರ ಸಲುವಾಗಿ ಈ ವರ್ಷದ ಮುಂಗಡ ಪತ್ರದಲ್ಲಿ ಒಂದು ಘೋಷಣೆಯನ್ನು ಮಾನ್ಯ ಮುಖ್ಯಮಂತ್ರಿಗಳು ಮಾಡಿದರು.

ಏಕೆಂದರೆ, Goernment college ನಲ್ಲಿ ನಮ್ಮ ವಿದ್ಯಾರ್ಥಿಗಳಿಗೆ education free ಇದೆ. ಆದರೆ, aided college ನಲ್ಲಿ ಆ ವ್ಯವಸ್ಥೆ ಇರಲಿಲ್ಲ. ಹಾಗಾಗಿ ಎಲ್ಲಾ aided college ಗಳಲ್ಲಿ ವಿದ್ಯಾರ್ಥಿಗಳು ಇವತ್ತು ಏನೊಂದು fees ಕೊಡಬೇಕಾಗಿದೆಯೋ, ಅದೆಲ್ಲಾ fee ಅನ್ನು ಸರ್ಕಾರ reimburse ಮಾಡುವ ನಿರ್ಣಯ ಮಾಡಿ, ಈ ಬಗ್ಗೆ ಆಜ್ಞೆ ಸಹ ಮಾಡಿದೆ. *Fees*, laboratories ಎಲ್ಲಾ ಸೇರಿ ಅದು ₹ 2,100 ಹಾಗೂ ₹ 2,200 ಗಳು ಆಗಬಹುದು. ಹೆಚ್ಚಿನ ಪ್ರಮಾಣದಲ್ಲಿ ವಿದ್ಯಾರ್ಥಿಗಳು ಕಾಲೇಜಿಗೆ ಬರಬೇಕು, higher education ಲಾಭ ಅವರು ತೆಗೆದುಕೊಳ್ಳಬೇಕು ಎಂಬ ಉದ್ದೇಶದಿಂದ ಈಗಾಗಲೇ ಈ ಬಗ್ಗೆ ಆಜ್ಞೆ ಮಾಡಿ ಆ ಕಾರ್ಯಕ್ರಮವನ್ನು ಸಹ ಜಾರಿಗೆ ತಂದಿದ್ದೇವೆ. ಮುಖ್ಯವಾಗಿ, ಈ ನಮ್ಮ HIV and Leprosy disease parents ಗಳ ಮಕ್ಕಳಿಗೆ free education ಕೊಡಬೇಕು ಎಂದು ಸರ್ಕಾರದಿಂದ ಆದೇಶ ಹೊರಡಿಸಿದ್ದೇವೆ. ಕಳೆದ ಎರಡು ವರ್ಷಗಳಲ್ಲಿ ಡಿಗ್ರಿ ಕಾಲೇಜುಗಳಾಗಲಿ, ಪಾಲಿಟೆಕ್ನಿಕ್ ಆಗಲಿ, CET ಆಗಲಿ, fee ಹೆಚ್ಚು ಮಾಡಲಿಕ್ಕೆ ಅವಕಾಶ ಮಾಡಿಕೊಟ್ಟಿಲ್ಲ. ಏಕೆಂದರೆ, affordable education ಇರಬೇಕು. ನಮಗೆ ಗೊತ್ತು. ನಮ್ಮ Government Degree College ಗಳಲ್ಲಿಯೂ ನಮಗೆ ಒತ್ತಡವಿದೆ. ಆದರೆ, ಸರ್ಕಾರಿ ಕಾಲೇಜುಗಳಿಗೆ ಬರುವಂತಹ ವಿದ್ಯಾರ್ಥಿಗಳೆಲ್ಲಾ mostly ಎಲ್ಲಾ ಬಡ ವಿದ್ಯಾರ್ಥಿಗಳು. ಅವರಿಗೆ ಆರ್ಥಿಕ ಭಾರ ಬೀಳಬಾರದು. ಈಗಾಗಲೇ inflation ಇದೆ. ಆ ತೊಂದರೆ ಅವರಿಗೆ ಆಗಬಾರದು ಎಂದು ನಾವು ಯಾವ fees ಅನ್ನು ನಾವು ನಮ್ಮ institution ನಲ್ಲಿ ಹೆಚ್ಚಳ ಮಾಡಿಲ್ಲ. ನಾನು ಒಪ್ಪಿಕೊಳ್ಳುತ್ತೇನೆ. ನಮ್ಮ ಇಲಾಖೆಯಲ್ಲಿ ಶಿಕ್ಷಕರ ಕೊರತೆಯಿದೆ. ಹಾಗಾಗಿ ಹಿಂದುಳಿದ ಪ್ರದೇಶದಲ್ಲಿ ಮುಖ್ಯವಾಗಿ ಶಿಕ್ಷಕರು ಇದ್ದರೂ ಇಲ್ಲದಿದ್ದರೂ ಸಹ ವಿದ್ಯಾರ್ಥಿಗಳಿಗೆ ತೊಂದರೆಯಾಗಬಾರದು ಎಂದು Guest Lecture ವ್ಯವಸ್ಥೆ ಮಾಡಿದ್ದೇವೆ. EDUSAT Programme ಶುರು ಮಾಡಿದ್ದೇವೆ. Satellite ಮುಖಾಂತರ ನಾವು ಕಾಲೇಜಿನಲ್ಲಿ 1327 ಕಾಲೇಜುಗಳಲ್ಲಿ EDUSAT ಶಿಕ್ಷಣ ಇವತ್ತು ಪ್ರಾರಂಭ ಮಾಡಿದ್ದೇವೆ. ಇದರ ಲಾಭ ಮುಖ್ಯವಾಗಿ ಹಿಂದುಳಿದ ಪ್ರದೇಶದ ವಿದ್ಯಾರ್ಥಿಗಳಿಗೆ ಆಗುತ್ತಿದೆ. ಈ ಕಾರ್ಯಕ್ರಮದಲ್ಲಿ ಇನ್ನೂ

ಸುಧಾರಣೆಯಾಗಬೇಕಿದೆ. ಇನ್ನೂ ಬಾಕಿ ಉಳಿದ ಕಾಲೇಜುಗಳಿಗೆ ಇದನ್ನು ವಿಸ್ತರಿಸಬೇಕಾಗಿದೆ. ಇಲ್ಲಿಯೇ ಬೆಂಗಳೂರಿನಲ್ಲಿರುವ ಸ್ಟುಡಿಯೋದಿಂದ ಏನು ಶಿಕ್ಷಣ ಕಲಿಸುತ್ತಾರೋ, ಅದನ್ನು ಅಲ್ಲಿರುವ ಕಾಲೇಜುಗಳ ಮಕ್ಕಳು ಕಲಿಯಬಹುದು. ಹಾಗಾಗಿ ಈ ಕಾರ್ಯಕ್ರಮವನ್ನು ಕ್ರಮೇಣ ಎಲ್ಲಾ ಕಾಲೇಜುಗಳಿಗೆ ಮುಟ್ಟಿಸುತ್ತೇವೆ. ಈಗಾಗಲೇ 61 ಪಾಲಿಟೆಕ್ನಿಕ್‌ಗಳಲ್ಲಿ ಇದನ್ನು ಪ್ರಾರಂಭ ಮಾಡಿದ್ದೇವೆ ಮತ್ತು ಬರುವ ನವೆಂಬರ್ ಒಳಗಾಗಿ ಎಲ್ಲಾ ನಮ್ಮ Government Polytechnic ಗಳಲ್ಲಿ EDUSAT education ಪ್ರಾರಂಭ ಮಾಡುತ್ತೇವೆ. ಇವತ್ತು Tele-Education ಸಹಿತ ಪ್ರಾರಂಭ ಮಾಡಬೇಕೆಂಬ ಪ್ರಸ್ತಾವನೆ ಸರ್ಕಾರದ ಮುಂದೆ ಇದೆ. ಅಂದರೆ teacher and student interaction ಆಗಬೇಕು. ಪ್ರಶ್ನೋತ್ತರವಾಗಬೇಕು ಎಂದು ಪ್ರಸ್ತಾವನೆಯಿದೆ. ಮೊದಲನೇ ಹಂತದಲ್ಲಿ ನಿಮ್ಮ ದಲ್ಲಿಯೇ ಅದನ್ನು ಪ್ರಾರಂಭ ಮಾಡಬೇಕೆಂದು ನಾವು ಕ್ರಮ ತೆಗೆದುಕೊಳ್ಳುತ್ತಿದ್ದೇವೆ. ಇವತ್ತು ಕೇಂದ್ರ ಸರ್ಕಾರ Engineering, Medical, Dental ನಂತಹ professional colleges ಗಳಲ್ಲಿ ಬಡ ವಿದ್ಯಾರ್ಥಿಗಳು ಮುಖ್ಯವಾಗಿ ಹಣವಿಲ್ಲವೆಂದು ಶಿಕ್ಷಣದಿಂದ ವಂಚಿತರಾಗಬಾರದು ಎಂಬ ಉದ್ದೇಶದಿಂದ ರಾಷ್ಟ್ರೀಕೃತ ಬ್ಯಾಂಕುಗಳ ಮುಖಾಂತರ ಸಾಲ ಕೊಡುವ ಒಂದು ಕಾರ್ಯಕ್ರಮವನ್ನು ಜಾರಿಗೆ ತರಲಾಗಿದೆ. ಅದರ ಬಡ್ಡಿ ಕೇಂದ್ರ ಸರ್ಕಾರ ಕೊಡುತ್ತದೆ. ಅದೇ ಪ್ರಕಾರ ಕಳೆದ ವರ್ಷ ಕೊನೆಯಲ್ಲಿ ಈ ಆಜ್ಞೆಯಾದರೂ ಸಹ Rajiv Gandhi Loans Scholarship Scheme ಅನ್ನು ಜಾರಿಗೆ ತಂದಿದ್ದೇವೆ. B.A., B.Com., B.Sc., M.A., M.Com., ಯಾವ ವಿದ್ಯಾರ್ಥಿಗಳಿಗೆ ಹಾಸ್ಟೆಲ್ ಬಗ್ಗೆ, fees ಬಗ್ಗೆ ಸಾಲ ಬೇಕಾಗಿದೆಯೋ, ಅದನ್ನು ಬ್ಯಾಂಕ್ ಮುಖಾಂತರ ಮಂಜೂರು ಮಾಡಿ ಆ ವಿದ್ಯಾರ್ಥಿಗಳು ಏನು ಸಾಲ ಪಡೆದುಕೊಳ್ಳುತ್ತಾರೋ, ಅದರ ಮೇಲೆ ಇದ್ದ ಬಡ್ಡಿ ಸರ್ಕಾರ reimburse ಮಾಡುತ್ತದೆ.

(ಈ ಹಂತದಲ್ಲಿ ಸಭಾಧ್ಯಕ್ಷರಾದ ಶ್ರೀ ಕಾಗೋಡು ತಿಮ್ಮಪ್ಪರವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ನನಗೆ ಅನಿಸುತ್ತದೆ ಕರ್ನಾಟಕದಲ್ಲಿ ಇದನ್ನು ಮೊದಲನೇ ಬಾರಿ basic discipline ನಲ್ಲಿ ಒಂದು ಕಾರ್ಯಕ್ರಮವನ್ನು ನಾವು ಜಾರಿಗೆ ತಂದಿದ್ದೇವೆ. ಮುಖ್ಯವಾಗಿ ಮೊನ್ನೆ ರಮೇಶ್ ಕುಮಾರ್‌ರವರು ಒಂದು ಪ್ರಶ್ನೆ ಕೇಳಿದರು. ನಿಮ್ಮ ಡಿಗ್ರಿ ಕಾಲೇಜುಗಳಲ್ಲಿ, ನಿಮ್ಮ ಪಾಲಿಟೆಕ್ನಿಕ್‌ಗಳಲ್ಲಿ infrastructure ಬಗ್ಗೆ *mapping* ಮಾಡಿದ್ದೀರಾ ಎಂದು ಕೇಳಿದರು. ಆ ತರಹದ ಒಂದು budget report ತಯಾರು ಮಾಡಿದ್ದೀರಾ ಎಂದು ಕೇಳಿದರು. 'ಹೌದು', ನಾವು ತಯಾರು ಮಾಡಿದ್ದೇವೆ. ಗೌರವಾನ್ವಿತ ಮುಖ್ಯಮಂತ್ರಿಗಳು ನಮ್ಮ ಇಲಾಖೆಯನ್ನು review ಮಾಡುವಾಗ 633 ಕೋಟಿ ರೂಪಾಯಿಗಳ ಬೇಡಿಕೆಯನ್ನು ಹಣಕಾಸು ಇಲಾಖೆಯ ಮುಂದಿಟ್ಟಿದ್ದೆವು ನಮ್ಮ ಎಲ್ಲಾ ಸರ್ಕಾರಿ ಕಾಲೇಜುಗಳಲ್ಲಿ ಒಳ್ಳೆಯ ಕಟ್ಟಡವಾಗಬೇಕು, ಒಳ್ಳೆಯ laboratory ಆಗಬೇಕು, hotel ಗಳು ಆಗಬೇಕೆಂಬ ಪ್ರಸ್ತಾವನೆ ಇವತ್ತು ಹಣಕಾಸು ಇಲಾಖೆಯ ಮುಂದಿದ್ದು, ಅವರು ಪರಿಶೀಲಿಸುತ್ತಿದ್ದಾರೆ. ಇವತ್ತು ಶಿಕ್ಷಣ ಇಲಾಖೆಗೆ ತನ್ನದೇ ಆದ ಒಂದು quality education ಕಡ್ಡಾಯವಿಲ್ಲ. ಅದಕ್ಕೋಸ್ಕರ ಮಾನ್ಯ ಮುಖ್ಯಮಂತ್ರಿಗಳು ಅಡಿಗಲ್ಲು ಹಾಕಿದ್ದಾರೆ. ಇವತ್ತು ಮುಖ್ಯವಾಗಿ ನಮ್ಮ ಶಿಕ್ಷಣ ಇಲಾಖೆಯಲ್ಲಿ ಹಲವಾರು ಮೂಲಭೂತ ಸೌಕರ್ಯಗಳನ್ನು ನಿರ್ಮಾಣ ಮಾಡುವ ಬಗ್ಗೆ ಕಾರ್ಯಕ್ರಮ ನಡೆಯುತ್ತಿದೆ. ಮುಖ್ಯವಾಗಿ 42 ಹೊಸ building ಗಳಿಗೆ ಮಂಜೂರು ಕೊಟ್ಟಿದ್ದೇವೆ. ಎರಡು complete ಆಗಿದ್ದು, 36 progress ನಲ್ಲಿವೆ, ನಾಲ್ಕು ಕಡೆ ಇನ್ನೂ ಕಾಮಗಾರಿ ಪ್ರಾರಂಭವಾಗಬೇಕಾಗಿದೆ. 166 additional class rooms ಮಂಜೂರು ಮಾಡಿದ್ದೇವೆ. 2013–14ನೇ ಸಾಲಿನ ಬಗ್ಗೆ ಹೇಳುತ್ತಿದ್ದೇನೆ. 2014–15ನೇ ಸಾಲಿನಲ್ಲಿ ಕೂಡ ಮಾಡಬೇಕು. 108 laboratories ನಡೆಯುತ್ತಿವೆ. ಈಗಾಗಲೇ 24 complete ಆಗಿವೆ, 70 progress ನಲ್ಲಿವೆ, 200 ಶೌಚಾಲಯಗಳಲ್ಲಿ ಈಗಾಗಲೇ 151 complete ಆಗಿದ್ದು, ಬಾಕಿ progress ನಲ್ಲಿವೆ. ಅದೇ ಪ್ರಕಾರ ನಮ್ಮ Government Polytechnic ನಲ್ಲಿ 53 ಕಾಲೇಜುಗಳಿಗೆ ತನ್ನದೇ ಆದ ಕಟ್ಟಡಗಳಿವೆ. ಬಾಕಿ ಉಳಿದ Polytechnic ಕಟ್ಟಡಗಳಿಗೆ infrastructure ಅನ್ನು ಮಂಜೂರು ಮಾಡಿದ್ದೇವೆ. ಈಗಾಗಲೇ ಇದನ್ನು ನಬಾರ್ಡ್‌ನಲ್ಲಿ ತೆಗೆದುಕೊಂಡಿದ್ದೇವೆ. 2013–14ನೇ ಸಾಲಿನಲ್ಲಿ

ಸಾಧಾರಣ 18 Polytechnic ಕೆಲಸ ಪ್ರಾರಂಭವಾಗಿದೆ. ಈಗ ಪ್ರಾರಂಭವಾಗಬೇಕಾದ ನಬಾರ್ಡ್‌ನಲ್ಲಿ 58.80 ಅಂದರೆ 59 ಕೋಟಿ ರೂಪಾಯಿಗಳ ಹಣವನ್ನು ನಬಾರ್ಡ್‌ನಿಂದ ಪಡೆದುಕೊಂಡಿದ್ದೇವೆ. 57 ಮಹಿಳಾ ಹಾಸ್ಟೆಲ್‌ಗಳು MHRD ಸಹಾಯದಿಂದ ಕೆಲಸ ಪ್ರಾರಂಭವಾಗಿದೆ. ಈಗಾಗಲೇ 18 ಹಾಸ್ಟೆಲ್ ಕಾಮಗಾರಿ ಮುಗಿದಿದೆ. ಮುಖ್ಯವಾಗಿ Special Component Programme ನಲ್ಲಿ ಮತ್ತು TSP ಯಲ್ಲಿ ನಮ್ಮ ಇಲಾಖೆಗೆ ಇವತ್ತೇನು allocation ಬಂತು ಅದು ಬೇರೆ ಬೇರೆ ರೀತಿಯಲ್ಲಿ ಖರ್ಚಾಗುತ್ತಿತ್ತು. ಬಹಳಷ್ಟು ಕಡೆ ನಮಗೆ ಲೆಕ್ಕ ಕೂಡ ಸಿಗುತ್ತಿರಲಿಲ್ಲ. ಹಾಗಾಗಿ ಒಂದು permanent asset create ಮಾಡಬೇಕು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ಮಕ್ಕಳಿಗೆ ಇದೊಂದು ಸಹಾಯವಾಗಬೇಕೆಂದು ಹೇಳಿ 44 ಹಾಸ್ಟೆಲ್‌ಗಳು ನಮ್ಮ Government Polytechnic ನಲ್ಲಿ 2013–14ನೇ ಸಾಲಿನಲ್ಲಿ ಮಂಜೂರು ಮಾಡಿದ್ದೇವೆ. Degree College ನಲ್ಲಿ 51 ಹಾಸ್ಟೆಲ್‌ಗಳನ್ನು ಮಂಜೂರು ಮಾಡಿದ್ದೇವೆ. Degree College and Polytechnic College ಗಳಲ್ಲಿ 97 ಹಾಸ್ಟೆಲ್‌ಗಳನ್ನು ಒಂದು ಹಾಸ್ಟೆಲ್‌ಗೆ ಒಂದು ಕೋಟಿ ರೂಪಾಯಿಗಳಂತೆ ಒಟ್ಟು 97 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಮಂಜೂರು ಮಾಡಿದ್ದು, ಈಗಾಗಲೇ ಹಲವಾರು ಕಡೆ ಕಾಮಗಾರಿ ಕೆಲಸ ಪ್ರಾರಂಭವಾಗಿದೆ. Polytechnic College ನಲ್ಲಿ ಬಾಕಿ ಉಳಿದ ಹಾಸ್ಟೆಲ್‌ಗಳನ್ನು ಎಲ್ಲೆಲ್ಲಿ ಜಾಗ ಲಭ್ಯವಿದೆ ಅಲ್ಲೆಲ್ಲಾ ಕ್ರಮೇಣವಾಗಿ ಹಾಸ್ಟೆಲ್‌ಗಳನ್ನು ಮಂಜೂರು ಮಾಡುತ್ತೇವೆ. ಹಳ್ಳಿಯಿಂದ ಬರುವ ವಿದ್ಯಾರ್ಥಿಗಳು ಈ ಹಾಸ್ಟೆಲ್ ಲಾಭವನ್ನು ಪಡೆಯುವುದಕ್ಕೆ ಸಾಧ್ಯವಾಗುತ್ತದೆ.

ಶ್ರೀ ಕೆ.ಶಿವಮೂರ್ತಿ:– ಮಾನ್ಯ ಸಚಿವರೆ TSP ಬಗ್ಗೆ ಹೇಳಿ. Scheduled Caste ಬಗ್ಗೆ ಹೇಳಿದ್ದೀರಿ, Scheduled Tribe ಬಗ್ಗೆ ಹೇಳಿ.

ಶ್ರೀ ಆರ್.ವಿ.ದೇಶಪಾಂಡೆ:– SCP ಮತ್ತು Scheduled Tribe ಬಗ್ಗೆ ಹೇಳಿದ್ದೇನೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಬಗ್ಗೆ ಹೇಳಿದ್ದೇನೆ.

ಶ್ರೀ ಕೆ.ಶಿವಮೂರ್ತಿ:– ಒಟ್ಟಿಗೆ ಸೇರಿಸಿ ಹೇಳಿದ್ದೀರಿ, ಬೇರೆ ಬೇರೆ ಹೇಳಿಲ್ಲ.

ಶ್ರೀ ಆರ್.ವಿ.ದೇಶಪಾಂಡೆ:- ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡವನ್ನು ಏಕೆ ಬೇರೆ ಬೇರೆ ಮಾಡಬೇಕು? Government hostel ನಲ್ಲೂ ಕೂಡ ಕೆಲವು percentage Backward Class ಗಳಿಗೂ ಅವಕಾಶ ಮಾಡಿಕೊಡುತ್ತಾರೆ. ಎಲ್ಲಾ ಮಕ್ಕಳು ಒಂದು ಕಡೆಯಿರಬೇಕು ನಾವು ಕೂಡ ವಿಚಾರ ಮಾಡುತ್ತಿದ್ದೇವೆ. ಮುಖ್ಯವಾಗಿ Degree College ನಲ್ಲಿ ಹಲವಾರು ಕಡೆ ಕಟ್ಟಡಗಳನ್ನು ಕಟ್ಟುವುದಕ್ಕೆ 121 ಕೋಟಿ ರೂಪಾಯಿಗಳ ಪ್ರಸ್ತಾವನೆಯನ್ನು ನಬಾರ್ಡ್‌ಗೆ ಕಳುಹಿಸಿದ್ದೇವೆ. ಮೈಸೂರಿನ ಮಹಾರಾಣಿ ಕಾಲೇಜಿನಲ್ಲಿ ಸುಮಾರು 7000 ಕ್ಕೂ ಮೇಲ್ಪಟ್ಟು ವಿದ್ಯಾರ್ಥಿ-ವಿದ್ಯಾರ್ಥಿನಿಯರು ವ್ಯಾಸಂಗ ಮಾಡುತ್ತಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಅಲ್ಲಿ ಕಾಲೇಜು ಕಟ್ಟಡ, ಹಾಸ್ಟೆಲ್ ನಿರ್ಮಾಣಕ್ಕೆ ಮುಂಗಡ ಪತ್ರದಲ್ಲಿ ಅನುಮತಿ ಕೊಟ್ಟಿದ್ದು, ಈಗಾಗಲೇ ಹಣಕಾಸು ಇಲಾಖೆಯಿಂದ ಕೂಡ ಅನುಮತಿಯನ್ನು ಪಡೆದುಕೊಂಡು ಆದಷ್ಟು ಬೇಗ 8-10 ದಿವಸಗಳಲ್ಲಿ ಆ ಕೆಲಸವನ್ನು 60-70 ಕೋಟಿ ರೂಪಾಯಿಗಳ ಅಂದಾಜು ವೆಚ್ಚದಲ್ಲಿ ಈ ಕಾಮಗಾರಿಯನ್ನು ಪ್ರಾರಂಭ ಮಾಡುತ್ತಿದ್ದು, ಅದಕ್ಕೆ ಮಂಜೂರಾತಿ ಸಿಗುತ್ತಿದೆ. ಮಾನ್ಯ ಅರವಿಂದ ಲಿಂಬಾವಳಿಯವರು ಮತ್ತು ಮಾನ್ಯ ರಮೇಶ್ ಕುಮಾರ್‌ರವರು ಈ ವಿಷಯವನ್ನು ಪ್ರಸ್ತಾಪ ಮಾಡಿದ್ದರು. ಆದರೆ ಅರವಿಂದ ಲಿಂಬಾವಳಿಯವರು ಇಲ್ಲಿಲ್ಲ. ನಮ್ಮ ಇಲಾಖೆಯಲ್ಲಿ ಒಟ್ಟು sanctioned posts 7505 ಇವೆ. 5598 ಶಿಕ್ಷಕರು ಕೆಲಸ ಮಾಡುತ್ತಿದ್ದಾರೆ. 1685 ಹುದ್ದೆಗಳು ಖಾಲಿಯಿವೆ. ಅದರಲ್ಲಿ ಈಗಾಗಲೇ 1298 ಖಾಲಿ ಹುದ್ದೆಗಳನ್ನು fill-up ಮಾಡುವುದಕ್ಕೆ ಆರ್ಥಿಕ ಇಲಾಖೆಯಿಂದ approval ಸಿಕ್ಕಿದೆ. ಎರಡೂ ಮನೆಗಳಲ್ಲಿ KPSC ಮೂಲಕ ಈ recruitment ಮಾಡಬಾರದು, CET ಮೂಲಕ ಮಾಡಬೇಕೆಂದು ಹೇಳಿದಾಗ C & R rules ಅನ್ನು amend ಮಾಡುತ್ತಿದ್ದೇನೆ. Amend ಮಾಡಿದ ನಂತರ ಆದಷ್ಟು ಬೇಗ ಈ recruitment ಅನ್ನು ನಾವು ಪ್ರಾರಂಭ ಮಾಡುತ್ತೇವೆ. ಅದರ ನಂತರ 3363 posts ಇನ್ನೂ sanction ಆಗಬೇಕಾಗಿದೆ. ಹೊಸ ಹೊಸ ಕಾಲೇಜುಗಳೇನು ಪ್ರಾರಂಭವಾಗಿದೆ ಅದರ ಪ್ರಸ್ತಾವನೆಯನ್ನು ಆರ್ಥಿಕ ಇಲಾಖೆಗೆ ಕಳುಹಿಸುತ್ತಿದ್ದೇನೆ. ಮುಖ್ಯವಾಗಿ Government Engineering College ಗಳಲ್ಲಿ 646 sanctioined teaching

posts ಇವೆ, 366 faculties ಈಗಾಗಲೇ ಕಾರ್ಯನಿರ್ವಹಿಸುತ್ತಿದ್ದಾರೆ, 285 ಖಾಲಿಯಿವೆ ಈ ಎಲ್ಲಾ ಹುದ್ದೆಗಳನ್ನು ತುಂಬುವ ಕೆಲಸ ನಮ್ಮ Vishwesharaiah Technological University ಮುಖಾಂತರ ಆಗುತ್ತಿದೆ. ಅದೇ ಪ್ರಕಾರ aide Engineer College ಗಳಲ್ಲಿ 978 sanctioned teaching posts ಇವೆ, 701 post fill-up ಆಗಿದೆ. 170 posts ಖಾಲಿಯಿವೆ. ಮುಂದಿನ ದಿನಗಳಲ್ಲಿ ಈ post ಗಳನ್ನು ತುಂಬುವ ಬಗ್ಗೆ ಕೂಡ ಸರ್ಕಾರ ಕ್ರಮ ಕೈಗೊಳ್ಳುತ್ತದೆ. ಅದೇ ಪ್ರಕಾರ Polytechnics ಗಳಲ್ಲಿ 2209 sanctioned posts ನಲ್ಲಿ ತುಂಬಬೇಕಾಗಿದೆ.

ಶ್ರೀ ಕೆ.ಆರ್.ರಮೇಶ್ ಕುಮಾರ್:- ಮಾನ್ಯ ಸಚಿವರೆ, I am sorry to disturb you. Viswheshwaraiah Technological University Syndicate Meeting ನಲ್ಲಿ ಏನಾಗಿದೆಯೆಂಬ ಒಂದು proceedings ಅನ್ನು ತರಿಸಿಕೊಳ್ಳಿ. Certain faculties ನಲ್ಲಿ where there are not even 20 students recruitment has gone up to 80 for teaching staffs. 20 ಜನ ವಿದ್ಯಾರ್ಥಿಗಳಿರುವ ಕಡೆ 80 ಜನ ಹಾಗೂ ಇನ್ನೂ ಜಾಸ್ತಿ recruitment ಮಾಡಿಕೊಂಡಿದ್ದಾರೆ. This has been very seriously debated in the meetings of the very seriously debated in the meetings of the very academic bodies of the Vishweshwaraiah Technological University. Whey people do this we don't understand. They have obtained the approval of the Government also. Kindly get the information through your officers. How much of recruitment has been done? How may people have been taken in? ಆ faculty ಗೆ necessity ಎಷ್ಟು ಇತ್ತು? Students ಎಷ್ಟು ಇದ್ದಾರೆ? Is it correct ಎಂದು ತಿಳಿದುಕೊಳ್ಳಿ. Because ಇನ್ನೂ time ಇದೆ. He is replying.

ಶ್ರೀ ಆರ್.ವಿ.ದೇಶಪಾಂಡೆ:- ಗೌರವಾನ್ವಿತ ಸದಸ್ಯರೇನು ಪ್ರಸ್ತಾಪ ಮಾಡಿದ್ದಾರೆ ಆ information ತಂದು ಅವರ ಗಮನಕ್ಕೆ ತರುತ್ತೇನೆ. ಆ ರೀತಿಯೇನಾದರೂ ಇದ್ದಲ್ಲಿ, we will definetly take action also.

ಮುಖ್ಯವಾಗಿ, ಅದೇ ಪ್ರಕಾರ Polytechnics ನಲ್ಲಿ ಸಾಧಾರಣ 656 posts ಖಾಲಿಯಿದ್ದು, 154 posts ಗಳನ್ನು KPSC ಯಿಂದ ತುಂಬಬೇಕೆಂಬ ಪ್ರಸ್ತಾವನೆಯನ್ನು ಈಗಾಗಲೇ KPSC ಗೆ ಕಳುಹಿಸಿದ್ದೇವೆ. ಅದರ ಪ್ರಕಾರ aided polytechnics ನಲ್ಲಿ 1309 teaching posts ಇದ್ದು, 1025 posts filled up ಇವೆ, 234 vacant ಇವೆ. ಈ details ಅನ್ನು ಏಕೆ ಹೇಳುತ್ತಿದ್ದೇನೆಂದರೆ ಹಲವಾರು ಸದಸ್ಯರು ಈ ಬಗ್ಗೆ ಚಿಂತನೆ ಮಾಡಿದ್ದಾರೆ, ಆದಷ್ಟು ಬೇಗ ಈ ಹುದ್ದೆಗಳನ್ನು ತುಂಬಬೇಕೆಂದು ಒತ್ತಾಯ ಮಾಡಿರುವ ಹಿನ್ನೆಲೆಯಲ್ಲಿ detail ಆಗಿ ಎಷ್ಟು ಖಾಲಿ ಹುದ್ದೆಗಳಿವೆ, ಎಷ್ಟು ಇವೆ ಇದರಲ್ಲಿ ಪಾರದರ್ಶಕತೆ ಇರಬೇಕು ಹಾಗೂ ಪ್ರತಿ ಸದಸ್ಯರಿಗೂ ಗೊತ್ತಾಗಬೇಕೆಂದು ಬಹಳ detail ಆಗಿ ಇದರ ಬಗ್ಗೆ ಹೇಳುತ್ತಿದ್ದೇನೆ. ಮುಖ್ಯವಾಗಿ non-teaching ಬಗ್ಗೆ ಹೇಳಬೇಕೆಂದರೆ economy branches ನಲ್ಲಿ ಸಾಕಷ್ಟು ಖಾಲಿ ಹುದ್ದೆಗಳಿವೆ ಇದನ್ನು ನಾನು ಒಪ್ಪಿಕೊಳ್ಳುತ್ತೇನೆ. ಮುಖ್ಯವಾಗಿ 5184 ರಲ್ಲಿ 2420 ಜನ ಅಷ್ಟೇ ಕೆಲಸ ಮಾಡುತ್ತಿದ್ದಾರೆ. 2763 ಖಾಲಿಯಿವೆ. ಮಾನ್ಯ ಉಪಾಧ್ಯಕ್ಷರೆ ಒಂದು ಮಾತನ್ನು ತಮ್ಮ ಗಮನಕ್ಕೆ ತರುತ್ತೇನೆ. Legacy ನಾವು regenerate ಮಾಡುತ್ತಿದ್ದೇವೆ ಇದು ಇವತ್ತಿನ ಪ್ರಶ್ನೆಯಲ್ಲ. ಇದಕ್ಕೆ ನಾನು ಜವಾಬ್ದಾರಿಯಿದ್ದೇನೆ. ನಾವು ಶಾಸನ ಸಭೆಯಲ್ಲಿ ಸುಮಾರು 27 ವರ್ಷಗಳಿಂದ ಕೆಲಸ ಮಾಡುತ್ತಿದ್ದೇನೆ. ಇದು ಇವತ್ತು ನಿರ್ಮಾಣವಾದ legacy ಅಲ್ಲ, ಇವತ್ತು ನಿರ್ಮಾಣವಾದ ಸಮಸ್ಯೆಗಳು ಇವಲ್ಲ ಅಥವಾ ಒಂದು ವರ್ಷದಲ್ಲಿ ಈ ಜನಾಂಗದ ಹುದ್ದೆಗಳು ಖಾಲಿಯಾಗಿಲ್ಲ. ಹಲವಾರು ವರ್ಷಗಳಿಂದ non-teaching posts ಗಳನ್ನು ತುಂಬಿಲ್ಲ ಹಾಗೂ faculty ಗಳನ್ನು ಕೂಡ ತೆಗೆದುಕೊಂಡಿಲ್ಲ. ಆರ್ಥಿಕ ಇಲಾಖೆಯಿಂದ out sourcing ಮುಖಾಂತರ 347 ಗ್ರೂಪ್ ಡಿ ಹುದ್ದೆಗಳನ್ನು, 88 Data entry operatorsಗೆ ಅನುಮತಿ ಪಡೆದುಕೊಂಡಿದ್ದೇನೆ. ನಿನ್ನೆ ಮದ್ದೂರು ಶಾಸಕರಾದ ಶ್ರೀ ತಿಮ್ಮಣ್ಣನವರು ಶಿಕ್ಷಣ ಇಲಾಖೆಯ ಬೇಡಿಕೆಯ ಮೇಲೆ ಮಾತನಾಡುವ ಸಂದರ್ಭದಲ್ಲಿ ತಮ್ಮ ಮದ್ದೂರು ಕಾಲೇಜಿಗೆ ಡಿ ಗ್ರೂಪ್ ನೌಕರರು ಇಲ್ಲವೆಂದು ಪ್ರಸ್ತಾಪ ಮಾಡಿದ್ದರು. ಆದಕಾರಣ ಯಾವ್ಯಾವ ಕಾಲೇಜಿನಲ್ಲಿ

ಡಿ ಗ್ರೂಪ್ ನೌಕರರು ಮತ್ತು data entry operators ಇಲ್ಲವೋ ಅದನ್ನು ಭರ್ತಿ ಮಾಡುವ ಕೆಲಸವನ್ನು ಸರ್ಕಾರ ಮಾಡುತ್ತದೆ.

ಮಾನ್ಯ ಸದಸ್ಯರುಗಳಾದ ಶ್ರೀ ರುದ್ರಪ್ಪ ಲಮಾಣಿ ಮತ್ತು ಇನ್ನೂ ಹಲವು ಸದಸ್ಯರುಗಳು Aided collegeಗಳಲ್ಲಿ vacancy ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. Aided colleges ನಲ್ಲಿ ನಿವೃತ್ತಿ, ರಾಜೀನಾಮೆ, ನಿಧನದಿಂದ 3,900 ಪೋಸ್ಟ್‌ಗಳು vacant ಇವೆ. 2003ನೇ ಇಸವಿಯಿಂದ ಬ್ಯಾಕ್‌ಲಾಗ್ ಪೋಸ್ಟ್‌ಗಳನ್ನು ತುಂಬುತ್ತಿದ್ದು, ಅದರಲ್ಲಿ ಯಾವುದೇ ರೀತಿಯ ಪ್ರಶ್ನೆಯಿಲ್ಲ. ಆದರೆ, 3,900 ಪೋಸ್ಟ್‌ಗಳು ಖಾಲಿಯಿದ್ದು, ಇದರಿಂದ ವಿದ್ಯಾರ್ಥಿಗಳ ವಿದ್ಯಾಭ್ಯಾಸದ ಮೇಲೆ ಸಾಕಷ್ಟು ದುಷ್ಪರಿಣಾಮಗಳುಂಟಾಗುತ್ತಿದೆ. ಈ ಪೋಸ್ಟ್‌ಗಳನ್ನು ಭರ್ತಿ ಮಾಡುವಂತೆ ಮೇಲ್ಮನೆ ಹಾಗೂ ಈ ಮನೆಯ ಸಾಕಷ್ಟು ಶಾಸಕರುಗಳು ಬಂದು ಮನವಿ ಮಾಡಿಕೊಂಡಿರುತ್ತಾರೆ. ಅಷ್ಟೇ ಅಲ್ಲದೆ ಈ ವಿಷಯವನ್ನು ಸದನದಲ್ಲಿಯೂ ಸಹ ಪ್ರಸ್ತಾಪ ಮಾಡಿರುತ್ತೀರಿ. ಹಾಗಾಗಿ ಸರ್ಕಾರ ನನ್ನದೇ ಅಧ್ಯಕ್ಷತೆಯಲ್ಲಿ Grant ನ ವಿಚಾರದಲ್ಲಿ ಒಂದು ಸಮಿತಿಯನ್ನು ರಚನೆ ಮಾಡಿದೆ. ಅದರಲ್ಲಿ ಈ ಪ್ರಸ್ತಾಪ ಸೇರಿಕೊಂಡಿದೆ. ಕ್ರಮೇಣವಾಗಿ ಸರ್ಕಾರದ ಇತಿಮಿತಿಯೊಂದಿಗೆ aided collegen ನಲ್ಲಿರುವ ಪೋಸ್ಟ್‌ಗಳನ್ನು ತುಂಬುವುದಕ್ಕೆ ಎಷ್ಟು ಸಾಧ್ಯವೋ ಅಷ್ಟನ್ನು ಅನುಮತಿ ನೀಡುತ್ತೇವೆ. SC/ST ಗಳಿಗೂ ಬ್ಯಾಕ್‌ಲಾಗ್ ಕೊಡುತ್ತಿದ್ದೇವೆ.

ಶ್ರೀ ಕೆ.ಶಿವಮೂರ್ತಿ:- ಎಸ್.ಸಿ./ಎಸ್.ಟಿ. ಮ್ಯಾನೇಜ್‌ಮೆಂಟ್ ಇರುವಂತಹ ಕಾಲೇಜ್‌ಗಳಿಗೆ economy measures ಹಾಕಿರುತ್ತಾರೆ.

ಶ್ರೀ ಆರ್.ವಿ.ದೇಶಪಾಂಡೆ:- ಎಸ್.ಸಿ./ಎಸ್.ಟಿ. ಗೆ ಯಾವುದೇ ಎಕಾನಮಿ ಮೆಷರ್ ಇಲ್ಲ. ಇದರಲ್ಲಿ ಬ್ಯಾಕ್‌ಲಾಗ್ ಎಷ್ಟೋ ಫೈಲ್ಸ್ ಅನ್ನು ಕ್ಲಿಯರ್ ಮಾಡಿದ್ದೇವೆ.

ಶ್ರೀ ಎನ್.ಹೆಚ್.ಕೋನರೆಡ್ಡಿ:- ತಾವು ಹೇಳಿರುವ ವಿಷಯ ಬಹಳ ಪ್ರಮುಖವಾಗಿರುವುದರಿಂದ ಅದನ್ನೂ ಇಂಪ್ಲಿಮೆಂಟ್ ಜವಾಬ್ದಾರಿಯೂ ಸಹ

ತಾವೇ ತೆಗೆದುಕೊಳ್ಳಬೇಕು. ಇದರಲ್ಲಿ ಬಹಳ ಗಂಭೀರತೆಯಿದೆ. ಶಿಕ್ಷಣದಿಂದ ವಂಚಿತರಾಗುತ್ತಿದ್ದಾರೆ.

ಉಪಾಧ್ಯಕ್ಷರು:– ಮಾನ್ಯ ಸಚಿವರು ಉತ್ತರ ಹೇಳಲಿ.

ಶ್ರೀ ಆರ್.ವಿ.ದೇಶಪಾಂಡೆ:– ಪರಿಶಿಷ್ಟ ಜಾತಿ/ಪಂಗಡದ ಬ್ಯಾಕ್‌ಲಾಗ್ vacancies ಅನ್ನು ಭರ್ತಿ ಮಾಡುವುದಕ್ಕೆ ಯಾವುದೇ ತರಹದ ನಿರ್ಬಂಧವಿಲ್ಲ. Aided College ಗಳಲ್ಲಿ ಬೇರೆ ಕೆಟಗರಿಗೆ ನಿರ್ಬಂಧವಿದೆ. Vacancies ಇಷ್ಟು ಇವೆ ಎಂದು ನಾನು ಹೇಳಿದೆ.

ಶ್ರೀ ಕೆ.ಶಿವಮೂರ್ತಿ:– ಹಣ ಕೊಡಲಿಕ್ಕೆ ನಿರ್ಬಂಧವಿದೆಯೇ? Starting grant ಕೊಡುತ್ತೀರಾ?

ಶ್ರೀ ಆರ್.ವಿ.ದೇಶಪಾಂಡೆ:– Starting grant ಕೊಡುವುದು ಬೇರೆ. 1987ರವರೆಗೆ ಎಷ್ಟು ಪ್ರೈವೇಟ್ ಡಿಗ್ರಿ ಕಾಲೇಜ್‌ಗಳು ಪ್ರಾರಂಭವಾಗಿದ್ದವು, ಅವನ್ನು Grant-in-aid ಒಳಗೆ ತಂದಿದ್ದೇವೆ. SC/ST ಸಂಸ್ಥೆಗಳನ್ನು 1995 ರವರೆಗೆ ತಂದಿದ್ದೇವೆ. 1995ರೊಳಗೆ ಇರುವುದಕ್ಕೆ Automatic ಸಿಕ್ಕಿದೆ. ಯಾವುದಾದರೂ complaint ಇದ್ದರೆ ಹೇಳಿ ಅದಕ್ಕೆ ಮಾನ್ಯತೆ ಕೊಡುತ್ತೇವೆ.

ಶ್ರೀ ರುದ್ರಪ್ಪ ಲಮಾಣಿ:– Aided college ನಲ್ಲಿ ಬಹಳಷ್ಟು vacancies ಇವೆ.

ಉಪಾಧ್ಯಕ್ಷರು:– ಆಮೇಲೆ ಕೇಳಿ.

ಶ್ರೀ ಆರ್.ವಿ.ದೇಶಪಾಂಡೆ:– ತಾವು ಹೇಳುವುದೆಲ್ಲಾ ಸರಿ. Aided ಕಾಲೇಜ್‌ಗಳಲ್ಲಿ ಖಾಲಿಯಿರುವ ಹುದ್ದೆಗಳನ್ನು ತುಂಬಬೇಕೆಂದು ಹೇಳಿರುವುದು ಸಹ ಸರಿ. 1987 ರಿಂದ 1995 ರವರೆಗೆ ಯಾವ ಕಾಲೇಜ್‌ಗಳು ಪ್ರಾರಂಭವಾಗಿದೆ? ಅವುಗಳಿಗೂ grant-in-aid ನೀಡುವುದಕ್ಕೆ ಹೇಳಿದ್ದೀರಿ. ಇವೆಲ್ಲವು ಒಂದೇ ಸಾರಿ ಸರ್ಕಾರ ಮಾಡುವುದಕ್ಕೆ ಕಷ್ಟವಾಗುತ್ತದೆ. ಆದರೂ ಪರಿಶೀಲನೆ ಮಾಡಿ ಸಾಧಕ ಬಾಧಕಗಳನ್ನು, ಹಣಕಾಸಿನ ಪರಿಸ್ಥಿತಿಯನ್ನು ನೋಡಿ ಸರ್ಕಾರ ಮಾಡಬೇಕಾಗುತ್ತದೆ.

ಏಕೆಂದರೆ ultimately, aided college ಅಂದರೆ ನಮ್ಮ ಕಾಲೇಜುಗಳೇ ಆಗಿವೆ. Aided ಗಳಿಗೆ grant ನಾವೇ ಕೊಡುತ್ತೇವೆ.

ಶ್ರೀ ಎನ್.ಹೆಚ್.ಕೋನರೆಡ್ಡಿ:- ಆರ್ಥಿಕ ಪರಿಸ್ಥಿತಿಯನ್ನು ನೋಡಿಕೊಂಡು 2-3 ವರ್ಷಕ್ಕೊಮ್ಮೆ ಕೊಡುತ್ತಾ ಬನ್ನಿ ಎಂದರೆ, ಯಾರೂ ಸಹ ಆ ರೀತಿ ಮಾಡುತ್ತಿಲ್ಲವೆನ್ನುವ ಅಂಶವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಆರ್.ವಿ.ದೇಶಪಾಂಡೆ:- ನಾನು ಹೇಳುವುದೇನೆಂದರೆ ಹಲವಾರು ವರ್ಷಗಳು ಆಗಿಲ್ಲ. 1987ಕ್ಕೆ ನಿಂತಿದೆ. ನಾವು ಅಧಿಕಾರಕ್ಕೆ ಬಂದು ಒಂದು ವರ್ಷ ಮೂರು ತಿಂಗಳಾಯಿತು. ಸರ್ಕಾರ Atleast positive mind ನಿಂದ ಮಾತನಾಡುತ್ತಿರುವುದಕ್ಕೆ ತಾವು appreciate ಮಾಡಬೇಕು.

ಶ್ರೀ ಎನ್.ಹೆಚ್.ಕೋನರೆಡ್ಡಿ:- ತಾವೊಬ್ಬರು ಧೈರ್ಯವಂತರೆಂದು appreciate ಮಾಡಬೇಕಾಗುತ್ತದೆ.

ಶ್ರೀ ಆರ್.ವಿ.ದೇಶಪಾಂಡೆ:- ನಾವು ಪಾರದರ್ಶಕವಾಗಿ recruitment ಮಾಡಬೇಕು. ಈ ಬಗ್ಗೆ management ಗೂ ಮನವಿ ಮಾಡಿಕೊಳ್ಳುವುದೇನೆಂದರೆ ಅಪ್ರೂವಲ್ ನೀಡಿದ ನಂತರ ಅಲ್ಲಿ ಯಾವುದೇ ರೀತಿಯ ದುರ್ವ್ಯವಹಾರ ನಡೆಯಬಾರದು. Recruitment ಪಾರದರ್ಶಕವಾಗಿ ಆಗಬೇಕು.

ಶ್ರೀ ಎಂ.ಟಿ.ಕೃಷ್ಣಪ್ಪ:- Aided institutions ನವರು ಮುಂಚೆಯೇ ದುಡ್ಡು ತೆಗೆದುಕೊಂಡು appoint ಮಾಡಿಕೊಳ್ಳುತ್ತಾರೆ. ಅದರಲ್ಲಿ ಪಾರದರ್ಶಕತೆ ಪ್ರಶ್ನೆ ಎಲ್ಲಿದೆ?

ಶ್ರೀ ಆರ್.ವಿ.ದೇಶಪಾಂಡೆ:- ಮಾಡಬೇಡಿ ಎಂದು ಹೇಳಿ. ಅದರಲ್ಲಿ ನಮ್ಮ ತಕರಾರು ಏನಿಲ್ಲ.

ಶ್ರೀ ಕೆ.ಶಿವಮೂರ್ತಿ:- ದಯಮಾಡಿ ಈ ಪ್ಯಾರಾಮೀಟರ್‌ನ್ನು ಎಸ್.ಸಿ./ಎಸ್.ಟಿ. ಗಳಿಗೆ ಅನ್ವಯ ಮಾಡಬೇಡಿ. ಅವರು ದುಡ್ಡಿನಲ್ಲಿ ಬಹಳ

ದುರ್ಬಲರಾಗಿರುತ್ತಾರೆ. ಜಾಗವೂ ಸಿಗಲ್ಲ, ಕಟ್ಟಡವೂ ಇರುವುದಿಲ್ಲ. ದಿ. ದೇವರಾಜ್ ಅರಸು ರವರ ಕಾಲದಲ್ಲಿ starting grant ಕೊಡುತ್ತಿದ್ದರು. ಆದರೆ ಈಗ ಇಷ್ಟು ವರ್ಷಗಳು ನಡೆಸಬೇಕೆಂದು ಪ್ಯಾರಾ ಮೀಟರ್ ಹಾಕಿದ್ದಾರೆ. ಹಾಗೆ ಮಾಡಿದರೆ ನಡೆಸುವುದಕ್ಕೆ ಕಷ್ಟವಾಗುವುದರಿಂದ ಅವರಿಗೆ relax ಮಾಡಬೇಕು.

ಉಪಾಧ್ಯಕ್ಷರು:– ಅವರು ಮಾತನಾಡಲಿ.

ಶ್ರೀ ಆರ್.ವಿ.ದೇಶಪಾಂಡೆ:– Aided College ಗಳಲ್ಲಿ Fees ಏನು ಕಲೆಕ್ಟ್ ಮಾಡುತ್ತೇವೆ, ಅದರಲ್ಲಿ 100% ಪೂರ್ತಿ ಸರ್ಕಾರಕ್ಕೆ ತುಂಬಬೇಕಾಗುತ್ತದೆ. ಈ ಬಗ್ಗೆ ಬಹಳಷ್ಟು ಮೇಲ್ಮನೆಯಲ್ಲಿ ಮತ್ತು ಈ ಮನೆಯಲ್ಲಿ ಪ್ರಸ್ತಾಪ ಮಾಡಿದರು. ಈ ಬಗ್ಗೆ ಮಾನ್ಯ ಶಾಸಕರುಗಳು ಮಾತನಾಡುತ್ತಾ, ಕಲೆಕ್ಟ್ ಮಾಡಿರುವ fees ಅನ್ನು ಸರ್ಕಾರ ತೆಗೆದುಕೊಂಡರೆ, ನಮಗೆ maintain ಮಾಡುವುದಕ್ಕೆ ಏನೂ ಸಿಗುವುದಿಲ್ಲವೆಂದು ಹೇಳುತ್ತಿದ್ದರು. ಆ ಸಮಯದಲ್ಲಿ ನಿರ್ಣಯವೊಂದನ್ನು ಮಾಡಿ ಹಣಕಾಸಿನ ಇಲಾಖೆಗೆ ಕಳುಹಿಸಲಾಯಿತು. ಅದೇನೆಂದರೆ, 50% ಮೊತ್ತವನ್ನು ಮಾತ್ರ ಸರ್ಕಾರಕ್ಕೆ ತುಂಬಬೇಕು. ಉಳಿದ 50% ಹಣವನ್ನು aided college ಹಿಡಿದು ಕೊಳ್ಳುವ ನಿರ್ಣಯವನ್ನು ಮಾಡಲಾಯಿತು. ಹಾಗಾಗಿ ಎಲ್ಲಾ ಕಡೆ ಅಂದರೆ ಸರ್ಕಾರಿ ಕಾಲೇಜ್ ಇರಬಹುದು, aided institution ಇರಬಹುದು, ಗುಣಮಟ್ಟದ ಶಿಕ್ಷಣ ಸಿಗಬೇಕು, ಆದಷ್ಟು ಮಟ್ಟಿಗೆ ಖಾಲಿಯಿರುವ ಪೋಸ್ಟ್‌ಗಳು ಭರ್ತಿಯಾಗಬೇಕೆನ್ನುವ ದಿಕ್ಕಿನಲ್ಲಿ ಸರ್ಕಾರ ಕೆಲಸ ಮಾಡುತ್ತಿದೆ. Lecturers ಇಲ್ಲವೆಂದು ಹೇಳಿದಾಗ, ಕಳೆದ ವರ್ಷ ಪಾರದರ್ಶಕವಾಗಿ ಆನ್‌ಲೈನ್ ಮುಖಾಂತರ 10,511 ಜನ Guest Lectures ಅನ್ನು ತೆಗೆದುಕೊಂಡಿದ್ದೇವೆ. ಪ್ರತಿ ವರ್ಷ ಗೆಸ್ಟ್ ಲೆಕ್ಚರರ್ಸ್ ಕಾಲೇಜುಗಳಿಗೆ ಪಾಠ ಮಾಡುವುದಕ್ಕೆ ಸೆಪ್ಟೆಂಬರ್, ಅಕ್ಟೋಬರ್ ತಿಂಗಳಿನಲ್ಲಿ ಹೋಗುತ್ತಿದ್ದರು. ಆದರೆ ಕಳೆದ ವರ್ಷ ಜುಲೈ ತಿಂಗಳಿನಲ್ಲಿ ಹೋಗಿದ್ದಾರೆ. ಮೆರಿಟ್, ಅನುಭವ, ಇದಕ್ಕೆ ಹೆಚ್ಚಿನ ಮಹತ್ವ ಕೊಟ್ಟು, ಮಾನ್ಯ ಸದಸ್ಯರಾದ ರೆಡ್ಡಿ ಅವರು ಹೇಳಿದಂತಹ ಟೆಕ್ನಾಲಜಿಯನ್ನು ಉಪಯೋಗ ಮಾಡಿ ಎಂದರು, ಇದರಲ್ಲಿ ಮಂತ್ರಿಗಳಿಗೂ

ಸಹ ಇಂತಹವರನ್ನೇ ಸೆಲೆಕ್ಟ್ ಮಾಡಬೇಕೆನ್ನುವ ಡಿಸ್‌ಕ್ರಿಷನ್ ಇಲ್ಲ. ಹಾಗಾಗಿ ಆನ್‌ಲೈನ್ ಮುಖಾಂತರ 10,511 ಗೆಸ್ಟ್ ಲೆಕ್ಚರರ್ಸ್ ಅನ್ನು ನೇಮಕಾತಿ ಮಾಡಿದ್ದೇವೆ. ಅತಿಥಿ ಉಪನ್ಯಾಸಕರುಗಳಿಗೆ ಕಳೆದ ಮೂರು ವರ್ಷಗಳ ಗೌರವಧನ 54 ಕೋಟಿ ರೂ.ಗಳು ಬಾಕಿಯಿದ್ದು, ಅದನ್ನು ಚುಕ್ತ ಮಾಡಿರುತ್ತೇವೆ. ಪ್ರತಿ ತಿಂಗಳು regularly ಅವರಿಗೆ ಗೌರವಧನವನ್ನು ಕೊಟ್ಟಿದ್ದೇವೆ. ಅವರು ನಮಗೆ ಅನುಭವವಿರುವುದರಿಂದ ಪ್ರತಿ ವರ್ಷ ನಾವೇಕೆ ಅರ್ಜಿ ಹಾಕಬೇಕೆಂಬ ಬೇಡಿಕೆಯನ್ನಿಟ್ಟರು. ಅದಕ್ಕೆ ನಾವು ಮಾನವೀಯತೆಯ ದೃಷ್ಟಿಯಿಂದ ಹಾಗೂ ಅವರ ಅನುಭವದ ಲಾಭ ವಿದ್ಯಾರ್ಥಿಗಳಿಗೆ ಸಿಗಬೇಕೆನ್ನುವ ದೃಷ್ಟಿಯಿಂದ ಕಳೆದ ವರ್ಷ ಯಾರು ಕೆಲಸ ಮಾಡಿದ್ದಾರೋ ಅವರನ್ನು ಈ ವರ್ಷಕ್ಕೆ ಪುನಃ ಹಾಗೆಯೇ ಮುಂದುವರೆಸಿದ್ದೇವೆ. ಜುಲೈ ತಿಂಗಳ 5–6ನೇ ತಾರೀಖಿಗೆ ಸುಮಾರು 9,100 ಗೆಸ್ಟ್ ಲೆಕ್ಚರ್‌ರ್ಸ್ ಕಾಲೇಜ್‌ಗಳಿಗೆ join ಆಗಿದ್ದಾರೆ. ಇನ್ನೂ ಸುಮಾರು 2,400 ಗೆಸ್ಟ್ ಲೆಕ್ಚರ್‌ರ್ಸ್ ಬೇಕಾಗಿರುತ್ತಾರೆ. ಇದರ ಒಂದು ಜಾಹೀರಾತನ್ನು ವೆಬ್‌ಸೈಟ್‌ನಲ್ಲಿ ಹಾಕಿರುತ್ತೇವೆ. Fresh retirement ನಿಂದ, death ನಿಂದ, ಹೊಸ ಕಾಲೇಜುಗಳನ್ನು ಮಂಜೂರು ಮಾಡಿರುವ ಸಲುವಾಗ, 2,400 ಗೆಸ್ಟ್ ಲೆಕ್ಚರ್‌ರ್ಸ್ ಅನ್ನು absorb ಮಾಡುವುದಕ್ಕೆ ಕಾರ್ಯಕ್ರಮವೊಂದನ್ನು ಹಮ್ಮಿಕೊಂಡಿದ್ದೇವೆ. ಮುಂದಿನ 15 ದಿವಸಗಳಲ್ಲಿ ಅವರನ್ನು in a transparent way ನೇಮಕಾತಿ ಮಾಡುತ್ತೇವೆ. They will also go to the college. ಇಲಾಖೆಯಲ್ಲಿ ಹೆಚ್ಚಿನ ರೀತಿಯಲ್ಲಿ ಟೆಕ್ನಾಲಜಿಯ ಲಾಭವನ್ನು ಉಪಯೋಗಿಸಿಕೊಳ್ಳುತ್ತಿದ್ದೇವೆ. ಟೆಕ್ನಾಲಜಿಯಲ್ಲಿ ಎಲ್ಲೆಲ್ಲಿ ಉಪಯೋಗಿಸುವುದಕ್ಕೆ ಸಾಧ್ಯವೋ ಅಲ್ಲೆಲ್ಲ ಉಪಯೋಗಿಸುತ್ತಿದ್ದೇವೆ. Discretion ಇದ್ದರೆ, ಮನುಷ್ಯನ ಸ್ವಭಾವ, ಡಿಸ್‌ಕ್ರಿಷನ್‌ನ ಲಾಭ ಈ ಕಡೆಗೂ ಹೋಗಬಹುದು, ಆ ಕಡೆಗೂ ಹೋಗಬಹುದು. Grant-in-code ಕೊಡುವ ಸಮಯದಲ್ಲೂ ಸಹ ಯಾವುದೇ ಡಿಸ್‌ಕ್ರಿಷನ್ ಇರಬಾರದು. ಇದರಲ್ಲಿ ಮಂತ್ರಿಯಾಗಲಿ, ಮುಖ್ಯಮಂತ್ರಿಯಾಗಲಿ involve ಆಗಬಾರದು. Grant-in-code ಕೊಡುವುದರಲ್ಲಿಯೂ ಸಹ ಪಾರದರ್ಶಕತೆಯಿರಬೇಕು, ನಿಯಮಗಳಿರಬೇಕು. NAAC Accreditation ಅರ್ಹತೆ ಬಂದ ನಂತರ

ಆಟೋಮ್ಯಾಟಿಕಲಿ ಅವರಿಗೆ grant ಸಿಗಬೇಕು. ಇದಕ್ಕೆ ಅವರು ತಿರುಗಾಡುವುದು, ಓಡಾಡುವುದು, ಕೆಲವು ಸಾರಿ ಮಾಡಬಾರದ್ದನ್ನೆಲ್ಲಾ ಮಾಡುವುದು, ಹಣ ದುರುಪಯೋಗ ಮಾಡುವುದು, discretion ಇಲ್ಲದಿದ್ದಾಗ ಆ ಪ್ರಶ್ನೆ ಬರುವುದು. ಆ ದಿಕ್ಕಿನಲ್ಲಿ ಆ ವಿಚಾರದ ಬಗ್ಗೆಯೂ ಸಹ ಸರ್ಕಾರ ಮಾಡುತ್ತಿದೆ. ಗೆಸ್ಟ್ ಲೆಕ್ಚರ್‌ರ್ಸ್ ಬೇಡಿಕೆಯಿದ್ದು, ಅವರಿಗೆ 8,000/–, 10,000/– ರೂ.ಗಳ ಗೌರವಧನ ಕೊಡುತ್ತಿದ್ದು, ಅದನ್ನು ಹೆಚ್ಚು ಮಾಡಬೇಕೆಂದು ಅವರ ಬೇಡಿಕೆಯಿದೆ. ಈ ಬಗ್ಗೆಯೂ ಸರ್ಕಾರ ಪರಿಶೀಲನೆ ಮಾಡುತ್ತಿದೆ.

ಮಾನ್ಯ ಸದಸ್ಯರಾದ ಅರವಿಂದ ಲಿಂಬಾವಳಿಯವರು UGC arrers ಬಗ್ಗೆ ಪ್ರಸ್ತಾಪ ಮಾಡಿದರು. 2006ರಲ್ಲಿ ಜಾರಿಗೆ ಬಂದ Pay Commission ಪ್ರಕಾರ 01.01.2000 ದಿಂದ 31.03.2010 ರವರೆಗೆ 920 ಕೋಟಿ ರೂ.ಗಳನ್ನು ಕೊಡಬೇಕಾಗುತ್ತದೆ. ಅದರಲ್ಲಿ 80% ಅಷ್ಟು ಮೊತ್ತ ಯು.ಜಿ.ಸಿ. ಯಿಂದ ಅಂದರೆ ಕೇಂದ್ರ ಸರ್ಕಾರದಿಂದ ಬರುತ್ತದೆ. ಅದರಲ್ಲಿ 20% ನಮ್ಮ contribution ಇರುತ್ತದೆ. ಸರ್ಕಾರ ಈ ಲೆಕ್ಕದಲ್ಲಿ 120–130 ಕೋಟಿ ರೂ. ಹಣ ಬಿಡುಗಡೆ ಮಾಡಿದೆ. ಆದರೆ ಈ ಮೊತ್ತ ಕೇಂದ್ರ ಸರ್ಕಾರದಿಂದ ಮರುಪಾವತಿಯಾಗಿ ಬಂದಿರುವುದಿಲ್ಲ. ಕಳೆದ ಬಾರಿ 160 ಕೋಟಿ ರೂ.ಗಳನ್ನು ಬಿಡುಗಡೆ ಮಾಡುತ್ತೇವೆಂದು ಹೇಳಿದ್ದೆ. ಆದರೆ ಕೆಲವು ತಾಂತ್ರಿಕ ಕಾರಣಗಳಿಂದ ಬಿಡುಗಡೆ ಮಾಡುವುದಕ್ಕೆ ಆಗಿರುವುದಿಲ್ಲ.

ಬಾಕಿ 92 ಕೋಟಿ ರೂ.ಗಳು ಮುಂಗಡ ಪತ್ರಕ್ಕೆ ಒಪ್ಪಿಗೆ ಸಿಕ್ಕಿದ ನಂತರ ಅದನ್ನೂ ಸಹ release ಮಾಡುತ್ತೇವೆ. ನಾವು ಕ್ರಮೇಣ ಇದನ್ನು ರಿಲೀಸ್ ಮಾಡಿದರೆ ಬಹುತೇಕ ನಮ್ಮದು 20% responsibility ಮುಗಿಯುತ್ತದೆ. ಉಳಿದ ಅರ್ಧ 805 ನಾವು ತರಬೇಕಾಗುತ್ತದೆ. ಅದನ್ನು ತರುವುದಕ್ಕೂ ಸಹ ನಮ್ಮ ಪ್ರಯತ್ನ ನಡೆದಿದೆ. ಇವತ್ತು ಗೌರವಾನ್ವಿತ ರಮೇಶ್ ಕುಮಾರ್ ರವರು, ಮಾನ್ಯ ಅರವಿಂದ ಲಿಂಬಾವಳಿಯವರು ಹಾಗೂ ಕೆಲವು ಸದಸ್ಯರು RUSA ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಯು.ಪಿ.ಎ. ಸರ್ಕಾರ ಇದ್ದಾಗ 2012–13ನೇ ಯೋಜನೆಯಲ್ಲಿ ಸರ್ವ ಶಿಕ್ಷಣ ಅಭಿಯಾನ ಜಾರಿಗೆ ಬಂತು. ಪ್ರಾಥಮಿಕ

ಶಿಕ್ಷಣ, ಮಾಧ್ಯಮಿಕ ಶಿಕ್ಷಣ, ಹೈಸ್ಕೂಲು, Junior Collegeಗಳಲ್ಲಿ ಜಾರಿಗೆ ಬಂದವು. ಈಗ Autonomous colleges ಇರಬಹುದು, Government Degree colleges ಇರಬಹುದು, Aided Colleges ಇವುಗಳಿಗೆ ಯು.ಪಿ.ಎ. ಸರ್ಕಾರವು ರಾಷ್ಟ್ರೀಯ ಉಚ್ಚತರ್ ಶಿಕ್ಷಣ ಅಭಿಯಾನ ಎಂದು ಒಂದು ಹೊಸ ಕಾರ್ಯಕ್ರಮವನ್ನು ಘೋಷಣೆ ಮಾಡಿತು. ಆ ಕಾರ್ಯಕ್ರಮವನ್ನು ಈ ಸರ್ಕಾರ ಕೂಡ ಮುಂದುವರೆಸಿಕೊಂಡು ಬಂದಿದೆ. ಈ ಯೋಜನೆಯ ಸಲುವಾಗಿ ಇಡೀ ದೇಶಕ್ಕೆ ಒಂದು ಲಕ್ಷ ಕೋಟಿ ರೂ.ಗಳನ್ನು ಮೂಲಭೂತ ಸೌಕರ್ಯಕ್ಕೆ, Human resources built up ಮಾಡುವುದಕ್ಕೆ ಅವರು ಆರ್ಥಿಕ ನೆರವು ಕೊಡುತ್ತಿದ್ದಾರೆ. ಆ ದಿಕ್ಕಿನಲ್ಲಿ 12ನೇ ಯೋಜನೆಗೆ ಈಗಾಗಲೇ ಸುಮಾರು 4,300 ಕೋಟಿ ರೂ.ಗಳ ಮೊದಲನೇ ಹಂತದ ಯೋಜನೆಯನ್ನು ಸಿದ್ಧಪಡಿಸಿದ್ದೇನೆ. ಒಂದು ವಾರದಲ್ಲಿ ಅಥವಾ 8 ದಿವಸದಲ್ಲಿ ಸಚಿವ ಸಂಪುಟದ ಅನುಮತಿಯನ್ನು ನಾವು ಪಡೆದುಕೊಂಡು ಇದನ್ನು HRD Ministerಗೆ ಕಳುಹಿಸಿ ಒಪ್ಪಿಗೆ ಪಡೆಯಲು ಪ್ರಯತ್ನ ಮಾಡುತ್ತೇವೆ. ಮುಖ್ಯವಾಗಿ, Nobel Museum & Knowledge Center ಅನ್ನು ಪ್ರತಿಯೊಂದು ವಿಶ್ವವಿದ್ಯಾನಿಲಯದಲ್ಲಿ ನಿರ್ಮಾಣ ಮಾಡಬೇಕೆಂಬ ಸಲಹೆಯನ್ನು ಗೌರವಾನ್ವಿತ ಹಿರಿಯ ಸದಸ್ಯರಾದ ರಮೇಶ್ ಕುಮಾರ್ ರವರು ನಮಗೆ ಪತ್ರದ ಮೂಲಕ ಕೊಟ್ಟಿದ್ದರು. ಇದರಿಂದ ಗುಣಮಟ್ಟದಲ್ಲಿಯೂ ಸಹ enhancement ಬರುತ್ತದೆ, ಶಿಕ್ಷಣ ಕ್ಷೇತ್ರದಲ್ಲಿ ಒಳ್ಳೆಯ ಸೇವೆಯನ್ನು ಕೊಡುವುದಕ್ಕೆ ಸಾಧ್ಯವಾಗುತ್ತದೆ. ಈ ಒಂದು ಪ್ರಸ್ತಾವನೆಗೆ 8 ದಿವಸಗಳ ಹಿಂದೆ Higher Council Meeting ಆದಾಗ, ಅದಕ್ಕೆ in principle ನಾವೆಲ್ಲಾ ಒಪ್ಪಿಗೆ ಕೊಟ್ಟಿದ್ದೇವೆ. ಇದು ಬಹಳ ಒಳ್ಳೆಯ ಪ್ರಸ್ತಾವನೆಯಾಗಿದೆ. ಎಲ್ಲರೂ ಮೆಚ್ಚಿದ್ದಾರೆ. ಇದರ ಬಗ್ಗೆ ನಮ್ಮ Central University, Gulbargaದ ಮಾಜಿ Vice Chancellor ಗೌರವಾನ್ವಿತ ಪಠಾಣ್ ಇವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚನೆ ಮಾಡಿದ್ದೇವೆ. ಮಾನ್ಯ ರಮೇಶ್ ಕುಮಾರ್ ರವರ ಬಳಿ ಚರ್ಚೆ ಮಾಡಿ, ಕ್ರಮೇಣ ಈ ತರಹದ ಒಂದು Nobel Museum & Knowledge Center ಅನ್ನು ಪ್ರತಿಯೊಂದು University ಯಲ್ಲಿ ಪ್ರಾರಂಭ ಮಾಡುವುದಕ್ಕೆ ನಾವು ಪ್ರಯತ್ನ ಮಾಡುತ್ತೇವೆ.

ರೂಸಾದಲ್ಲಿಯೂ ಸಹ ಕ್ರಮೇಣ ಈ ನಿರ್ಣಯಕ್ಕೆ ರಾಜ್ಯ ಸರ್ಕಾರ ಹಾಗೂ ಕೇಂದ್ರ ಸರ್ಕಾರದಿಂದ ಸಹಾಯವನ್ನು ಪಡೆದುಕೊಂಡು ಈ institution ಅನ್ನು ಪ್ರಾರಂಭ ಮಾಡುವುದಕ್ಕೆ ನಾವು ಪ್ರಯತ್ನ ಮಾಡುತ್ತೇವೆ. ಹೈದರಾಬಾದ್ ಕರ್ನಾಟಕ ಭಾಗಕ್ಕೆ ವಿಶೇಷವಾದ ಗಮನವನ್ನು ಕೊಡಲಾಗುವುದು ಎಂದು ಮಾನ್ಯ ಮುಖ್ಯಮಂತ್ರಿಗಳು ಮುಂಗಡ ಪತ್ರ ಮಂಡಿಸುವ ದಿವಸ ಹೇಳಿದ್ದಾರೆ.

ಶ್ರೀ ಬಿ.ಆರ್.ಪಾಟೀಲ್:- ಮಾನ್ಯ ಸಚಿವರೆ, ತಾವು ಡಿಗ್ರಿ ಕಾಲೇಜುಗಳನ್ನು ಕೊಟ್ಟಿಲ್ಲ.

ಶ್ರೀ ಆರ್.ವಿ.ದೇಶಪಾಂಡೆ:- ಮಾನ್ಯ ಪಾಟೀಲ್‌ರವರೆ, ನಿಮ್ಮ ಭಾಗಕ್ಕು 50 ಡಿಗ್ರಿ ಕಾಲೇಜುಗಳನ್ನು ಕೊಟ್ಟಿದ್ದೇವೆ. ನಿಮ್ಮ ಭಾಗದಲ್ಲಿ ಡಿಗ್ರಿ ಕಾಲೇಜುಗಳಿವೆ.

ಶ್ರೀ ಬಿ.ಆರ್.ಪಾಟೀಲ್:- ಮಾನ್ಯ ಉಪಾಧ್ಯಕ್ಷರೆ, ಕೊಟ್ಟಿಲ್ಲ. ಹಿಂದುಳಿದ ತಾಲ್ಲೂಕುಗಳಲ್ಲಿ ಕಾಲೇಜಿಲ್ಲ.

ಶ್ರೀ ಆರ್.ವಿ.ದೇಶಪಾಂಡೆ:- ಹೈದರಾಬಾದ್ ಕರ್ನಾಟಕ ಕ್ಷೇತ್ರದಲ್ಲಿ 50 ಡಿಗ್ರಿ ಕಾಲೇಜುಗಳನ್ನು ಕೊಟ್ಟಿದ್ದೇವೆ. I can understand ನಿಮ್ಮ ಕ್ಷೇತ್ರದಲ್ಲಿ ಕೊಟ್ಟಿಲ್ಲದೇ ಇರಬಹುದು. ಆದರೆ, ಬೇರೆ ಕಡೆ ಕೊಟ್ಟಿಲ್ಲವೆಂದು ತಾವು ಹೇಗೆ ಹೇಳುತ್ತೀರಿ? ನಾನು, ಬೇಕಾದರೆ ನಿಮಗೆ ಲಿಸ್ಟ್ ಕೊಡುತ್ತೇನೆ. ಮಾನ್ಯ ಉಪಾಧ್ಯಕ್ಷರೆ, ಕೋಲಾರ ಜಿಲ್ಲೆಗೆ ನಮ್ಮ ಲೋಕಾಯುಕ್ತರು ಹೋಗಿದ್ದರು. ಕಾಲೇಜಿನಲ್ಲಿ 60–62 lecturers ಇರಬೇಕು. ಆದರೆ, ಇವರು ಹೋದಾಗ ಅಲ್ಲಿ ಕೇವಲ 7–8 ಜನ ಇದ್ದರು. ಹಾಗಾಗಿ, ಶಿಸ್ತು ಕಡಿಮೆ ಆಗಿದೆ. ಎರಡನೆಯದಾಗಿ, ಒಂದು ತರಹ commitment ಕಾಣಿಸುತ್ತಿಲ್ಲ. commitment ಅನ್ನು ನಾನು ಭಾಷಣದಿಂದ ಅವರಲ್ಲಿ ನಿರ್ಮಾಣ ಮಾಡುವುದಕ್ಕೆ ಆಗುವುದಿಲ್ಲ. ಅವರಲ್ಲೇ ಅದು ನಿರ್ಮಾಣ ಆಗಬೇಕು. Lecturer ಗಳಲ್ಲಿ ಶಿಸ್ತು ತರಬೇಕು ಹಾಗೂ ಅವರು ಸರಿಯಾದ ಸಮಯಕ್ಕೆ ಬರಬೇಕೆಂದು ನಮ್ಮ ಪಾಲಿಟೆಕ್ನಿಕ್, ಡಿಗ್ರಿ ಕಾಲೇಜುಗಳಲ್ಲಿ ಬಯೋಮೆಟ್ರಿಕ್

ವ್ಯವಸ್ಥೆಯನ್ನು introduce ಮಾಡುತ್ತಿದ್ದೇವೆ. ಪ್ರತಿಯೊಂದು ಕಾಲೇಜಿಗೆ ಹೋದಾಗ Biometric Attendance ತಮಗೆ ಕಾಣಿಸಬಹುದು. ನನಗೆ ನೋವಿದೆ. ಅವರಲ್ಲಿ ವಿಶ್ವಾಸ ಇಲ್ಲವೆಂದು ಅಲ್ಲ. ಕಾಲೇಜಿಗೆ ಸರಿ ಸಮಯದಲ್ಲಿ ಶಿಕ್ಷಕರು ಬರಲಿಲ್ಲವೆಂದರೆ ಅವರು ಮಕ್ಕಳಿಗೆ ಯಾವ ರೀತಿಯ ಪಾಠ ಹೇಳಲು ಸಾಧ್ಯ? ಈಗಾಗಲೇ *295* ಡಿಗ್ರಿ ಕಾಲೇಜುಗಳಲ್ಲಿ ಈ ಬಯೋಮೆಟ್ರಿಕ್ ಅನ್ನು implement ಮಾಡಿದ್ದೇವೆ. ಕ್ರಮೇಣ ಬೇರೆ ಎಲ್ಲಾ ಕಾಲೇಜಿನಲ್ಲಿ ಈ ಬಯೋಮೆಟ್ರಿಕ್ ವ್ಯವಸ್ಥೆಯನ್ನು ಮಾಡುತ್ತೇವೆ. ನೈಪುಣ್ಯತೆ ಕಾರ್ಯಕ್ರಮದ ಬಗ್ಗೆ ನಾನು ಈಗಾಗಲೇ ಹೇಳಿದ್ದೇನೆ. Skill Development Programme ಅನ್ನು ಜಾರಿಗೆ ತಂದಿದ್ದೇವೆ. ಇಬ್ಬರು ಸದಸ್ಯರು ವಿದ್ಯಾರ್ಥಿಗಳಲ್ಲಿ ಮುಖ್ಯವಾಗಿ employable skills ಇರಬೇಕು ಎಂದು ಹೇಳಿದರು. ಡಿಗ್ರಿ ಕಾಲೇಜುಗಳು, ಪಾಲಿಟೆಕ್ನಿಕ್ ಕಾಲೇಜುಗಳು, ಇಂಜಿನಿಯರಿಂಗ್ ಕಾಲೇಜುಗಳು ಪ್ರಾರಂಭವಾಗುತ್ತಿವೆ. ಪ್ರತಿ ವರ್ಷ ಸಾವಿರಾರು ಜನ ಪದವೀಧರರು ಆಗುತ್ತಿದ್ದಾರೆ. ಆದರೆ, ಅವರಿಗೆಲ್ಲಾ ಉದ್ಯೋಗ ಎಲ್ಲಿದೆ? ಮಾನ್ಯ ಪುಟ್ಟಣ್ಣಯ್ಯನವರು ಹೇಳಿದರು. ಉದ್ಯೋಗ ಸೃಷ್ಟಿ ಆಗಬೇಕಲ್ಲಾ? ಉದ್ಯೋಗ ಸೃಷ್ಟಿ ಆಗದಿದ್ದರೆ ಅವರ ಭವಿಷ್ಯವೇನು? ಹಾಗಾಗಿ, ನಾವು ಕೆಲವು ಕೈಗಾರಿಕೆಗಳ ಜೊತೆ, ಟೊಯೋಟ ಜೊತೆ tie up ಮಾಡಿಕೊಂಡಿದ್ದೇವೆ, ಮೈಸೂರಿನಲ್ಲಿ ಒಂದು ಮಾಡಿದ್ದೇವೆ, ಸೀಮನ್ಸ್ ನವರು, ಮೈಕ್ರೋಸಾಫ್ಟ್‌ರವರು ಮುಂದೆ ಬಂದಿದ್ದಾರೆ. ಅದೇ ಪ್ರಕಾರ World Economic Forum ದಿಂದ Global Shapers programme ನಲ್ಲಿ 5,000 ವಿದ್ಯಾರ್ಥಿಗಳಿಗೆ industry ಮತ್ತು ಅವರಲ್ಲಿ interaction ಮಾಡಿ Employability skills ಹೆಚ್ಚಿಗೆ ಮಾಡುವುದಕ್ಕೆ ಪ್ರಯತ್ನ ಮಾಡಿದ್ದೇವೆ. VTUದಿಂದ ಸಹ 5,000 ಮಕ್ಕಳಿಗೆ ಈ ತರಬೇತಿ ಕೊಡುವುದಕ್ಕೆ ಕಾರ್ಯಕ್ರಮ ಹಾಕಿಕೊಂಡಿದ್ದಾರೆ. ಆ ಕಾರ್ಯಕ್ರಮ ಈಗ ಮುಗಿದಿರಬಹುದು. ನಮ್ಮ IIT-Mumbai ಕಡೆಯಿಂದ collaboration ಮಾಡಿಕೊಂಡು Technical Education ನಲ್ಲಿ ಮಕ್ಕಳಿಗೆ English spoken tutorial ಮಾಡಿ, ಆ ಒಂದು skills ಅನ್ನು ಸಹ ಅವರಿಗೆ ಕೊಡುತ್ತಿದ್ದೇವೆ. ಅವರ ರ್‍ಯಾಕಿಂಗ್ ಪ್ರಕಾರ, ಅವರು ನಮ್ಮ ತಾಂತ್ರಿಕ ಇಲಾಖೆಗೆ ದೇಶದಲ್ಲಿ 2ನೆ

ಸ್ಥಾನವನ್ನು ಕೊಟ್ಟಿದ್ದಾರೆ. Government of Karnataka ಅಂದರೆ ನಮ್ಮ Director of Technical Education ಇವರ ಜೊತೆ ಹಾಗೂ IIT-Mumbai ಜೊತೆ ಒಪ್ಪಂದ ಮಾಡಕೊಳ್ಳಲಾಗಿದೆ. ಇದರ ಲಾಭ 147 ಸರ್ಕಾರಿ ಮತ್ತು ಏಡೆಡ್ ಪಾಲಿಟೆಕ್ನಿಕ್‌ಗಳ ಸುಮಾರು 50,000 ವಿದ್ಯಾರ್ಥಿಗಳಿಗೆ ಆಗಿದೆ. ನಾನನು Industrial Academy collaboration ಬಗ್ಗೆ ಹೇಳಲಿದ್ದೇನೆ. VTUದಿಂದ ಸಹ ತಾಂತ್ರಿಕ ಕಾಲೇಜಿನಲ್ಲಿ ನಮ್ಮ ವಿದ್ಯಾರ್ಥಿಗಳಿಗೆ, ಕೈಗಾರಿಕೆಗಳಿಗೆ, ಅವರ interactions ಗೆ ಒಂದು ಕಾರ್ಯಕ್ರಮವನ್ನು ಪ್ರಾರಂಭ ಮಾಡಿದ್ದೇವೆ. ಮತ್ತೊಂದು ಮಹತ್ವವಾದುದು ಎಂದರೆ, ಅರವಿಂದ ಲಿಂಬಾವಳಿಯವರು State Higher Council ಬಗ್ಗೆ ಮಾತನಾಡಿರುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. State Higher Councilದಲ್ಲಿ ಉಪಾಧ್ಯಕ್ಷರ ಸ್ಥಾನ ಖಾಲಿಯಿದೆ. ಮಾನ್ಯ ಶರ್ಮರವರು ಸ್ವಲ್ಪ ದಿನ ಇದ್ದರು. ಅವರ ಮೇಲೆ ಆಪಾದನೆ ಬಂದು ಅವರು ರಾಜೀನಾಮೆ ಕೊಟ್ಟ ನಂತರ ಆ ಸ್ಥಾನವನ್ನು ನಾವು ತುಂಬಬೇಕಾಗಿತ್ತು. ಆದೆ, ಅಲ್ಲಿ ಕೆಲಸ ನಿಂತಿಲ್ಲ. ಹಲವಾರು ಸಭೆಗಳು ಅಲ್ಲಿ ಆಗಿವೆ. Academic Institutions ಜೊತೆ ಚರ್ಚೆ ಆಗುತ್ತಿದೆ. ಕಮಿಟಿ ಮೀಟಿಂಗ್ಸ್ ಆಗುತ್ತಿವೆ. Vice Chancellor ಜೊತೆ 2–3 ಸಭೆಗಳನ್ನು ಮಾಡಿದ್ದೇವೆ. ಆದರೂ, ಅಲ್ಲಿನ ಕೊರತೆ ಬಗ್ಗೆ ಅವರು ಹೇಳಿದ್ದು ನಿಜ. ಆದಷ್ಟು ಬೇಗನೆ ನಾವು ಕ್ರಮ ತೆಗೆದುಕೊಳ್ಳುತ್ತೇನೆ. Higher Council ನಲ್ಲಿ discussion ಮಾಡಿ, Vice Chancellor ಅವರದೇ ಒಂದು ಕಮಿಟಿ ಮಾಡಿ Common Academic calendarಅನ್ನು ತಂದಿದ್ದೇವೆ. ನಮ್ಮಲ್ಲಿ 14 affiliated Univesrity ಗಳಿವೆ. ಪ್ರತಿಯೊಬ್ಬರ ಪರೀಕ್ಷೆ, admission period, different. ಪರೀಕ್ಷೆ different periods, ಫಲಿತಾಂಶವೂ different periods. ಹಾಗಾಗಿ, ವಿದ್ಯಾರ್ಥಿಗಳಿಗೆ mobility ಸಿಗುತ್ತಿರಲಿಲ್ಲ. ಮೈಸೂರು ಯೂನಿವರ್ಸಿಟಿಯಲ್ಲಿ ಒಂದು ಒಳ್ಳೆಯ ಕೋರ್ಸ್ ಇದೆ. Karnataka Univesrity College ನ ವಿದ್ಯಾರ್ಥಿಗಳು Mysore University ಯಲ್ಲಿ ಏನು colleges ಇವೆ ಅಲ್ಲಿ ಹೋಗುವುದಕ್ಕೆ ಅವಕಾಶ ಸಿಗುತ್ತಿಲ್ಲ. ಇವತ್ತು ಈ ಒಂದು ಕಾರಣದಿಂದ ಶಿಸ್ತು ಬಂದಿದೆ. ಯಾವ ಸಮಯದಲ್ಲಿ results ಆಗುತ್ತಿವೆ ಇದನ್ನು ವಿದ್ಯಾರ್ಥಿಗಳು ತಿಳಿದುಕೊಳ್ಳಬಹುದು, ಪೋಷಕರು ತಿಳಿದುಕೊಳ್ಳಬಹುದು. Choice of

discipline ಗೆ ಇದರಿಂದ ಅವಕಾಶವಿದೆ. ನಮ್ಮ Karnataka Univesity Act 2000 ಅದರ ಬಗ್ಗೆ ಮಾನ್ಯ ಅರವಿಂದ ಲಿಂಬಾವಳಿಯವರು ಪ್ರಸ್ತಾಪ ಮಾಡುವಾಗ, ಡಾ. ಎನ್.ಆರ್.ಶೆಟ್ಟಿಯವರು ಒಂದು ವರದಿ ಕೊಟ್ಟಿದ್ದರು, ಅದು ಇನ್ನೂ ಜಾರಿಗೆ ಬಂದಿಲ್ಲವೆಂದು ಅವರು ಪ್ರಸ್ತಾಪ ಮಾಡಿದ್ದಾರೆ. 2009–10 ಕ್ಕೆ ಆ ವರದಿ ಬಂದಿದೆ.

ಶ್ರೀ ಕೆ.ಶಿವಮೂರ್ತಿ:– ನೋ, ನೋ SC/ST ಇರಬಾರದೆಂದು ಹೇಳುವುದನ್ನು ನಾನು ಒಪ್ಪುವುದಿಲ್ಲ, ದಯವಿಟ್ಟು ಎಲ್ಲದರಲ್ಲೂ ನಮ್ಮ participation ಸ್ಥಾನಮಾನ, ನಮ್ಮ ಜನಸಂಖ್ಯೆಗೆ ಅನುಪಾತಕ್ಕನುಗುಣವಾಗಿ ತೋರಿಸಬೇಕು. ನಮ್ಮ Tribal University ಅದಕ್ಕೆ ಎಲ್ಲಿದೆ ಸರ್? Accreditation ಮಾಡಿದ್ದೀರಿ, single SC/ST ಕಾಲೇಜ್ ಅನ್ನು ತೋರಿಸಿ, modern ತೋರಿಸಿ, ನಮ್ಮದು ಸೆಂಟ್ರಲ್ ಯೂನಿವರ್ಸಿಟಿ ತೋರಿಸಿ, ನಮ್ಮದನ್ನು ಮಾಡಿಕೊಡಿ ಸರ್.

ಶ್ರೀ ಆರ್.ವಿ.ದೇಶಪಾಂಡೆ:– ಇವರು ಕನ್‌ಫ್ಯೂಸ್ ಮಾಡಿಕೊಳ್ಳುತ್ತಿದ್ದಾರೆ.

ಶ್ರೀ ಕೆ.ಶಿವಮೂರ್ತಿ:– No, Higher Education you have kept away. Our participation is nil. Our entity is nil. Our right to participation in the proceeding of the High Education is systematically passed.

ಶ್ರೀ ಆರ್.ವಿ.ದೇಶಪಾಂಡೆ:– ಒಂದು ವಿಶೇಷವಾದ ಸಲಹೆಯನ್ನು ಕೊಡಬೇಕಾಗಿದೆ, ಒಂದು ಮಾತು, ನಮ್ಮ ಸರ್ಕಾರ ಬಂದಾಗ SC/ST ವಿದ್ಯಾರ್ಥಿಗಳ technical education, Diploma Engineering college ನಲ್ಲಿ ₹ 35 ಕೋಟಿ ಫೀ ಕೊಡುವುದು ಬಾಕಿ ಇತ್ತು. ಇದನ್ನು ಮುಖ್ಯಮಂತ್ರಿಗಳ ಗಮನಕ್ಕೆ ತಂದಾಗ, ಇದಕ್ಕೆ ₹ 45 ಕೋಟಿ ಬಿಡುಗಡೆ ಮಾಡಿದರು. ಇದರಿಂದ SC/ST ವಿದ್ಯಾರ್ಥಿಗಳಿಗೆ scholarship ಸಿಕ್ಕಿಲ್ಲ. ಅದು ನಮ್ಮ ಕರ್ತವ್ಯ ಮೂರು ವರ್ಷ ಆ ಹಣವನ್ನು ಬಿಡುಗಡೆ ಮಾಡಿಲ್ಲ, ನಮ್ಮ

ಸರ್ಕಾರ ಬಂದ ತಕ್ಷಣ ₹ 45 ಕೋಟಿ ಬಿಡುಗಡೆ ಮಾಡಿದ್ದೇವೆ. ಹಾಗಾಗಿ ಇನ್ನು ಆಗಬೇಕು, SC/ST ವಿದ್ಯಾರ್ಥಿಗಳು ಕಲಿಯಬೇಕು, ಅವರಿಗೆ ಗುಣಮಟ್ಟದ ಶಿಕ್ಷಣ ಸಿಗಬೇಕು, ಹೀಗೆ ಹಲವಾರು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ, ನಿಮ್ಮ ಕಡೆ ಒಳ್ಳೆಯ ಸೂಚನೆ ಇದ್ದರೆ ಕೊಡಿ ಅದನ್ನೂ ಜಾರಿಗೆ ತರೋಣ.

ಶ್ರೀ ಕೆ.ಶಿವಮೂರ್ತಿ:- Modern ಕಾಲೇಜು ಮಾಡಲು ಜಾಗ ಕೊಡಿ ಎಂದು ನಮಗೆ ಕೇಳುತ್ತಾರೆ, ನಮಗೆ ಜಾಗ ಎಲ್ಲಿ ಸಿಗುತ್ತದೆ ಸರ್, ಹಾಗಾದರೆ ನಮಗೆ ಕಾಲೇಜು ಬೇಡವೇ? ನಮಗೆ ನೀವು provision ಕೊಡಿ. ಹಿಂದಿನ ಸರ್ಕಾರಗಳು starting grant, starting infrastructure ಎಲ್ಲಾ ಮಾಡಿಕೊಡುತ್ತಾರೆ, ಇತ್ತೀಚಿನ ದಿವಸಗಳಲ್ಲಿ ಅದು ಇಲ್ಲ, ಹಾಗಾಗಿ ನಾವು ನಿಮ್ಮ ಜೊತೆ compete ಮಾಡುವುದಕ್ಕಾಗುವುದಿಲ್ಲ.

ಶ್ರೀ ಆರ್.ವಿ.ದೇಶಪಾಂಡೆ:- ಮಾನ್ಯ ಅಧ್ಯಕ್ಷರೆ, ನಿನ್ನೆ ರಮೇಶ್ ಕುಮಾರ್ ಅವರು, ಪುಟ್ಟಣ್ಣಯ್ಯನವರು ಮುಖ್ಯವಾಗಿ ಇವತ್ತು ನಮ್ಮ ಕಾಲೇಜುಗಳಲ್ಲಿ ಕಲಿಯುವ ವಿದ್ಯಾರ್ಥಿಗಳಿಗೆ Physical Education ಗೊತ್ತಿಲ್ಲ, sports ಪರಿಚಯ ಮಾಡುವುದಕ್ಕೆ ನಾವು ತಯಾರಿಲ್ಲ ಎಂದು ಪ್ರಸ್ತಾಪ ಮಾಡಿದರು. ಮೊನ್ನೆ higher council ನಲ್ಲಿ ಈ ವಿಷಯ ಬಂತು. ನಮ್ಮ ಎಲ್ಲಾ ವಿದ್ಯಾರ್ಥಿಗಳ ಸಮಯ, ವಿದ್ಯಾಭ್ಯಾಸದ ಪರೀಕ್ಷೆಗೆ ಹೋಗುತ್ತಿದೆ. ಇವತ್ತು ನಮ್ಮ ವಿದ್ಯಾರ್ಥಿಗಳ physic ಅನ್ನೂ ನೋಡಿ, ನೀವು PU to Degree college ಮಗುವನ್ನು ನೋಡಿದರೆ, ಆಗ ನಾವು ಪ್ರೈಮರಿ ಸ್ಕೂಲಿನಲ್ಲಿ ಇದ್ದೇವೆಲ್ಲಾ ಆ ರೀತಿಯ physic ಇದೆ. ಹಾಗಾಗಿ ನಮ್ಮ ಬೆಂಗಳೂರು ಯೂನಿವರ್ಸಿಟಿಯವರು ಇವತ್ತು ಒಂದು *initiative ತೆಗೆದುಕೊಂಡಿದ್ದಾರೆ.* Proposal to implement students can opt for Physical Education as their third option in B.A., we will consider introducing in B.Sc. later if students are interested in purchasing it further. We may introduce M.A. in physical educaton. ಹಾಗಾಗಿ ನಮ್ಮ ಗೌರವಾನ್ವಿತ ಸದಸ್ಯರೇನು ಪ್ರಸ್ತಾಪ ಮಾಡಿದ್ದಾರೆ, ಅದನ್ನು ನಾನು ಸಂಪೂರ್ಣವಾಗಿ ಒಪ್ಪುತ್ತೇನೆ,

Sports and physical education ಇದೊಂದು ವಿಷಯ ಇರಬೇಕು. ಹಾಗಾಗಿ ನಾವು physical education ಇದ್ದರೂ ಸಹ ಸಬ್ಜೆಕ್ಟ್ ಎಂದಿಲ್ಲ, ಮೂರು ಸಬ್ಜೆಕ್ಟ್‌ನಲ್ಲಿ ಒಂದು ಸಬ್ಜೆಕ್ಟ್ ಇಲ್ಲ, ನಾವು ಸ್ಪೋರ್ಟ್ಸ್ ಅಥವಾ ಫಿಸಿಕಲ್ ಎಜ್ಯುಕೇಷನ್ ಸಬ್ಜೆಕ್ಟ್ ಅನ್ನು ಮುಂದಿನ ವರ್ಷದಿಂದ ಜಾರಿಗೆ ತರುವ ಬಗ್ಗೆ higher council ನಲ್ಲಿ ಚರ್ಚೆ ಮಾಡಿ ಕ್ರಮ ತೆಗೆದುಕೊಳ್ಳುತ್ತೇವೆ.

ಉಪಾಧ್ಯಕ್ಷರು:- ಮಾನ್ಯ ದೇಶಪಾಂಡೆಯವರೆ, Physical Education ಜೊತೆಗೆ ಈಗ ನಮ್ಮಲ್ಲಿ ಒಂದು ಕಾಲೇಜಿನಲ್ಲಿ 1000 ವಿದ್ಯಾರ್ಥಿಗಳಿದ್ದಾರೆ, ಅಲ್ಲಿ even minimum sports material ಇಲ್ಲ, ಇಂಥ ಪರಿಸ್ಥಿತಿ ಬೇರೆ ಕಡೆಯಲ್ಲೂ ಇರಬಹುದು.

ಶ್ರೀ ಆರ್.ವಿ.ದೇಶಪಾಂಡೆ:- ಆದ ನಂತರ ರಾಜ್ಯ ಮತ್ತು ರಾಷ್ಟ್ರೀಯ ಮಟ್ಟದಲ್ಲಿ ಯಾರು ಒಂದು distinction ಪಡೆದುಕೊಂಡಿದ್ದಾರೆ, ಅವರಿಗೆ ನಾವು ಈ P.G. Seatನಲ್ಲಿ ಮೀಸಲಾತಿಯನ್ನು ಇಡುವ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆ. ಕೆಲವು ಸಾರಿ ಇವರ attendance short ಬರುತ್ತದೆ, ಕೆಲವು ಸಾರಿ ಇವರು ಗೇಮ್ಸ್‌ಗೆ ಹೋದಾಗ ಅಟೆಂಡೆನ್ಸ್ ಇಲ್ಲದೇ ಪರೀಕ್ಷೆಗೆ ಕೂರುವುದಕ್ಕಾಗುವುದಿಲ್ಲ, ಹಾಗಾಗಿ 25%ವರೆಗೆ attendance, if they go for sports activities, exemption ಕೊಡುವುದಕ್ಕೆ ಸಾಧ್ಯತೆ ಇದೆ, ಅದನ್ನೂ ನಾನು ಗಮನಿಸುತ್ತೇನೆ. ಮುಖ್ಯವಾಗಿ coaches ಇಲ್ಲ. ಇವತ್ತು ಖಾಸಗಿ ಕಾಲೇಜುಗಳಲ್ಲಿ coaches ಇರುತ್ತಾರೆ, ಹಾಗಾಗಿ coaches hire ಮಾಡುವುದಕ್ಕೆ ಒಂದು provision ಮಾಡುವುದಕ್ಕೂ ಸಹ ಸರ್ಕಾರ ಪ್ರಯತ್ನ ಮಾಡುತ್ತದೆ. ಇವತ್ತು ಮುಖ್ಯವಾಗಿ ಈ ಸಿಇಟಿ ವಿಚಾರದಲ್ಲಿ, ಮಾನ್ಯ ಸದಸ್ಯರಾದ ಶ್ರೀ ಅರವಿಂದ ಲಿಂಬಾವಳಿಯವರು ಮೆಡಿಕಲ್‌ನಲ್ಲಿ 158 ಸೀಟು second option ನಲ್ಲಿ ಉಳಿದಿದ್ದಾವೆಂದು ಪ್ರಸ್ತಾಪ ಮಾಡಿದರು. ಇದರ ಬಗ್ಗೆ ಹೆಚಿನ ಬೆಳಕನ್ನು ವೈದ್ಯಕೀಯ ಶಿಕ್ಷಣ ಸಚಿವರು ಚೆಲ್ಲುತ್ತಾರೆ. ನನ್ನ ಮಾಹಿತಿಯ ಪ್ರಕಾರ ಆ ತರಹದ ಪರಿಸ್ಥಿತಿ ಇಲ್ಲ. ಎರಡನೆಯದು ಕಳೆದ ವರ್ಷ ಸಿಇಟಿಯಲ್ಲಿ ಇಂಜಿನಿಯರಿಂಗ್-ಮೆಡಿಕಲ್ ನಲ್ಲಿ ಮೊದಲ 5 ರ್‍ಯಾಂಕ್ ಪಡೆಯುವ ವಿದ್ಯಾರ್ಥಿಗಳಿಗೆ ಅವರೆಲ್ಲಾ ಫೀ ಅನ್ನು ನಮ್ಮ Karnataka

Examination Authority ವತಿಯಿಂದ ತುಂಬುತ್ತೇವೆಂದು ನಿರ್ಣಯ ಮಾಡಿ ಆ ಫೀ ಅನ್ನು ತುಂಬಿದ್ದೇವೆ. ಈ ಸಾರಿ ಏಳೂ discipline ನಲ್ಲಿ first five rank students ಗೆ ಪ್ರೋತ್ಸಾಹ ನೀಡುವುದಕ್ಕೆ ಅದು ಇಂಜಿನಿಯರಿಂಗ್ ಇರಬಹುದು, ಡೆಂಟಲ್ ಇರಬಹುದು, ಮೆಡಿಕಲ್, ಫಾರ್ಮಸಿ ಇರಬಹುದು, ಅವರ ಫೀ ಅನ್ನು encourageಗಾಗಿ ತುಂಬಲು ನಾವು ನಿರ್ಣಯ ಮಾಡಿದ್ದೇವೆ. Just to encourage the medical students ಮುಖ್ಯವಾಗಿ ಡಾಕ್ಟರೇಟ್ ಬಗ್ಗೆ ಹೇಳುವುದಾದರೆ, ರಮೇಶ್ ಕುಮಾರ್ ಅವರು ನಿನ್ನೆ ನನಗೊಂದು ಡಾಕ್ಟರೇಟ್ ಅನ್ನು ಕೊಟ್ಟಿದ್ದಾರೆ, ಆ ಡಾಕ್ಟರೇಟ್ ಯಾವುದೆಂದು ನನಗೂ, ನಿಮಗೂ ಗೊತ್ತು. ನಾನು 100% ಒಪ್ಪಿಕೊಳ್ಳುತ್ತೇನೆ, ಡಾಕ್ಟರೇಟ್ ಕೊಡುವ ಬಗ್ಗೆಯೂ guidelines ಇವೆ. ಆದರೆ ಡಾಕ್ಟರೇಟ್ ಕೊಡುವಾಗ, ಗುಣಮಟ್ಟ, integrity, experience, social standing ವಿಚಾರ ಇರಬೇಕು. ಹಲವಾರು ಕಡೆ ಯಾರು ಅರ್ಹತೆ ಇಲ್ಲ ಅಂಥ ಜನರಿಗೂ ಡಾಕ್ಟರೇಟ್ ಕೊಟ್ಟಿದ್ದಾರೆ. ಇದರಲ್ಲಿ ಸರ್ಕಾರದ್ದೇನೂ ಪಾತ್ರವಿಲ್ಲ. ನೇರವಾಗಿ ಸಿಂಡಿಕೇಟ್ ನಿರ್ಣಯ ಮಾಡಿ ಚಾನ್ಸಲರ್ ಕಡೆ ಹೋಗಿ ತಂದು ಕೊಡುತ್ತಾರೆ. ಹಾಗಾಗಿ ಅದನ್ನು ನಾನು ಎಕ್ಸಾಮಿನ್ ಮಾಡುತ್ತೇನೆ, As a Pro Chancellor ಒಬ್ಬ Minister Pro Chancellor ಆಗಿರುತ್ತಾರೆ, ಇದನ್ನು ಶಿಫಾರಸ್ಸು ಮಾಡುವುದಕ್ಕಿಂತ ಮುಂಚೆ ಸರ್ಕಾರ ಅದನ್ನು ಪರಿಶೀಲನೆ ಮಾಡುವುದಕ್ಕೆ ಸಾಧ್ಯವೇ ಎನ್ನುವುದನ್ನು ನೋಡುತ್ತೇನೆ ಮತ್ತು ಇದರ ಬಗ್ಗೆ ಕಡಿವಾಣ ಹಾಕುವುದಕ್ಕೆ ಏನು ಸಾಧ್ಯವಿದೆ ಅದನ್ನೂ ನಾವು ಪ್ರಯತ್ನ ಮಾಡುತ್ತೇವೆ. ಇವತ್ತು ನಮ್ಮ ಯೂನಿವರ್ಸಿಟಿಗಳ ಬಗ್ಗೆ ರಮೇಶ್ ಕುಮಾರ್ ಅವರು ಪ್ರಸ್ತಾಪ ಮಾಡಿದ್ದಾರೆ, ನಾನು ಒಪ್ಪಿಕೊಳ್ಳುತ್ತೇನೆ, ಇವತ್ತು ವಿಶ್ವದ ಪ್ರಖ್ಯಾತ 200 ಯೂನಿವರ್ಸಿಟಿಗಳಲ್ಲಿ ಭಾರತ ದೇಶದಿಂದ ಯಾವ ಯೂನಿವರ್ಸಿಟಿಯೂ ಇಲ್ಲ. ಇವತ್ತು ಮೈಸೂರು ಯೂನಿವರ್ಸಿಟಿ ಆರಂಭವಾಗಿ 200 ವರ್ಷಗಳಾಗುತ್ತಾ ಬಂತು. 30 ವರ್ಷಗಳ ಹಿಂದೆ ಪ್ರಾರಂಭವಾದ ಸಿಂಗಾಪುರ ಯೂನಿವರ್ಸಿಟಿ, it is among the twenty in the world. ಹಾಗಾಗಿ ನಾನು ಒಪ್ಪಿಕೊಳ್ಳುತ್ತೇನೆ, ಸರ್ಕಾರದಿಂದಲೂ ಸಹ negligence ಆಗಿದೆ, ಅಲ್ಲಿರುವ ವ್ಯವಸ್ಥೆಗಳೂ ಸಹ deteriorate ಆಗಿದ್ದಾವೆ.

ಇವತ್ತು ಕೆಲವು ಜನ ವಿಸಿಟರ್ಸ್ ಬಂದಾಗ Vice Chancellor ಯಾರೆನ್ನುವುದ ಗೊತ್ತಾಗುವುದಿಲ್ಲ ಆ ಪರಿಸ್ಥಿತಿ ಮುಂಚೆ ಇರಲಿಲ್ಲ. ಹಾಗಾಗಿ ಇದರ ಬಗ್ಗೆ ನಾವು ಚಿಂತನೆ ಮಾಡಬೇಕಾಗುತ್ತದೆ, ಸಾಧ್ಯವಾದರೆ ಕಾನೂನಿಗೆ ತಿದ್ದುಪಡಿಯನ್ನು ತರಬೇಕಾಗುತ್ತದೆ. For Vice Chancellor post ನಾವು application call ಮಾಡುವುದಿಲ್ಲ. Search Committee ಯಲ್ಲಿ ಸದಸ್ಯರಿರುತ್ತಾರೆ, ನಾವು ನಾಮಿನೇಟ್ ಮಾಡುವಾಗ, distinguished ಜನರನ್ನು nominate ಮಾಡಿದ್ದೇವೆ. ಆದರೆ ಕೆಲವು ಲೋಪಗಳಾಗಿದ್ದಾವೆ, ಹಾಗಾಗಿ ಅಲ್ಲಿ ಘನತೆ, ಗೌರವವಿರಬೇಕು. ಒಬ್ಬ Vice Chancellor ಎಂದರೆ, he should be like a CEO of that University. ಇವತ್ತು ಬೆಳಿಗ್ಗೆ ಹೇಳಿದಂತೆ ಈ ಆ್ಯಕ್ಟಿವ್ ಯುಗದಲ್ಲಿ, ಸ್ಪರ್ಧಾಯುಗದಲ್ಲಿ Vice Chancellors ಬಹಳ ವಯಸ್ಸಾದರೆ ಆ ಯೂನಿವರ್ಸಿಟಿಯ ಗತಿ ಏನಾಗಬಹುದು? ಹಾಗಾಗಿ selection process ನಲ್ಲಿ ಎಲ್ಲರ ಮೇಲೂ ಜವಾಬ್ದಾರಿ ಇದೆ, ಇವತ್ತು ರಾಜಕೀಯ ಹಸ್ತಕ್ಷೇಪನೂ ಹೆಚ್ಚಾಗಿದೆ. ಹಾಗಾಗಿ ಇದರಿಂದ ದೂರವಿರುವುದಕ್ಕೆ ನಮ್ಮೆಲ್ಲರ ಸಹಮತವಾಗಬೇಕು, ಎಲ್ಲರ ಸಹಕಾರವನ್ನು ನಾನು ಅಪೇಕ್ಷಿಸುತ್ತಿದ್ದೇನೆ.

ಶ್ರೀ ಬಿ.ಆರ್.ಪಾಟೀಲ್:- ದುಡ್ಡಿನ ಪ್ರಭಾವವಾಗಿದೆ.

ಶ್ರೀ ಆರ್.ವಿ.ದೇಶಪಾಂಡೆ:- ಈಗ ಮುಖ್ಯವಾಗಿ ವಿಶ್ವದಲ್ಲಿ ಈ Uniersities ನವರು writings ಮಾಡುತ್ತಾರೆ. ನಮ್ಮ QS ಎಂದು ಸಂಸ್ಥೆ ಇದೆ, ಶಾಂಘೈ Joe Tomen ಸಂಸ್ಥೆ ಇದೆ, London times, The World ಎಂದು ಇದೆ, ಆದರೆ ಭಾರತ ದೇಶದಲ್ಲಿ ಈ ಯೂನಿವರ್ಸಿಟಿಗಳ ರೈಟಿಂಗ್ಸ್ ಇಲ್ಲ. ನಾವು ಕರ್ನಾಟಕದಿಂದ ಇದು ಪ್ರಾರಂಭ ಮಾಡಬೇಕೆಂದು ಹೇಳಿ, ಆ ಕಾಲಕ್ಕೆ ಹೆಜ್ಜೆ ಹಾಕಿದ್ದೇವೆ. ಇದರಿಂದ ಏನಾಗುತ್ತದೆ ಎಂದರೆ; University wrtings ನಲ್ಲಿ research paper ಎಷ್ಟು ಮಾಡಿದ್ದಾರೆ, ಮೂಲಭೂತ ಸೌಕರ್ಯಗಳು ಏನಿವೆ? ಯಾವ ರೀತಿ faculty ಇದೆ? ಇದರ ಮೇಲೆ writing ಇದ್ದಾಗ there will be competition among the universities to improve their infrastructure, writing and research papers. ಇದರ ಲಾಭ

ವಿದ್ಯಾರ್ಥಿಗಳಿಗೆ ಆಗಬೇಕು. ಹಾಗಾಗಿ ನಾವು ಇದರ ಬಗ್ಗೆ ಹೆಜ್ಜೆ ತೆಗೆದುಕೊಂಡು Indian Centre for Assessment nad affiliation, non profit body, ಅವರ ಜೊತೆ ಸಮಾಲೋಚನೆ ಮಾಡುತ್ತಿದ್ದೇವೆ. ಬಹುತೇಕ ಭಾರತದೇಶದಲ್ಲಿ Karnataka will be the first state to take this step with regard to writing and research. ಇದರಿಂದ ಪಾರದರ್ಶಕತೆ ಆಡಳಿತದಲ್ಲಿ ಬರಬಹುದು, ಭ್ರಷ್ಟಾಚಾರದ ಮೇಲೆ ಕಡಿವಾಣ ಬರಬಹುದು, ವೆಬ್ ಸೈಟ್ಸ್ ಇದೆ, but they are not informative. ಹಾಗಾಗಿ web sites informative ಇದ್ದಾಗ ಇಡೀ ವಿಶ್ವಕ್ಕೇ ಆ ವಿಶ್ವವಿದ್ಯಾಲಯದಲ್ಲಿ ಏನು faculty ಇದೆ, infrastructure ಇದೆ, ಏನು ರೀಸರ್ಚ್ ಮಾಡಿದ್ದಾರೆ, ಎಂದು ಗೊತ್ತಾಗುತ್ತದೆ. ಯೂನಿವರ್ಸಿಟಿಯಲ್ಲಿ ಡೇಟಾ ಇಲ್ಲ. ನಾನು ಮೊದಲನೇ ಬಾರಿ ವೈಸ್ ಛಾನ್ಸಲರ್ ಜೊತೆ ಚರ್ಚೆ ಮಾಡುವಾಗ ನಾನು ಕೇಳಿದೆ, ನಿಮ್ಮ ಯೂನಿವರ್ಸಿಟಿ ಯಾವಾಗ ಪ್ರಾರಂಭವಾಯಿತು ಅವತ್ತಿನಿಂದ ಅಫಿಲಿಯೇಟೆಡ್ ಕಾಲೇಜುಗಳಿಂದ ಎಷ್ಟು ಜನ graduates ಇದ್ದಾರೆಂದು ನಿಮ್ಮ ಕಡೆ ಡೇಟಾ ಇದೆಯಾ ಎಂದು ಕೇಳಿದೆ. They said no, we don not have any data. ಎಲ್ಲಿಯೂ ಇಲ್ಲ. ನಾನು ಡೇಟಾ ಮಾಡಿ ಎಂದು ಹೇಳಿದ್ದೇನೆ. ಯಾರು ನಿಮ್ಮ ಯೂನಿವರ್ಸಿಟಿಯಿಂದ ಡಿಗ್ರಿ ಪಡೆದುಕೊಂಡಿದ್ದಾರೆ ಯಾವಾಗ ಡಿಗ್ರಿ ಪಡೆದುಕೊಂಡ? ಯಾವ ಡಿಗ್ರಿ ಪಡೆದುಕೊಂಡ, ಈಗ ರಸ್ತೆ ಮೇಲಿದ್ದಾನೋ ಅಥವಾ ಅವರು ಕೆಲಸ ಮಾಡುತ್ತಿದ್ದಾನೋ? ಗೌರವದಿಂದ ಇದ್ದಾನೋ ಇಲ್ಲವೆಂದು ತಿಳಿದುಕೊಳ್ಳಬೇಕು. What is the use of giving degrees. ಹಾಗಾಗಿ ಯೂನಿವರ್ಸಿಟಿಗಳ ಮೇಲೆ ಸಹ ಸಾಕಷ್ಟು ಜವಾಬ್ದಾರಿಗಳಿವೆ. ಅವರು ನಮ್ಮ university actions ಬಗ್ಗೆ ಕೇಳಿದ್ದಾರೆ. ನಮ್ಮ ರಘುವಿಠಲಾಚಾರ್ ಕಮಿಟಿಯವರು ಮೈಸೂರು ಯೂನಿವರ್ಸಿಟಿಯಲ್ಲಿ 2007ನೇ ಇಸವಿಯಲ್ಲಿ ನಮ್ಮ ಮೀಸಲಾತಿ ಗಮನಕ್ಕೆ ತೆಗೆದುಕೊಂಡಿರಲಿಲ್ಲ. ಕೆಲವು ಆಡಳಿತ ಲೋಪದಿಂದ ಏನು ಪೋಸ್ಟ್ ಸೆಲೆಕ್ಟ್ ಮಾಡಿದ್ದರು ಅವು ಕ್ಯಾನ್ಸಲ್ ಮಾಡಬೇಕೆಂದು ಆದೇಶ ಮಾಡಿದ್ದೇವೆ. ಈಗಾಗಲೇ ಮೈಸೂರು ಯೂನಿವರ್ಸಿಟಿಗೆ ಆದೇಶ ಕೊಟ್ಟಿದ್ದೇವೆ, ಅವರ ರೆಸಲ್ಯೂಷನ್ ಕ್ಯಾನ್ಸಲ್

ಮಾಡಿದ್ದೇವೆ. ಕ್ರಮ ತೆಗೆದುಕೊಳ್ಳುವುದಕ್ಕೆ ಹೇಳಿದ್ದೇವೆ. ಅದೇ ಪ್ರಕಾರ ನಮ್ಮ Karnataka State Women University ಯಲ್ಲಿ ಸಹ ವೈಸ್ ಛಾನ್ಸಲರ್ ಯಾರು ಹಣ miss appropriation ಮಾಡಿದ್ದರು? ಅವರಿಂದ ಹಣ ರಿಕವರಿ ಬಗ್ಗೆ ಆದೇಶ ಕೊಟ್ಟಿದ್ದೇವೆ. ಹಾಗಾಗಿ ಇವತ್ತು ಪಾರದರ್ಶಕವಾಗಿ ನಾವು ನಮ್ಮ ಇಲಾಖೆ ಮುಖಾಂತರ ಕೆಲಸ ಮಾಡುತ್ತಿದ್ದೇವೆ. ಅದು ಇನ್ನೂ ಹೆಚ್ಚಿನ ಪಾರದರ್ಶಕತೆ ಬರಬೇಕಾಗಿದೆ. ಗುಣಮಟ್ಟದ ಶಿಕ್ಷಣ ಮಕ್ಕಳಿಗೆ ಯಾವ ಪ್ರಮಾಣದಲ್ಲಿ ಸಿಗಬೇಕು ಅದು ಸಿಗುತ್ತಿಲ್ಲ ಅದೂ ನನಗೆ ಗೊತ್ತು. ಆ ದಿಕ್ಕಿನಲ್ಲಿ ಸಹ ಸದಸ್ಯರು ಹಲವಾರು ಸಲಹೆಗಳನ್ನು ಕೊಟ್ಟಿದ್ದಾರೆ. ಅದು ಎಲ್ಲಾ ಗಮನದಲ್ಲಿಟ್ಟುಕೊಂಡು ನಾವು ಕ್ರಮಗಳನ್ನು ತೆಗೆದುಕೊಳ್ಳುತ್ತೇವೆ. Registrar appointment ನಲ್ಲಿ ಮಾನ್ಯ ರಮೇಶ್ ಕುಮಾರ್‌ರವರು ಪ್ರಸ್ತಾಪ ಮಾಡಿದ್ದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಆದಷ್ಟು ಮಟ್ಟಿಗೆ ನಾವು continuity ಕೊಡುತ್ತಿದ್ದೇವೆ. ಮುಂಚೆ KAS, IAS, Civil Servie Officers Registrars ಎಂದು ಇದ್ದರು. ಹಾಗಾಗಿ ಅದನ್ನೂ ಪರಿಶೀಲನೆ ಮಾಡುತ್ತೇನೆ. ಅದರ ಅವಶ್ಯಕತೆ ಇದೆ. ಶಿಸ್ತು ಇರಬೇಕು, ಭಯ ಇರಬೇಕು, ಆಡಳಿತದಲ್ಲಿ ಹಿಡಿತ ಇರಬೇಕು ಆ ನಿಟ್ಟಿನಲ್ಲಿ ಸಹ ನಾವು ಕ್ರಮಗಳನ್ನು ತೆಗೆದುಕೊಳ್ಳುತ್ತೇವೆ. ಇಷ್ಟು ಹೇಳಿ ಹಲವಾರು ವಿಚಾರಗಳು ಇನ್ನೂ ಹೇಳುವುದು ಇದೆ. ತಾವು ನನ್ನ ಕಡೆ ನೋಡುತ್ತಿದ್ದೀರಿ. ಕೌನ್ಸಿಲಿಂಗ್ ಕಾಯಿದೆಯಲ್ಲಿ ಕೂಡ ನಾವು ತಿದ್ದುಪಡಿ ತರಬೇಕಾಗಿದೆ. ಅದರ ಬಗ್ಗೆಯೂ ಮಾನ್ಯ ಲಿಂಬಾವಳಿಯವರು ಪ್ರಸ್ತಾಪ ಮಾಡಿದರು. ಮುಖ್ಯವಾಗಿ mutual transferಗೆ ಅವಕಾಶ ಇಲ್ಲ, NCC ಗೆ ಅವಕಾಶವಿಲ್ಲ, ಅದನ್ನೂ ಸಹ ನಾವು ಮಾಡುತ್ತೇವೆ, ಅಷ್ಟೇ ಅಲ್ಲ, ಏಡೆಡ್ ಕಾಲೇಜುಗಳಲ್ಲಿ ಪ್ರಾಂಶುಪಾಲರುಗಳ ಬಗ್ಗೆ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದಾಗ UGC guidelines ಪ್ರಕಾರ ಎಲ್ಲಾ ಪ್ರಾಂಶುಪಾಲರ ಹುದ್ದೆಗಳು direct recruitment ಆಗಬೇಕು. ಆದರೆ ನಾವು ಯಾರು 20 ವರ್ಷ 30 ವರ್ಷಗಳಿಂದ ದುಡಿದಿದ್ದಾರೆ ಅವರಿಗೆ ಸಹಾಯ ಮಾಡುವ ದೃಷ್ಟಿಯಿಂದ 50% ಮುಂಬಡ್ತಿಯಿಂದ ಹಾಗೂ 50% ನೇರ ನೇಮಕಾತಿಯಿಂದ ಮಾಡಬೇಕೆಂದು recruitment rules amendment ಮಾಡಿ

ಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದೇವೆ. ಮಾನ್ಯ ಸದಸ್ಯರುಗಳು ಹಲವಾರು ಸಲಹೆಗಳನ್ನು ಕೊಟ್ಟಿದ್ದಾರೆ, ಎಲ್ಲದಕ್ಕೂ ಉತ್ತರ ಕೊಡುವುದಕ್ಕಾಗುವುದಿಲ್ಲ.

(ಗೊಂದಲ)

ಶ್ರೀ ಪಿ.ಆರ್.ನರೇಂದ್ರಸ್ವಾಮಿ:- Aided institutionsಗಳಲ್ಲಿ SC/ST backlog ಹುದ್ದೆಗಳು ತುಂಬಾ ಇವೆ. ಆದರೆ ತಾವು ಏಡ್ ಕೊಡಬೇಕಾದಾಗ ಅವರಿಗೆ ಕೆಲವೊಂದು concessions ನೀಡಿ ಏಡ್ ಕೊಡುತ್ತಿದ್ದೀರಿ. ಮುಂದೆ ಈ ಬ್ಯಾಕ್‌ಲಾಗ್ ಹುದ್ದೆಗಳನ್ನು ತುಂಬಿಕೊಳ್ಳತಕ್ಕಂತಹ ಷರತ್ತುಗಳಿಗೊಳಪಟ್ಟು ಏಡ್ ನೀಡಲಾಗಿದೆ ಎಂದು ಹೇಳುತ್ತಿದ್ದೀರಿ. ಇವತ್ತಿನವರೆಗೂ ನಿಮ್ಮ ಷರತ್ತುಗಳನ್ನ ಯಾವ aided institutions ಪೂರೈಸಿಲ್ಲ. ಜೊತೆಗೆ ಯೂನಿವರ್ಸಿಟಿಗಳೂ ಕೂಡ ಇವತ್ತು ಸಾಕಷ್ಟು ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿ ಮಾಡುವುದರಲ್ಲಿ ವಿಫಲಗೊಂಡಿದೆ. ತಮ್ಮಲ್ಲಿ ಮಾಹಿತಿ ಇದೆ ತೆಗೆದು ನೋಡಿ. ಇವತ್ತು ಪ್ರತಿಯೊಂದು ಯೂನಿವರ್ಸಿಟಿಯಲ್ಲಿ SC/ST student ಯಾವುದೋ ಒಂದು subject ನಲ್ಲಿ toper ಆಗಿದ್ದರೆ ಅವನಿಗೆ ನೇರವಾಗಿ ಗೆಜೆಟೆಡ್ ಪೋಸ್ಟ್ ಕೊಡುವ ಒಂದು ಸರ್ಕಾರಿ ಆದೇಶ ಇದೆ. ಇತ್ತೀಚಿನ ದಿನಗಳಲ್ಲಿ ಅದು ನಡೆಯುತ್ತಿಲ್ಲ. ತಾವು ಇದನ್ನೆಲ್ಲಾ ಮನಗಂಡು, ಇವತ್ತು ವಿಜಯ ಕರ್ನಾಟಕ ಪತ್ರಿಕೆಯಲ್ಲಿ ಒಂದು ವರದಿ ಬಂದಿದೆ.

ಉಪಾಧ್ಯಕ್ಷರು:- ನೀವು clarification ಕೇಳುವುದು ಬಿಟ್ಟು ಭಾಷಣ ಮಾಡಿದರೆ ಹೇಗೆ?

ಶ್ರೀ ಪಿ.ಆರ್.ನರೇಂದ್ರಸ್ವಾಮಿ:- Schedule Caste, it is a burning issue. I am from the reserved constituency; I only have to raise that question. It is my findings in SC/ST House Committee. ಇವತ್ತು ಪತ್ರಿಕೆಯಲ್ಲಿ ಬಂದಿರುವುದು ಏನೆಂದು ಕೇಳಿ. ಒಬ್ಬ ವಿದ್ಯಾರ್ಥಿ ಎರಡನೇ ತರಗತಿಯಿಂದ ಪ್ರವೇಶ ಹೊಂದಿ ಪಿ.ಯು.ಸಿ. ಯಲ್ಲಿ ಒಳ್ಳೆಯ ರ್‍ಯಾಂಕ್ ಬಂದು ಅವನಿಗೆ ಇಂಜಿನಿಯರಿಂಗ್ ಸೀಟ್ ಸಿಕ್ಕಿದೆ. ಆದರೆ ಎಂಟ್ರೆನ್ಸ್‌ನಲ್ಲಿ ಅವನಿಗ ಅಡ್ಮಿಷನ್ ನಿರಾಕರಿಸುತ್ತಿದ್ದಾರೆ. ಏಕೆಂದರೆ BEO ರವರಿಂದ ಇವನು

ಒಂದನೇ ತರಗತಿಯಿಂದ ವ್ಯಾಸಂಗ ಮಾಡಿಲ್ಲ ಎನ್ನತಕ್ಕಂತಹ ತಪ್ಪು ವರದಿ. ಮರಳಿ ಬಾ ಶಾಲೆಗೆ ಎನ್ನುವಂತಹ ಒಂದು ವಾಕ್ಯದೊಡನೆ ಶಾಲೆ ಬಿಟ್ಟಂತಹ ಮಕ್ಕಳನ್ನು ನಾನು ಶಾಲೆಗೆ ಕರೆಯುತ್ತಿದ್ದೇವೆ. ಒಬ್ಬ Schedule Caste ಹುಡುಗ ಎಲ್ಲೋ ಕೂಲಿ ಮಾಡುತ್ತಿದ್ದವನ ಮಗ ಕಷ್ಟಪಟ್ಟು ಇವತ್ತು ಅಲ್ಲಿಯತನಕ ಬಂದಿದ್ದಾನೆ. ಅವನಿಗೆ ನಿರಾಕರಿಸಿರುವುದನ್ನು ಬಿಟ್ಟು ದಯವಿಟ್ಟು ಅವನಿಗೆ ಅಡ್ಮಿಷನ್ ಕೊಡಬೇಕು. ಇಂಜಿನಿಯರಿಂಗ್ ರಿಜೆಕ್ಟ್ ಆಯಿತು ಎಂದು ಅನಿವಾರ್ಯವಾಗಿ B.Sc. ಗೆ ಸೇರಿದ್ದಾನೆ. ದಯವಿಟ್ಟು ಇದನ್ನು ಸರಿಪಡಿಸಿ.

ಶ್ರೀ ಆರ್.ವಿ.ದೇಶಪಾಂಡೆ:– ಮಾನ್ಯ ಅಧ್ಯಕ್ಷರೆ, ಶಾಸಕರು ದಿನಾ ನನಗೆ ಭೇಟಿಯಾಗುತ್ತಾರೆ. ಆದರೆ ನನ್ನ ಕಡೆ ಇದುವರೆಗೂ ಈ ವಿಷಯವನ್ನು ಪ್ರಸ್ತಾಪ ಮಾಡಲಿಲ್ಲ. ಇದು ವ್ಯಕ್ತಿಗತ ಪ್ರಶ್ನೆ ಇದೆ, ನಾನು ಎಕ್ಸಾಮಿನ್ ಮಾಡುತ್ತೇನೆ. ಯಾರಿಗೂ ಅನ್ಯಾಯವಾಗುವುದಕ್ಕೆ ಬಿಡುವುದಿಲ್ಲ. ಬ್ಯಾಕ್‌ಲಾಗ್ ಪ್ರಶ್ನೆಯೇ ಇಲ್ಲ. ಬ್ಯಾಕಲಾಗ್ ಯಾವ ಫೈಲ್ ಬಂದರೂ ನಾವು ಕ್ಲಿಯರ್ ಮಾಡುತ್ತಿದ್ದೇವೆ.

(ಗೊಂದಲ)

ಉಪಾಧ್ಯಕ್ಷರು:– ಒಬ್ಬೊಬ್ಬರೇ ಹೇಳಿ. ಮಂತ್ರಿಗಳೇ ನಿಮ್ಮ ರಿಪ್ಲೈ ಮುಗಿತಾ? Clarification ಗೆ ಅವಕಾಶ ಕೊಡೋಣ.

ಶ್ರೀ ಈಶ್ವರ ಭೀಮಣ್ಣ ಖಂಡ್ರೆ:– ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಸವಿಸ್ತಾರವಾಗಿ ಉತ್ತರ ಕೊಟ್ಟಿದ್ದಾರೆ. ಅವರು ಬಂದ ಮೇಲೆ ಉನ್ನತ ಶಿಕ್ಷಣವನ್ನು ಸಾಕಷ್ಟು ಅಭಿವೃದ್ಧಿ ಕಡೆ ತೆಗೆದುಕೊಂಡು ಹೋಗಿದ್ದಾರೆ. ನನ್ನ ಒಂದು ವಿಷಯ ಏನೆಂದರೆ, ಹೈದರಾಬಾದ್ ಕರ್ನಾಟಕ ವಿಭಾಗದಲ್ಲಿ ಪದವಿ ಕಾಲೇಜುಗಳು ಇವೆ. 20 ವರ್ಷಗಳಿಂದ ಪದವಿ ಕಾಲೇಜುಗಳಲ್ಲಿರುವ ಹುದ್ದೆಗಳು ಖಾಲಿ ಇವೆ. ಹುದ್ದೆ ಖಾಲಿ ಇದೆ ಎಂದು ಒಪ್ಪಿಕೊಂಡಿದ್ದಾರೆ. ಆ ಹುದ್ದೆಗಳೇನು ಹೊಸದಾಗಿ ಸೃಷ್ಟಿ ಮಾಡುವಂಥದ್ದಲ್ಲ. 80% ಹುದ್ದೆ ಖಾಲಿ ಇದ್ದ ಕಾರಣ ಆ ಭಾಗದಲ್ಲಿರತಕ್ಕಂತಹ ಜನ ಉನ್ನತ ಶಿಕ್ಷಣದಿಂದ ವಂಚಿತರಾಗಿದ್ದಾರೆ. ಹಿಂದುಳಿದವರು, ದಲಿತರು, ಅಲ್ಪಸಂಖ್ಯಾತರು ಎಲ್ಲರೂ

ಇದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಅವರಿಗೆ ಉನ್ನತ ಶಿಕ್ಷಣ ಗುಣಮಟ್ಟದ ಶಿಕ್ಷಣ ಕೊಡುವುದಕ್ಕೆ ಸಾಧ್ಯವಾಗುತ್ತಿಲ್ಲ. ಕಾಲಮಿತಿಯಲ್ಲಿ ಈ ವರ್ಷ ಆದರೂ ಹೈದರಾಬಾದ್ ಕರ್ನಾಟಕ ವಿಭಾಗದಲ್ಲಿರುವಂತಹ ಅಥವಾ ಕರ್ನಾಟಕ ರಾಜ್ಯದಾದ್ಯಂತ ಖಾಲಿ ಇದ್ದಂತಹ ಅನುಮೋದಿತ ಹುದ್ದೆಗಳ ಭರ್ತಿ ಮಾಡಲಿಕ್ಕೆ ಸರ್ಕಾರ ಕ್ರಮ ಜರುಗಿಸುವುದೇ ಎಂಬ ಬಗ್ಗೆ ನಿಖರವಾದ ಉತ್ತರವನ್ನು ಮಾನ್ಯ ಸಚಿವರು ಕೊಡಬೇಕು.

ಶ್ರೀ ಆರ್.ವಿ.ದೇಶಪಾಂಡೆ:- ಮಾನ್ಯ ಈಶ್ವರ ಖಂಡ್ರೆಯವರು ಉತ್ತರ ಕೊಡುವಾಗ ತಾವು ಕೇಳಲಿಲ್ಲ. ಏಡೆಡ್ ಕಾಲೇಜುಗಳಲ್ಲಿ 2003ನೇ ಇಸವಿಯಿಂದ retirement, death, resignation ನಿಂತ ತೆರವಾದ ಹುದ್ದೆಗಳಿಗೆ recruitment ಮಾಡುವುದಕ್ಕೆ ಅವಕಾಶ ಕೊಟ್ಟಿಲ್ಲ. 3900 ಅಥವಾ 3850 ಹುದ್ದೆಗಳು ಖಾಲಿ ಇವೆ. ಅದಕ್ಕೆ ಅನುಮತಿ ಕೊಡುವ ಬಗ್ಗೆ ಪರಿಶೀಲನೆ ಮಾಡುತ್ತಿದ್ದೇವೆ ಎಂದು ನಾನು ಹೇಳಿದ್ದೇನೆ. ಅದು grant-in-aid committee ಯಲ್ಲಿ ಚರ್ಚೆಯಾಗುತ್ತಿದೆ.

(ಗೊಂದಲ)

ಶ್ರೀ ರಾಜು ಅಲಗೂರು:- ಮಾನ್ಯ ಅಧ್ಯಕ್ಷರೆ, ಹಿಂದೆ ಯೂನಿವರ್ಸಿಟಿಯಲ್ಲಿ ರ್‍ಯಾಂಕ್ ಬಂದಂತಹ SC/ST ವಿದ್ಯಾರ್ಥಿಗಳಿಗೆ ನೇರ ನೇಮಕಾತಿ ಮಾಡುವ ವ್ಯವಸ್ಥೆ ಇತ್ತು. ಆ ವ್ಯವಸ್ಥೆ ಪುನರಾರಂಭ ಮಾಡಬೇಕೆಂದು ಕೇಳಿದ್ದೆವು, ಅದಕ್ಕೆ ತಾವು ಉತ್ತರ ಕೊಟ್ಟಿಲ್ಲ, ಉತ್ತರ ಕೊಡಬೇಕೆಂದು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ.

ಶ್ರೀ ಆರ್.ವಿ.ದೇಶಪಾಂಡೆ(ಉನ್ನತ ಶಿಕ್ಷಣ ಸಚಿವರು):- ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿರುವಂಥದ್ದರ ಬಗ್ಗೆ ಪರಿಶೀಲಿಸುತ್ತೇವೆ.

ಶ್ರೀ ಜೆ.ಹೆಚ್. ಶ್ರೀನಿವಾಸ್(ತರೀಕೆರೆ):- ಮಾನ್ಯ ಉಪಾಧ್ಯಕ್ಷರೆ, Aided Degree college ಗಳಲ್ಲಿ, ಸರ್ಕಾರಿ ಡಿಗ್ರಿ ಕಾಲೇಜುಗಳಲ್ಲಿ students and lecturers ಅನುಪಾತದಲ್ಲಿ ತುಂಬಾ ವ್ಯತ್ಯಾಸವಿದೆ. ಪ್ರೈವೇಟ್ ಕಾಲೇಜ್‌ಗಳಲ್ಲಿ ತುಂಬಾ ಜನ lecturers ಇದ್ದಾರೆ. ಸರ್ಕಾರ ನಿಗದಿ ಮಾಡಿರುವುದಕ್ಕಿಂತ

ಹೆಚ್ಚು ಪ್ರೈವೇಟ್ ಡಿಗ್ರಿ ಕಾಲೇಜ್‌ಗಳಲ್ಲಿರುತ್ತಾರೆ. ಎಲ್ಲಿ lecturers ಕಡಿಮೆ ಇದ್ದಾರೋ ಅಲ್ಲಿಗೆ lecturers transfer ಮಾಡುವುದಕ್ಕೆ ಇದುವುದಕ್ಕೆ ಇದುವರೆಗೆ ಆಗಿಲ್ಲ. ಈ ರೀತಿ ಎಲ್ಲಿ ಲೆಕ್ಚರರ್‌ಗಳು ಕಡಿಮೆ ಇದ್ದಾರೋ ಅಲ್ಲಿಗೆ ಸರ್ಕಾರ ಲೆಕ್ಚರ್‌ರ್‌ಗಳನ್ನು ಟ್ರಾನ್ಸ್‌ಫರ್ ಮಾಡಬೇಕು. ಮಾನ್ಯ ಮಂತ್ರಿಗಳು ಈ ವಿಚಾರದಲ್ಲಿ ದೃಢ ನಿರ್ಧಾರ ತೆಗೆದುಕೊಂಡು ಕೆಲವೊಂದು powerful ಇರುವ institutions ಗಳಲ್ಲಿ lecturers ಇದ್ದಾರೆ. ಅವರಿಗೆ ಸಂಬಳವನ್ನು ಸರ್ಕಾರದ ದುಡ್ಡಿನಲ್ಲಿ ಕೊಡುತ್ತಿರುವುದು. ದಯವಿಟ್ಟು ಇದರ ಬಗ್ಗೆ ತೆಗೆದುಕೊಳ್ಳುವ ಕ್ರಮವೇನು ಎನ್ನುವುದನ್ನು ಮಾನ್ಯ ಸಚಿವರು ಕೊಡುವ ಉತ್ತರದಲ್ಲಿ ಹೇಳಬೇಕು.

ಶ್ರೀ ಕಾಶ್ಯಪ್ಪನವರ್ ವಿಜಯಾನಂದ್ ಶಿವಶಂಕರಪ್ಪ(ಹುನಗುಂದ):- ಮಾನ್ಯ ಸರ್ಕಾರ ಕೆಲವಷ್ಟು ಡಿಗ್ರಿ ಕಾಲೇಜ್‌ಗಳಿಗೆ ಅನುಮತಿಯನ್ನು ನೀಡಿದೆ. ಆ ರೀತಿ ಅನುಮತಿಯನ್ನು ಕೊಟ್ಟಿರತಕ್ಕಂಥ ಡಿಗ್ರಿ ಕಾಲೇಜ್‌ಗಳನ್ನು ಇದೇ ಶೈಕ್ಷಣಿಕ ವರ್ಷದಿಂದ ಪ್ರಾರಂಭ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎ.ಮಂಜು(ಅರಕಲಗೂಡು):- ಮಾನ್ಯ ಉಪಾಧ್ಯಕ್ಷರೆ, ಇವತ್ತು ಪತ್ರಿಕೆಗಳಲ್ಲಿ ನಾನು ಓದಿದೆ, ವಿಶ್ವವಿದ್ಯಾಲಯಗಳಲ್ಲಿ ಸೆನೆಟ್, ಸಿಂಡಿಕೇಟ್‌ನ ಬಗ್ಗೆ ಹಲವಾರು ವಿಚಾರಗಳನ್ನು ಬರೆದಿರತಕ್ಕಂಥದ್ದನ್ನು ನಾನು ಪತ್ರಿಕೆಯಲ್ಲಿ ನೋಡಿ ಓದಿ ನನಗೆ ನೋವಾಯಿತು. ನಾನು ಒಬ್ಬ ಯೂನಿವರ್ಸಿಟಿಯ ಸಿಂಡಿಕೇಟ್ ಸದಸ್ಯನಾಗಿ, ಇತ್ತೀಚಿನ ದಿನಗಳಲ್ಲಿ ಸೆನೆಟ್ ನಡೆದುಕೊಂಡಂಥ ದಾರಿಯ ಬಗ್ಗೆ, ವೈಸ್ ಛಾನ್ಸಲರ್‌ಗಳನ್ನು ಅಪಾಯಿಂಟ್ ಮಾಡತಕ್ಕಂಥ ದಾರಿ ಬಗ್ಗೆ ಹಲವಾರು ಸದಸ್ಯರುಗಳು ಗಮನವನ್ನು ಸೆಳೆದರು. ಅದಕ್ಕೆ ಕಾರಣವಿಷ್ಟೇ, ಮೊದಲು ಎಲ್ಲಿಯವರೆವಿಗೆ Elected Body ಇರುವುದಿಲ್ಲವೋ ಅಲ್ಲಿಯವರೆವಿಗೆ ನೀವು ಯಾವುದೇ ಆದಂಥ ಒಂದು ಕಾನೂನನ್ನು implement ಮಾಡುವುದಕ್ಕೆ ಆಗುವುದಿಲ್ಲ. ಇದು ವ್ಯವಸ್ಥಿತವಾಗಿ ಹಿಂದೆ ಇದ್ದಂಥ Act ನ ಬದಲಾವಣೆಯನ್ನು ಅಂದಿನ ವೈಸ್ ಛಾನ್ಸಲರ್‌ಗಳು ಐ.ಎ.ಎಸ್. ಆಫೀಸರ್‌ಗಳ ಮುಖಾಂತರ ಮಾಡಿ ಅವರ ಅನುಕೂಲಕ್ಕೆ Act

ಅನ್ನು ಬದಲಾವಣೆ ಮಾಡಿಕೊಂಡಿದ್ದನ್ನು ನಾವು ನೋಡಿದ್ದೇವೆ. ಇದು ನಿಜವಾಗಿಯೂ ಕೂಡ ಅದೇನಾದರೂ implement ಆಗಬೇಕು ಎನ್ನುವುದಾದರೆ, Act ಅನ್ನು ಬದಲಾವಣೆ ಮಾಡಿಕೊಂಡಿದ್ದನ್ನು ನಾವು ನೋಡಿದ್ದೇವೆ. ಇದು ನಿಜವಾಗಿಯೂ ಕೂಡ ಅದೇನಾದರೂ implement ಆಗಬೇಕು ಎನ್ನುವುದಾದರೆ, Act ಅನ್ನು ಮತ್ತೆ ಪುನರ್ ಪರಿಶೀಲನೆ ಮಾಡಿ ಬದಲಾವಣೆಯನ್ನು ಮಾಡಬೇಕಾಗುತ್ತದೆ. ಕಾರಣವಿಷ್ಟೇ, ಸೆನೆಟ್ ಎಂದರೆ ಮೊದಲು Graduate constituency, Engineer constituency ಯಿಂದ ಬರತಕ್ಕಂಥ system ಹಿಂದೆ ಏನಿತ್ತೋ ಅದನ್ನು ವಾಪಸ್ ತರಬೇಕು. ಇವತ್ತು VTU Institutions ಗೆ ಸೆನೆಟ್ ಸಿಂಡಿಕೇಟ್ ನಾಮಿನೇಶನ್ ಆಗಬೇಕಾದರೆ ಅವನಿಗೆ ವಿದ್ಯಾರ್ಹತೆ ಇಂಜಿನಿಯರಿಂಗ್ ಇರಬೇಕೆಂದು ಇದ್ದರೂ ಕೂಡ ಬಿ.ಎ., ಬಿ.ಕಾಂ., ಓದಿದವರನ್ನು ಸಿಂಡಿಕೇಟ್ ಸದಸ್ಯನನ್ನಾಗಿ ನಾಮಿನೇಟ್ ಮಾಡುತ್ತಾರೆಂದರೆ ಯಾವ ಮಟ್ಟಕ್ಕೆ ವೈಸ್ ಛಾನ್ಸಲರ್ ರೆಕಮೆಂಡ್ ಮಾಡುತ್ತಾರೆ ಎನ್ನುವುದನ್ನು ನಾವು ತಿಳಿದುಕೊಳ್ಳಬೇಕು. ಈಗ ಡಾಕ್ಟರೇಟ್ ಬಗ್ಗೆ ಮಾತನಾಡುತ್ತಿದ್ದರು. ಡಾಕ್ಟರೇಟ್ ಕೊಡುತ್ತಾ ಇರತಕ್ಕಂಥದ್ದು ಕೊಡುತ್ತಿಲ್ಲ, ಯಾರೂ ತೆಗೆದುಕೊಳ್ಳುತ್ತಲೂ ಇಲ್ಲ. ವೈಸ್ ಛಾನ್ಸಲರ್‌ಗಳು ಅವರು ಉಳಿದುಕೊಳ್ಳುವ ಸಲುವಾಗಿ ಅವರಿಗೆ ಬೇಕಾದವರಿಗೆ ವ್ಯವಸ್ಥಿತವಾಗಿ ಡಾಕ್ಟರೇಟ್‌ಗಳನ್ನು ಕೊಡುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಮಾನ್ಯ ಮಂತ್ರಿಗಳೆ, ತಾವು ಸ್ವಲ್ಪ ಗಮನವಿಟ್ಟು ಕೇಳಬೇಕು.

ಶ್ರೀ ಆರ್.ವಿ.ದೇಶಪಾಂಡೆ:– ಆಗಲೇ ಇದರ ಬಗ್ಗೆ ಪ್ರಸ್ತಾಪವಾಗಿದೆ.

ಶ್ರೀ ಎ.ಮಂಜು:– ಪ್ರಸ್ತಾಪವಾಗಿದೆ. ಆದರೆ implement ಆಗಬೇಕೆಂದು ನಾನು ಹೇಳುತ್ತಿದ್ದೇನೆ. ಕೇವಲ ಪ್ರಸ್ತಾಪ ಮಾಡುವುದಷ್ಟೇ ಮುಖ್ಯವಲ್ಲ. ಇದು implement ಆಗಬೇಕೆಂದು ಹೇಳುತ್ತಿದ್ದೇನೆ. ಮತ್ತೆ ವಿಶೇಷವಾಗಿ student union election ಖಡಾಖಂಡಿತವಾಗಿ ಮತ್ತೆ ಬರಲೇಬೇಕಾಗುತ್ತದೆ. ಇವತ್ತು ಮೌಲ್ಯಮಾಪನ ಅಥವಾ ಮಾರ್ಕ್ಸ್‌ಕಾರ್ಡ್ ವಿಚಾರ.

ಉಪಾಧ್ಯಕ್ಷರು:– Details ಬೇಡ. Student union election ಮತ್ತೆ ಬರಬೇಕು ಎಂಬುದು ನಿಮ್ಮ ಸಲಹೆಯಾಗಿದೆಯಲ್ಲವೇ?

ಶ್ರೀ ಎ.ಮಂಜು:– Student union election ಮತ್ತೆ ಬರಬೇಕು. ಬದಲಾವಣೆ ಮಾಡಬೇಕು. ಇದರಲ್ಲಿ ಯಾವುದೇ ಆದಂಥ ರಾಜಕೀಯ ಪ್ರವೇಶವಾಗಬಾರದು. ಬ್ಯಾಕ್‌ಲಾಗ್ ಹುದ್ದೆಗಳನ್ನು ತರುವಂತಹ ವ್ಯವಸ್ಥೆಯನ್ನು ಮಂತ್ರಿಗಳು ಮಾಡಬೇಕು.

ಶ್ರೀ ಜೆ.ಟಿ.ಪಾಟೀಲ್(ಬೀಳಗಿ):– ಮಾನ್ಯ ಉಪಾಧ್ಯಕ್ಷರೆ, ಉನ್ನತ ಶಿಕ್ಷಣ ಇಲಾಖೆ ಬಗ್ಗೆ ಮಾನ್ಯ ಸಚಿವರು ಈಗಾಗಲೇ ಸಾಕಷ್ಟು ಉತ್ತರವನ್ನು ಹೇಳಿದ್ದಾರೆ. ನಮಗೆ ಅವರ ಉತ್ತರದಿಂದ ಸಮಾಧನವಾಗಿದೆ. ಆದರೆ ಪ್ರವಾಸೋದ್ಯಮ ಇಲಾಖೆ ಬಗ್ಗೆ ಯಾರೂ ಚರ್ಚೆ ಮಾಡಲಿಲ್ಲ. ಒಂದೇ ಒಂದು ಸಲಹೆಯನ್ನು ಸನ್ಮಾನ್ಯ ಮಂತ್ರಿಗಳಿಗೆ ತಮ್ಮ ಮುಖೇನ ಕೊಡಬಯಸುತ್ತೇನೆ. ಉನ್ನತ ಶಿಕ್ಷಣದ ಬಗ್ಗೆ ಎಷ್ಟು ಮಹತ್ವವಿದೆಯೋ ಅಷ್ಟೇ ಮಹತ್ವ ಪ್ರವಾಸೋದ್ಯಮಕ್ಕು ಇದೆ. ನಮ್ಮ ಭಾಗದ ವ್ಯಾಪ್ತಿಯಲ್ಲಿ ಹೊಸಪೇಟೆಯಿಂದ ಹಿಡಿದು, ಹಂಪಿಯಿಂದ, ಬಾಗಲಕೋಟೆಯಿಂದ ಹಿಡಿದುಕೊಂಡು ಒಂದು ಚಾಲುಕ್ಯ ಟೂರಿಸಂ ಕಾರಿಡಾರ್‌ನ್ನು ಮಾಡಿಕೊಟ್ಟರೆ ನಮ್ಮ ಭಾಗ್ಯಕ್ಕೆ ಹೆಚ್ಚು ಮಹತ್ವ ಬರುತ್ತದೆ. ಆದುದರಿಂದ ದಯಮಾಡಿ ಇದನ್ನು ಮಾಡಬೇಕೆಂದು ಒತ್ತಾಯ ಮಾಡುತ್ತೇನೆ.

ಶ್ರೀ ಎಸ್.ಚಿಕ್ಕಮಾಧು(ಹೆಚ್.ಡಿ.ಕೋಟೆ):– ಮಾನ್ಯ ಉಪಾಧ್ಯಕ್ಷರೆ, ಹೆಗ್ಗಡೆದೇವನಕೋಟೆ ತಾಲ್ಲೂಕು ಅತ್ಯಂತ ಹಿಂದುಳಿದ ತಾಲ್ಲೂಕಾಗಿದೆ. ಒಂದೇ ಒಂದು ಪ್ರಥಮ ದರ್ಜೆ ಕಾಲೇಜಿತ್ತು. ಈಗ ಮತ್ತೊಂದು ಪ್ರಥಮ ದರ್ಜೆ ಕಾಲೇಜು ಮಂಜೂರಾತಿ ಮಾಡಿದ್ದಾರೆ. ಅವರಿಗೆ ಇದಕ್ಕಾಗಿ ವಿಶೇಷವಾದ ಧನ್ಯವಾದಗಳನ್ನು ಹೇಳುತ್ತೇನೆ. ಇದರ ಜೊತೆಗೆ ಅವರು ನಿಯಮಾನುಸಾರ 4 ಎಕರೆ ಜಮೀನು ಕೇಳಿದ್ದರು. ಈಗಾಗಲೇ 4 ಎಕರೆ ಜಮೀನನ್ನು ಕೂಡ ಕೊಟ್ಟಿದ್ದೇನೆ. ಬಿ.ಎ., ಬಿ.ಕಾಂ., ಬಿ.ಬಿ.ಎಂ., ಈ ಮೂರು ಕೋರ್ಸ್‌ಗಳನ್ನು ತೆರೆದಿದ್ದಾರೆ. ಅದಕ್ಕೆ ಉಪನ್ಯಾಸಕರಿಲ್ಲ. ಈಗಾಗಲೇ ಕಾಲೇಜು ಪ್ರಾರಂಭ ಮಾಡಿದ್ದು 65 ಮಕ್ಕಳು ಅಡ್ಮಿಷನ್ ಆಗಿದ್ದಾರೆ. ಪ್ರಿನ್ಸಿಪಾಲರನ್ನು ಬಿಟ್ಟರೆ ಉಪನ್ಯಾಸಕರ ನೇಮಕಾತಿಯಾಗಿಲ್ಲ. ದಯಮಾಡಿ

ಆದಷ್ಟು ಶೀಘ್ರವಾಗಿ ಉಪನ್ಯಾಸಕರನ್ನು ನೇಮಕ ಮಾಡಬೇಕೆಂದು ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎನ್.ಹೆಚ್.ಕೋನರೆಡ್ಡಿ(ನವಲಗುಂದ):- ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರಲ್ಲಿ ನಾಲ್ಕು ಕ್ಲಾರಿಫಿಕೇಶನ್‌ಗಳನ್ನು ಕೇಳುತ್ತೇನೆ. ಮಾನ್ಯ ಸಚಿವರೆ, ತಮ್ಮ ಬಗ್ಗೆ ವಿಶೇಷವಾಗಿ ನಮಗೆ ನಿರೀಕ್ಷೆಯಿದೆ. ಏಕೆಂದರೆ ತಾವು Industrial Minister ಆಗಿ ಬಹಳ ಅದ್ಭುತವಾಗಿ ಕರ್ನಾಟಕಕ್ಕೆ ಬೆಳಕನ್ನು ಚೆಲ್ಲಿದವರು. ಈಗ 50 ಕಾಲೇಜುಗಳನ್ನು ತಾವು ಕೊಟ್ಟಿದ್ದೀರಿ, 172 ಕಾಲೇಜುಗಳು ಕುಮಾರಸ್ವಾಮಿಯವರ ಕಾಲದಲ್ಲಾಗಿದೆ. ಅವುಗಳಿಗೆ ಕುಡಿಯುವ ನೀರು, ವಿದ್ಯುತ್ ಸಂಪರ್ಕ ಸೇರಿದಂತೆ ಮೂಲಭೂತ ಸೌಕರ್ಯಗಳನ್ನು ಪೂರೈಕೆ ಮಾಡುವ ಬಗ್ಗೆ ಸ್ಪಷ್ಟಪಡಿಸಬೇಕು. ಇದರ ಜೊತೆಗೆ ಧಾರವಾಡಲ್ಲಿ ಐ.ಎ.ಎಸ್., ಐ.ಪಿ.ಎಸ್. ತರಬೇತಿ ಸಂಸ್ಥೆಯನ್ನು ಪ್ರಾರಂಭ ಮಾಡುತ್ತೇವೆಂದು ಬಜೆಟ್‌ನಲ್ಲಿ ಹೇಳಲಾಗಿದೆ. ಇದನ್ನು ಆದಷ್ಟು ಶೀಘ್ರವಾಗಿ ತೆರೆದು ಪ್ರಾರಂಭ ಮಾಡಬೇಕು. ಇನ್ನು 14ನೇ ತಿದ್ದುಪಡಿಯನ್ನು ತೆಗೆದು ಮಾಡಿದೆ ಸಾರ್ ಇದೇ ಸದನದಿಂದ, ಅದಕ್ಕೆ ತಿದ್ದುಪಡಿಯನ್ನು ತಂದು ಸುಪ್ರೀಂಕೋರ್ಟ್ ಆರ್ಡರ್ ಆಗಿದೆ. ಅದನ್ನು ಆರ್ಥಿಕ ತೊಂದರೆಯಾಗದ ರೀತಿಯಲ್ಲಿ ತಾವು ಹಂತ ಹಂತವಾಗಿ ಅದಕ್ಕೆ ಸಹಾಯ ಮಾಡುವಂಥ ವ್ಯವಸ್ಥೆಯನ್ನು ಮಾಡಬೇಕು. ಒಂದು ಪದವಿ ಕಾಲೇಜಿನಿಂದ ಬೇರ್ಪಟ್ಟಂಥ ಪಿ.ಯು. ಕಾಲೇಜುಗಳಲ್ಲಿರುವ ಶಿಕ್ಷಕರು ಅತಂತ್ರರಾಗಿದ್ದಾರೆ. ಅವರಿಗೂ ಕೂಡ ವಿಶೇಷವಾಂಥ ಕ್ರಮ ಜರುಗಿಸುವ ಬಗ್ಗೆ ತಾವು ಉತ್ತರದಲ್ಲಿ ಹೇಳಲಿಲ್ಲ. ಇನ್ನು 1994 ರಿಂದ 95 ರವರೆಗೆ ಅನುಮತಿಯನ್ನು ಹಿಂದಿನ ಸರ್ಕಾರದಲ್ಲಿ ಕೊಟ್ಟಾಗಿದೆ, ತಮ್ಮ ಸರ್ಕಾರ ಬಂದಮೇಲೆ ಪ್ರತಿ ವರ್ಷ ಆರ್ಥಿಕ ವ್ಯವಸ್ಥೆಯನ್ನು ನೋಡಿಕೊಂಡು ಎರಡು ವರ್ಷಕ್ಕೊಂದು ಬಾರಿ ಅದನ್ನು ಮುಂದುವರಿಸುವಂಥ ವ್ಯವಸ್ಥೆಯನ್ನು ಮಾಡಿ. ಎಸ್.ಸಿ./ಎಸ್.ಟಿ. ಇರಬಹುದು. ಎಲ್ಲಾ ಸಮಾಜದವರದ್ದು ಇರಬೇಕು, ಅವೆಲ್ಲಕ್ಕೂ ಅನುಮತಿಯನ್ನು ಕೊಡುವುದಕ್ಕೆ ತಾವು ಕ್ರಮ ತೆಗೆದುಕೊಳ್ಳಬೇಕೆಂದು ವಿನಂತಿ

ಮಾಡಿ ಈ ಸ್ಪಷ್ಟೀಕರಣಗಳಿಗೆ ಉತ್ತರ ನೀಡಬೇಕೆಂದು ಮಾನ್ಯ ಸಚಿವರಲ್ಲಿ ವಿನಂತಿ ಮಾಡುತ್ತೇನೆ.

ಶ್ರೀ ಎನ್.ಚೆಲುವರಾಯಸ್ವಾಮಿ(ನಾಗಮಂಗಲ):- ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸಚಿವರಿಗೆ ನಾನು ಹೇಳುವುದೇನೆಂದರೆ, ಈ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದಲ್ಲಿ ಸಾಕಷ್ಟು ಹಣವಿದೆ. ಹಿಂದೆ ಕುಮಾರಸ್ವಾಮಿಯವರು ಮುಖ್ಯಮಂತ್ರಿಯಾಗಿದ್ದಂಥ ಸರ್ಕಾರದಲ್ಲಿ ಒಂದು ನಿರ್ಣವಯನ್ನು ತೆಗೆದುಕೊಂಡಿದ್ದರು. - ಹೊಸ ಇಂಜಿನಿಯರಿಂಗ್ ಕಾಲೇಜುಗಳನ್ನು ಎಲ್ಲೆಲ್ಲಿ ಕೊಟ್ಟಿದ್ದೇವೋ ಅಲ್ಲಿ even today Lab ಇಲ್ಲ, ಅವರಿಗೆ ಇತರ ಯಾವ facilities ಕೊಟ್ಟಿಲ್ಲ. Technical Course ಗೆ Scientific ಆಗಿ Lab ಎನ್ನುವುದೇ ಇಲ್ಲದೇ ಅವರು ಓದತಕ್ಕಂಥದ್ದು ಬಹುಶಃ ಅರ್ಥಪೂರ್ಣವಾಗುವುದಕ್ಕೆ ಸಾಧ್ಯವಾಗುವುದಿಲ್ಲ. ದಯಮಾಡಿ ಆ ಹಣವನ್ನು ಉಪಯೋಗಿಸುತ್ತೀರೋ, ನೀವೇ ಕೊಡುತ್ತೀರೋ, ಅಲ್ಲಿ ಸುಮ್ಮನೆ ವೇಸ್ಟ್ ಆಗಿ ಡೆಪಾಸಿಟ್ ಇಡುವ ಬದಲು ಹೊಸ ಇಂಜಿನಿಯರ್ ಕಾಲೇಜುಗಳು ಪ್ರಾರಂಭವಾಗಿ 6 ವರ್ಷಗಳಾಗಿವೆ, ಅವುಗಳಲ್ಲಿ ಯಾವ ಕಾಲೇಜಿಗೂ ಕೂಡ ಮೂಲಭೂತ ಸೌಲಭ್ಯವಿಲ್ಲ. ಲ್ಯಾಬ್ ಮೆಟೀರಿಯಲ್‌ಗಳನ್ನೊಳಗೊಂಡ ಲ್ಯಾಬ್ ಸೆಕ್ಷನ್ ಇಲ್ಲ. ದಯಮಾಡಿ ಇದನ್ನು ಮಾಡಬೇಕು. ಮತ್ತೊಂದು ವಿಷಯವೆಂದರೆ, ಇವತ್ತು ಕಾಮರ್ಸ್ ಕೋರ್ಸಿಗೆ ಬೇಡಿಕೆ ಹೆಚ್ಚಿದೆ. ಈ ಕಾಮರ್ಸ್ ಕೋರ್ಸಿಗೆ ಬೇಡಿಕೆ ಜಾಸ್ತಿಯಾದಾಗ ರೂರಲ್ ಕಾಲೇಜುಗಳಿಗೆ ದಯಮಾಡಿ ಹೆಚ್ಚಿನ ಸೆಕ್ಷನ್‌ಗಳನ್ನು ಕೊಡತಕ್ಕಂಥದ್ದು ಮತ್ತು ಹೆಚ್ಚಿನ ಲೆಕ್ಚರರ್‌ಗಳನ್ನು ಕೊಡತಕ್ಕಂಥ ಕೆಲಸವನ್ನು ಮಾಡಬೇಕು. ಇನ್ನು ಯೂನಿವರ್ಸಿಟಿ ಬಗ್ಗೆ ಮಾನ್ಯ ಸಚಿವರು ಒಂದು ಮಾತನ್ನು ಹೇಳಿದರು. ಅವರು ಸತ್ಯವನ್ನು ಒಪ್ಪಿಕೊಂಡಿದ್ದಾರೆ. ತಮ್ಮಿಂದ ಅದನ್ನು ಎಕ್ಸ್‌ಪೆಕ್ಟ್ ಮಾಡುವುಕ್ಕಾಗುವುದಿಲ್ಲ. ಏಕೆಂದರೆ ಇನ್ನೂ ಸೀನಿಯರ್ ಮಿನಿಸ್ಟರ್‌ಗಳು ಅಲ್ಲಿಗೆ ಬರತಕ್ಕಂಥದ್ದನ್ನು ನೋಡುವುದಕ್ಕೆ ನಾವು ಬಹಳ ದಿವಸ ಕಾಯಬೇಕಾಗುತ್ತದೆ. ಇಡೀ ವಿಶ್ವದಲ್ಲಿಯೇ ನಮ್ಮ ಯೂನಿವರ್ಸಿಟಿಯಷ್ಟು oldest University ನಮ್ಮ recognition ಗೆ ಇನ್ನೂ ಆ ಮಟ್ಟಕ್ಕೆ ತಲುಪಿಲ್ಲವೆಂದರೆ ಸರ್ಕಾರದವಾರದ ನೀವು ಇದಕ್ಕಾಗಿ ಯಾವ

ಕಾರ್ಯಕ್ರಮವನ್ನು ಹಾಕಿಕೊಳ್ಳುತ್ತೀರಿ? ಸರ್ಕಾರದವರಾದ ನೀವು ಹೇಳಬೇಕು, ನಾವು ಇದನ್ನು ಚಾಲೆಂಜ್ ಆಗಿ ತೆಗೆದುಕೊಳ್ಳುತ್ತೇವೆ. ಆ ಯೂನಿವರ್ಸಿಟಿಯನ್ನು, ಕೇವಲ 30 ವರ್ಷದ ಯೂನಿವರ್ಸಿಟಿ ಒಂದು topನಲ್ಲಿ ಬರುತ್ತದೆಂದರೆ, ನಮ್ಮ ಯೂನಿವರ್ಸಿಟಿ ಬರುವುದಿಲ್ಲವಂದರೆ, ಇದನ್ನು ನೀವು ಚಾಲೆಂಜ್ ಆಗಿ ತೆಗೆದುಕೊಂಡು ಯೂನಿವರ್ಸಿಟಿ ಕ್ವಾಲಿಟಿ ಇಂಪ್ರೂವ್ ಮಾಡತಕ್ಕಂಥದ್ದಕ್ಕೆ ತಾವು ದಯಮಾಡಿ ತೀರ್ಮಾನವನ್ನು ತೆಗೆದುಕೊಳ್ಳಬೇಕು.

ಶ್ರೀ ಎಂ.ರಾಜಣ್ಣ(ಶಿಡ್ಲಘಟ್ಟ):- ಮಾನ್ಯ ಉಪಾಧ್ಯಕ್ಷರೆ, ಗೌರವಾನ್ವಿತ ಮಂತ್ರಿಗಳಲ್ಲಿ ನಾನು ಮನವಿ ಮಾಡುವುದಿಷ್ಟೇ. ನನ್ನ ಕ್ಷೇತ್ರದಲ್ಲಿ ಒಂದು ಪ್ರಥಮ ದರ್ಜೆ ಕಾಲೇಜಿದೆ. ಇವತ್ತು ಆ ಕಾಲೇಜಿನಲ್ಲಿ ಮೂಲೂತ ಸೌಕರ್ಯಗಳಿಲ್ಲ. ಎಲ್ಲಾ ಕಾಲೇಜುಗಳಿಗೂ ಮೂಲಭೂತ ಸೌಕರ್ಯಗಳನ್ನು ಕೊಡುತ್ತೇವೆಂದು ಹೇಳುತ್ತೀರಿ. ಆದರೆ ಆ ಶಾಲೆಗೆ ಕಾಂಪೌಂಡೇ ಇಲ್ಲ. ಇದರಿಂದಾಗಿ ಆ ಪ್ರಥಮ ದರ್ಜೆ ಕಾಲೇಜಿಗೆ ಬಹಳ ತೊಂದರೆಯಾಗಿದೆ. ಆ ಕಾಲೇಜಿನಲ್ಲಿ ಬಿ.ಕಾಂ. ವ್ಯಾಸಂಗ ಮಾಡುತ್ತಿರುವವರೇ ಸುಮಾರು 250 ರಿಂದ 300 ವಿದ್ಯಾರ್ಥಿಗಳಿದ್ದಾರೆ. ಆದರೆ ವಿಜ್ಞಾನ ವಿಭಾಗದಲ್ಲಿ ಕೇವಲ 8 ರಿಂದ 10 ಮಕ್ಕಳಿದ್ದಾರೆ. ಅದಕ್ಕೆ ಕಾರಣ ತಾವೆಲ್ಲರೂ ಆಗಲೇ ಹೇಳಿದ ರೀತಿಯಲ್ಲಿ ವಿಜ್ಞಾನ ವಿಭಾಗಕ್ಕೆ ಅಗತ್ಯವಾದ ಮೂಲಭೂತ ಸೌಕರ್ಯಗಳಿಲ್ಲ. ಪ್ರಥಮ ದರ್ಜೆ ಕಾಲೇಜಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಬೇಕು. ಈ ಕಾಲೇಜಿಗೆ ಸುಣ್ಣಬಣ್ಣ ಬಳಿದು ಹದಿನೈದು ವರ್ಷವಾಗಿದೆ. ಸುಣ್ಣಬಣ್ಣ ಬಳಿಯುವುದಕ್ಕೂ ಕೂಡ ಹಣವಿಲ್ಲವೆನ್ನುತ್ತಾರೆ. ದಯವಿಟ್ಟು ಮಾನ್ಯ ಮಂತ್ರಿಗಳು ಇದರ ಬಗ್ಗೆ ಕಾಳಜಿ ವಹಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಭೀಮಾ ನಾಯ್ಕ್(ಹಗರಿಬೊಮ್ಮನಹಳ್ಳಿ):- ಮಾನ್ಯ ಉಪಾಧ್ಯಕ್ಷರೆ, ನನ್ನ ಹಗರಿಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರದಲ್ಲಿ ಮರನಹಳ್ಳಿ ಎನ್ನುವ ಊರಿದೆ. ಆ ಹೋಬಳಿಯಲ್ಲಿ ಈಗಾಗಲೇ ಸರ್ಕಾರಿ ಡಿಗ್ರಿ ಕಾಲೇಜಿದೆ. ಮಾನ್ಯ ಸಚಿವರೆ ತಮ್ಮನ್ನು ಭೇಟಿಯಾಗಿ ನಾನು ಲೆಟರ್ ಕೊಟ್ಟಿದ್ದೇನೆ. ಒಂದು ಡಿಗ್ರಿ ಕಾಲೇಜಾಗಬೇಕಾದರೆ 10 ಕಿ.ಮೀ. ದೂರದಲ್ಲಿರಬೇಕು. ಅಲ್ಲಿ ಸರ್ಕಾರಿ ಡಿಗ್ರಿ

ಕಾಲೇಜಿದ್ದರೂ ಕೂಡ ಖಾಸಗಿಯವರಿಗೆ ಅನುಮತಿಯನ್ನು ಕೊಟ್ಟಿದ್ದಾರೆ. ಮಾನ್ಯ ಸಚಿವರು ಹೇಳುತ್ತಾರೆ ನಾವು ಅನುಮತಿಯನ್ನು ಕೊಟ್ಟಿಲ್ಲವೆಂದು. ಆದರೆ ಅಲ್ಲಿ already poster ಹಾಕಿ ಆಗಲೇ admission start ಮಾಡಿದ್ದಾರೆ. ಸರ್ಕಾರಿ ಆದೇಶವನ್ನು ಗಾಳಿಗೆ ತೂರಿ ಈ ರೀತಿಯೆಲ್ಲಾ ಆಗುತ್ತಿದೆ. ಮಾನ್ಯ ಸಚಿವರು ಉತ್ತರವನ್ನು ಕೊಡಬೇಕು.

ಶ್ರೀ ಸಾ.ರಾ.ಮಹೇಶ್:- ಮಾನ್ಯ ಉಪಾಧ್ಯಕ್ಷರೆ, ನಾನು ಮೊನ್ನೆ ಮನವಿ ಮಾಡಿದ್ದೆನು. ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ exam fees ಏನು ಕಟ್ಟಿಸಿಕೊಂಡು ನಂತರ ಅದನ್ನು ವಾಪಸ್ಸು ಕೊಡುತ್ತೀರಿ, ಅದಕ್ಕೆ ಪ್ರಾರಂಭದಲ್ಲೇ ಮನ್ನಾ ಮಾಡಿ ಎಂದು ಹೇಳುತ್ತೇನೆ. ಅದಕ್ಕೆ ದಯಮಾಡಿ ಉತ್ತರ ಹೇಳಬೇಕು.

ಶ್ರೀ ರಮೇಶ್ ಬಂಡಿಸಿದ್ದೇಗೌಡ:- ಮಾನ್ಯ ಉಪಾಧ್ಯಕ್ಷರೆ, ನನ್ನ ಕ್ಷೇತ್ರದಲ್ಲಿ ಪ್ರಥಮ ದರ್ಜೆ ಕಾಲೇಜು ಪ್ರಾರಂಭವಾಗಿ ಐದು ವರ್ಷವಾಗಿದೆ. ಸರ್ಕಾರಿ ಕಾಲೇಜುಗಳಲ್ಲಿ ಅತೀ ಹೆಚ್ಚು ವಿದ್ಯಾರ್ಥಿಗಳು ದಾಖಲಾಗಿರುವುದರಲ್ಲಿ ನಮ್ಮ ಕಾಲೇಜು ಸೇರುತ್ತದೆ. ಅಲ್ಲಿ ಮೂರೂವರೆ ಸಾವಿರ ವಿದ್ಯಾರ್ಥಿಗಳಿದ್ದು, ಕೊಠಡಿಗಳ ಕೊರತೆಯಿದೆ. ದಯಮಾಡಿ ಕೊಠಡಿಗಳನ್ನು ಕೊಡುವುದಕ್ಕೆ ಮಾನ್ ಸಚಿವರು ಗಮನ ಹರಿಸಬೇಕೆಂದು ಕೋರುತ್ತೇನೆ.

ಶ್ರೀ ಸಿ.ಎನ್.ಬಾಲಕೃಷ್ಣ:- ಮಾನ್ಯ ಉಪಾಧ್ಯಕ್ಷರೆ, ಉನ್ನತ ಶಿಕ್ಷಣದ ಬಗ್ಗೆ ಎಲ್ಲಾ ಹಿರಿಯ ಸದಸ್ಯರು ಬೆಳಕು ಚೆಲ್ಲಿದ್ದಾರೆ, ಹಾಗಾಗಿ ನಾನು ಹೆಚ್ಚು ಮಾತನಾಡುವುದಕ್ಕೆ ಹೋಗುವುದಿಲ್ಲ. ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟ ಹಾಗೆ ಎರಡು ಪ್ರಶ್ನೆಗಳನ್ನು ಮಾನ್ಯ ಮಂತ್ರಿಗಳಿಗೆ ಕೇಳುತ್ತೇನೆ. ನಾವು ಈಗಾಗಲೇ ಶಾಸಕರಾಗ 14 ತಿಂಗಳುಗಳಾಗಿವೆ. ನಮ್ಮ ವಿಧಾನಸಭಾ ಕ್ಷೇತ್ರದ ಚನ್ನರಾಯಪಟ್ಟಣದಲ್ಲಿ ಸುಮಾರು 1,500 ವಿದ್ಯಾರ್ಥಿಗಳು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ. ಹತ್ತು ಕೊಠಡಿಗಳ ಅಗತ್ಯತೆ ಇದೆ. ಇವತ್ತು ಒಂದು ಕೊಠಡಿಯಲ್ಲಿ 80 ವಿದ್ಯಾರ್ಥಿಗಳು ಕುಳಿತುಕೊಳ್ಳಬಹುದು. ಆದರೆ ಇವತ್ತು 140 ವಿದ್ಯಾರ್ಥಿಗಳು

ಕುಳಿತುಕೊಳ್ಳುವಂತಹ ಸಂದರ್ಭವಿದೆ. ಅಲ್ಲಿ ಅಂತಹ ವ್ಯವಸ್ಥೆಯನ್ನು ಕಲ್ಪಿಸಿಕೊಡದೆ ಹೋದರೆ ಎಲ್ಲೋ ಒಂದು ಕಡೆ ಸಮಸ್ಯೆ ಮಾಡಿದ ಹಾಗೆ ಆಗುತ್ತದೆ. ಶೈಕ್ಷಣಿಕವಾಗಿ ತೊಂದರೆಯಾಗುತ್ತದೆ.

ಶ್ರೀ ಕೆ.ಶಿವಮೂರ್ತಿ:- ಮಾನ್ಯ ಉಪಾಧ್ಯಕ್ಷರೆ, ನಮ್ಮ ತೊಂದರೆ ಏನೆಂದರೆ, NCVT, NCRT, UGC, Medical council ಈ ಭಾಗದಿಂದ ಹೋಗುವಂತಹ ಪ್ರಪೋಸಲ್ಸ್ ಅನ್ನು ವ್ಯವಸ್ಥಿತವಾಗಿ ತಡೆಗಟ್ಟಿ ಅಲ್ಲಿಂದ ಕ್ಯಾನ್ಸಲ್ ಆಗಿ ಬರುತ್ತವೆ. ಹಾಗಾಗಿ protective ಅನ್ನು Karnataka Education Act ಕೆಳಗಡೆ higher education ನಲ್ಲಿ ಕೆಲವು amendment ತರಬೇಕು. New Education. Policy ರಾಜೀವ್‌ಗಾಂಧಿಯವರದ್ದು ತಂದೆ ಮೇಲೆ RTE ಬಂದಮೇಲೆ ಅಲ್ಲಿ ಕೆಲವು defects ಇವೆ. ಅದರಲ್ಲಿ protective provision ಅನ್ನು insert ಮಾಡಬೇಕೆಂದು ಸರ್ಕಾರಕ್ಕೆ ನಿವೇದನೆ ಮಾಡುತ್ತೇನೆ. ಜೊತೆಗೆ rural Karnataka ದಲ್ಲಿ technical education connectivity ಮಾಡುವುದಕ್ಕೆ ಅಲ್ಲಿ dropouts ಅನ್ನು arrest ಮಾಡುವುದಕ್ಕೆ ಹೊಸ diploma, certify course ಮಾಡುವುದಕ್ಕೆ ಒಂದು ಪಾಲಿಸಿ ತೆಗೆದುಕೊಂಡು ಬರುತ್ತೀರಾ? Technical connectivity to rural Karnataka specially for woman.

ಶ್ರೀ ಆರ್.ವಿ.ದೇಶಪಾಂಡೆ:- ಮಾನ್ಯ ಉಪಾಧ್ಯಕ್ಷರೆ, ಮುಖ್ಯವಾಗಿ ಶ್ರೀನಿವಾಸ್‌ರವರು ಪ್ರೈವೇಟ್ ಕಾಲೇಜಿನಲ್ಲಿ ಶಿಕ್ಷಕರದ್ದು demand ratio ಹೆಚ್ಚು ಕಡಿಮೆ ಇದ್ದಾರೆ, ಅದನ್ನು ಉಪಯೋಗ ಮಾಡಿಕೊಳ್ಳಿ ಎಂದು ಹೇಳಿದರು. First time ನಮ್ಮ ಸರ್ಕಾರ ಬಂದಮೇಲೆ 500 ಶಿಕ್ಷಕರಿಗೆ aided college ನಲ್ಲಿ ಮಾಡಿದ್ದೇವೆ. ಎಲ್ಲಿ *workload* ಇರಲಿಲ್ಲ, ಅವರನ್ನು ಬೇರೆ *aided college*ಗೆ shift ಮಾಡಿದ್ದೇವೆ. ಇದು first time ಆಗಿರುವುದು. Aided teachers ಯಾರನ್ನೂ shift ಮಾಡುವ ಪದ್ಧತಿ ಇರಲಿಲ್ಲ. ಆದರೆ ನಾವು interest of education work load ಇಲ್ಲದ್ದರಿಂದ 500 teachers shift ಮಾಡಿದ್ದೇವೆ. ಅಲ್ಲದೇ ಕಾನೂನು ತಿದ್ದುಪಡಿ ಬಗ್ಗೆ, ಡಾಕ್ಟರ್ ಬಗ್ಗೆ ಈಗಾಗಲೇ ಹೇಳಿದ್ದೇನೆ. ನಾನೇ ಅದು ಸರಿಯಿಲ್ಲವೆಂದು ಒಪ್ಪಿಕೊಂಡಿದ್ದೇನೆ. ಆಗ ಶ್ರೀ ಮಂಜು

ಅವರು ಇರಲಿಲ್ಲವೆಂದು ಕಾಣುತ್ತದೆ. ಅದಕ್ಕೆ ಕ್ರಮೇಣ ಕಾನೂನಿಗೆ ತಿದ್ದುಪಡಿ ತೆಗೆದುಕೊಂಡು ಬರೋಣ. ನಂತರ ಮಾನ್ಯ ಪಾಟೀಲರು tourism ಬಗ್ಗೆ ಹೇಳಿದರು, ಅದರ ಬಗ್ಗೆ ನಾನು ಹೇಳುತ್ತೇನೆ. ಅದಾದ ಮೇಲೆ ನಮ್ಮ guest lecturers ಬಗ್ಗೆ ಹೇಳುವುದಾದರೆ, ಹೊಸ ಕಾಲೇಜು ಏನು ಪ್ರಾರಂಭ ಮಾಡಿದ್ದೇವೆ, ಅಲ್ಲಿ nodal officer ಎಂದು principal post ಮಾಡಿದ್ದೇವೆ. Guest lecturers ಇನ್ನೊಂದು ಹದಿನೈದು ದಿನದಲ್ಲಿ ಎಲ್ಲೆಲ್ಲಿ ಹೊಸ ಕಾಲೇಜು ಪ್ರಾರಂಭ ಮಾಡಿದ್ದೇವೆ, ಅಲ್ಲಿ ಬರುತ್ತಾರೆಂದು ಹೇಳಿದ್ದೇನೆ. ನಮ್ಮ ಸ್ನೇಹಿತರಾದ ಚೆಲುವರಾಯ ಸ್ವಾಮಿಯವರು ಮುಖ್ಯವಾಗಿ VTU ನಿಂದ ಈಗಾಗಲೇ ನಾಲ್ಕು ಇಂಜಿನಿಯರಿಂಗ್ ಕಾಲೇಜುಗಳಾದ ರಾಯಚೂರು, ಗಂಗಾವತಿ, ಹಗರಿಬೊಮ್ಮನಹಳ್ಳಿ ಮತ್ತು ಕಾರವಾರಕ್ಕೆ infrastructure ಕೊಟ್ಟಿದ್ದೇವೆ. ಅಲ್ಲಿ ಈಗಾಗಲೇ ಕೆಲಸ ಮಾಡುತ್ತಿದ್ದಾರೆ. ಕೆ.ಆರ್.ಪೇಟೆಯಲ್ಲಿ, ರಾಮನಗರದಲ್ಲಿ, ಹಾಸನದಲ್ಲಿ laboratory ಇಲ್ಲ. ಹಾಗಾಗಿ ಈ ವರ್ಷದ ಮುಂಗಡ ಪತ್ರದಲ್ಲಿ ಅದಕ್ಕೆ ಹಣ ಇಟ್ಟಿದ್ದೇವೆ. ಜೊತೆಗೆ Karnataka Examination Authority ಇದೆಯಲ್ಲ, ಅಲ್ಲಿ ಕೂಡ ಸಾಕಷ್ಟು default ಇದೆ. ಅದು ಉಪಯೋಗವಾಗಬೇಕು. ಸಿವಿಲ್, ಮೆಕಾನಿಕಲ್ ಲ್ಯಾಬೋರೇಟರ್ ಬಗ್ಗೆ ಕ್ರಮೇಣವಾಗಿ ಮಾಡುವ ಬಗ್ಗೆ ಕ್ರಮ ತೆಗೆದುಕೊಳ್ಳುತ್ತಿದ್ದೇವೆ. ಎರಡನೆಯದಾಗಿ ತಾವು ಮೈಸೂರು ಯೂನಿವರ್ಸಿಟಿ ವಿಚಾರದಲ್ಲಿ ಪ್ರಸ್ತಾಪ ಮಾಡಿದಿರಿ. ಅದು ನನಗೆ ಗೊತ್ತು. Centenary celebration ಇದೆ. ಹಾಗಾಗಿ ವೈಸ್ ಚಾನ್ಸಲರ್ ಬಂದು ಮಾನ್ಯ ಮುಖ್ಯಮಂತ್ರಿಯನ್ನು ಭೇಟಿಯಾಗಿ ಹೋಗಿದ್ದು, ನನ್ನ ಜೊತೆ ಕೂಡ ಚರ್ಚೆ ಮಾಡಿದ್ದಾರೆ. ಅದಕ್ಕೆ block grant ಕೊಡುವ ಬಗ್ಗೆ, ಟೀಚರ್‌ಗಳು, ಮತ್ತೊಂದು post sanction ಮಾಡುವ ಬಗ್ಗೆ ಸರ್ಕಾರ ಪರಿಶೀಲನೆ ಮಾಡುತ್ತಿದೆ. ಅದಕ್ಕೆ ವೈಸ್ ಚಾನ್ಸಲರ್‌ನಿಂದ ಪ್ರಸ್ತಾವನೆ ಬಂದಿಲ್ಲ. ಪ್ರಸ್ತಾವನೆ ಬಂದನಂತರ ಅದನ್ನು ಕೂಡ ಪರಿಶೀಲನೆ ಮಾಡಲಾಗುವುದು. ಅದರ ನಂತರ ಮುಖ್ಯವಾಗಿ ಇಲ್ಲಿ ನಿಂತು individual ಆಗಿ ಇಂತಹ ಕಾಲೇಜುಗಳಲ್ಲಿ ಕೋಣೆಗಳು ಯಾವ್ಯಾವುದಕ್ಕೆ ಇಲ್ಲವೆಂದು ಹೇಳಿರುವುದೆಲ್ಲದಕ್ಕೂ ನಾನು ಉತ್ತರ ಹೇಳುವುದಕ್ಕಾಗುವುದಿಲ್ಲ. ತಾವು ತಮ್ಮ ಕಷ್ಟ ಹೇಳುತ್ತಿರುವುದನ್ನು ನಾನು ನಂಬುತ್ತೇನೆ. ಎಲ್ಲೆಲ್ಲಿ ಕೋಣೆಗಳಿಲ್ಲ ಅದಕ್ಕೆ

ನಮ್ಮ ಆರ್ಥಿಕ ಇತಿ ಇತಿ ಮೇಲೆ, ಆದಷ್ಟು ಬೇಗ ಕೋಣೆಗಳನ್ನು ಮಂಜೂರು ಮಾಡುತ್ತೇನೆ. ನಾನು ತಮಗೆ ಬಹಳ ಸ್ಪಷ್ಟವಾಗಿ ಹೇಳಿದ್ದೇನೆ. ಈಗಾಗಲೇ ನಾನು ವರದಿ ತರಿಸುತ್ತಿದ್ದೇನೆ. ಸರ್ಕಾರಿ ಕಾಲೇಜು ಮುಚ್ಚಿ, ಪ್ರೈವೇಟ್ ಕಾಲೇಜು ಪ್ರಾರಂಭ ಮಾಡುವುದಕ್ಕೆ ನಾವು ಅವಕಾಶ ಕೊಡುವುದಿಲ್ಲವೆಂದು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಒಂದು ನಿಮಿಷ, ನಾನು ಜವಾಬ್ದಾರಿ ಸ್ಥಾನದಿಂದ ಮಾತನಾಡುತ್ತಿದ್ದೇನೆ. ಆ ವರದಿ ಬರಬೇಕಲ್ಲ, ಅದನ್ನು ತರಿಸುವುದಕ್ಕೆ ಹೇಳಿದ್ದೇನೆ. ಈ ಶಿಕ್ಷಣದ ನಂತರ ಟೂರಿಸಂ ತೆಗೆದುಕೊಳ್ಳಬೇಕು. ನಾನು ಎರಡು ನಿಮಿಷದಲ್ಲಿ ಮುಗಿಸುತ್ತೇನೆ.

ಶ್ರೀ ಬಿ.ಆರ್.ಪಾಟೀಲ್:- ಮಾನ್ಯ ಉಪಾಧ್ಯಕ್ಷರೆ, ಕೆಲವು ಸದಸ್ಯರಿಗೆ ನೀವು ಅವಕಾಶ ಕೊಡಿದಿದ್ದರೂ ನಿಂತುಬಿಟ್ಟರೆ ಬಿಟ್ಟು ಬಿಡುತ್ತೀರಿ. ನಾವು ಹಿಂದುಳಿದ ಪ್ರದೇಶಕ್ಕೆ ಸಂಬಂಧಪಟ್ಟಂತೆ clarification ಕೇಳೋಣವೆಂದರೆ ನೀವು ನಮ್ಮನ್ನು ನೋಡುತ್ತಿಲ್ಲ. ಮಾನ್ಯ ಸಚಿವರು IIT ಬಗ್ಗೆ ಕೇಂದ್ರಕ್ಕೆ ಮನವಿ ಮಾಡಿ ತರುತ್ತೇನೆಂದು ಪ್ರಯತ್ನ ಮಾಡಿದಿರಿ. ತಾವು ಮಾಡಿದ್ದು ಸಂತೋಷ, ನಾವು ನಿಮಗೆ ಬೆಂಬಲವನ್ನು ಕೊಡುತ್ತೇವೆ. ಆದರೆ ಡಾ:- ನಂಜುಂಡಪ್ಪ ವರದಿಯಲ್ಲಿ ಹಿಂದುಳಿದ ಪ್ರದೇಶವಾದ ರಾಯಚೂರಿಗೆ IIT ಮಾಡಬೇಕೆಂದು ಬಹಳ ಸ್ಪಷ್ಟವಾಗಿ ಶಿಫಾರಸ್ಸು ಮಾಡಿದ್ದಾರೆ. ವಯಮಾಡಿ ಹಿಂದುಳಿದ ಪ್ರದೇಶವಾದ ಹೈದರಾಬಾದ್ ಕರ್ನಾಟಕ ಭಾಗವಾದ ರಾಯಚೂರಿಗೆ ಬರಬೇಕೆಂದು ನಾನು ಮನವಿ ಮಾಡುತ್ತೇನೆ. ದಯಮಾಡಿ ಆ ನಿಟ್ಟಿನಲ್ಲಿ ತಾವು ಪ್ರಯತ್ನ ಮಾಡಲೇಬೇಕು. IIIT ಬೇಕಾದರೆ ನೀವು ಬೇರೆ ಕಡೆ ಮಾಡಬಹುದು, ಆದರೆ IIT ಮಾತ್ರ ರಾಯಚೂರಿನಲ್ಲಿಯೇ ಮಾಡಬೇಕೆನ್ನುವುದು ನನ್ನ ಮನವಿ. ಇನ್ನೊಂದು ಸಲಹೆ ಏನೆಂದರೆ ಕಾಲೇಜುಗಳಲ್ಲಿ ಆಡಳಿತಾತ್ಮಕ ಸಮಸ್ಯೆಗಳನ್ನು ಪ್ರಿನ್ಸಿಪಾಲ್ ಕಡೆಯಿಂದ ಬಗೆಹರಸುವುದಕ್ಕೆ ಆಗುವುದಿಲ್ಲ. ಏಕೆಂದರೆ ಅಡಾಡೆಮಿಕ್ ಇರುತ್ತಾರೆ. ಈಗ ಹೊಸ ದೃಷ್ಟಿಯಲ್ಲಿ ಬದಲಾದಂತಹ ಪರಿಸ್ಥಿತಿಯಲ್ಲಿ ನೋಡಬೇಕಾಗುತ್ತದೆ. Management ನೋಡಿಕೊಳ್ಳುವುದಕ್ಕೆ ಹೇಗೆ ಎಂಬಿಎ ಗ್ರ್ಯಾಜ್ಯುಯೇಟ್ಸ್ ಬರುತ್ತಾರೆ, ಅದರಲ್ಲಿ ಕೂಡ ಕೆಲವು ಕೋರ್ಸ್‌ಗಳು ಪ್ರಾರಂಭವಾಗಿವೆ.

ಪ್ರತಿಯೊಂದು ಕಾಲೇಜಿನಲ್ಲಿ ಕೂಡ administration ನೋಡುವುದಕ್ಕೆ ಪ್ರತ್ಯೇಕವಾದಂತಹ ಜವಾಬ್ದಾರಿಯುತವಾದ ಹುದ್ದೆಯನ್ನು ತೆರೆದು ಅವರಿಗೆ ಜವಾಬ್ದಾರಿ ಕೆಲಸವನ್ನು ವಹಿಸಿಕೊಟ್ಟರೆ ಆಡಳಿತಾತ್ಮಕ ಸಮಸ್ಯೆ ಬಗೆಹರಿಸುವುದಕೆ ಸಾಧ್ಯವಿದೆ. ನೀವು ಪರಿಸರವನ್ನು ಕೂಡ ಈ ಸಿಲಬಸ್‌ನಲ್ಲಿ ಹಾಕಿಬಿಡಿ. Environment is very important. ತಾವು ಆ ಭಾಗದಿಂದ ಬಂದಂತವರು. Environmental subject ಕೂಡ ಅದರಲ್ಲಿ ಸೇರಿಸಲೇಬೇಕು.

ಶ್ರೀ ಆರ್.ವಿ.ದೇಶಪಾಂಡೆ:– ಮಾನ್ಯ ಉಪಾಧ್ಯಕ್ಷರೆ, IIT ಯನ್ನು ದೇಶದಲ್ಲಿ ಐದು ಕಡೆ ಮಂಜೂರು ಮಾಡಿದ್ದು, ಗೋವಾ ಮತ್ತು ಮಹಾರಾಷ್ಟ್ರದಲ್ಲಿ ಮಾಡಿದ್ದರು. ಕರ್ನಾಟಕದ ವಿಚಾರದಲ್ಲಿ ನಾನು ಸ್ವತಃ ಮಂತ್ರಿಗಳನ್ನು ಭೇಟಿಯಾಗಿ ಬಂದೆನು. 500 ಎಕರೆ ಜಮೀನು ಕೂಡ offer ಮಾಡಿದ್ದೆವು. ಆದರೆ ನಾವು specific ಆಗಿ ಅಲ್ಲಿ, ಇಲ್ಲಿ ಎಂದು mention ಮಾಡಿಲ್ಲ. ಏಕೆಂದರೆ ultimately ಅದು ಆಗಬೇಕಾದರೆ cabinet ತೀರ್ಮಾನ ಮಾಡಬೇಕಾಗುತ್ತದೆ. ಆದರೆ ರಾಯಚೂರಿನಲ್ಲಿ IIT ಮಾಡಬೇಕೆನ್ನುವ ಪ್ರಸ್ತಾವನೆ ಹಿಂದಿನಿಂದ ಇದೆ. ಅದನ್ನು ನಾವು ಗಮನದದಲ್ಲಿಟ್ಟುಕೊಳ್ಳುತ್ತೇವೆ. ಎರಡನೆಯದಾಗಿ IIT, ಹಳೆಯ ಪ್ರಸ್ತಾವನೆ ಇತ್ತು. ಕೇಂದ್ರ ಸರ್ಕಾರ ಮಾನ್ಯತೆ ಮಾಡಿದ್ದು ಧಾರವಾಡದಲ್ಲಿ ಪ್ರಾರಂಭವಾಗುತ್ತಿದೆ. ಈಗ administration ಸಲುವಾಗಿ administrating officer ಮಾಡಬೇಕೆಂದು ಇದೆ. ಅದನ್ನು ಪರಿಶೀಲನೆ ಮಾಡುತ್ತಿದ್ದೇವೆ. ಈಗ ನಾವು ಇರುವಂತಹ ಕಾಲೇಜುಗಳಿಗೆ ಟೀಚರ್‌ಗಳನ್ನು ಕೊಡುವುದಕ್ಕೆ ಸಾಧ್ಯವಾಗುತ್ತಿಲ್ಲ. ಹೊಸ fresh recruitments ಮಾಡಬೇಕು, ಮತ್ತೊಂದು ಮಾಡಬೇಕು, ಯಾವ ರೀತಿ ಮಾಡಬೇಕೆನ್ನುವುದರ ಬಗ್ಗೆ ನಾವು ಆರ್ಥಿಕ ಪರಿಸ್ಥಿತಿಯನ್ನು ನೋಡಿ ಪರಿಶೀಲನೆ ಮಾಡುತ್ತೇವೆ. ಕೊನೆಯದಾಗಿ ನಾನು ತಿಳಿದುಕೊಂಡಿದ್ದೆ, ತಾವು ಟೂರಿಸಂ ಸಲುವಾಗಿ ಕರೆಯುತ್ತೀರಿ ಎಂದು ತಿಳಿದುಕೊಂಡಿದ್ದೆನು. ಪ್ರವಾಸೋದ್ಯಮದ ಬಗ್ಗೆ ಬಹಳ ಜನ ಬೆಳಕು ಚೆಲ್ಲಿದ್ದಾರೆ. ಇದು ಯಾವ ಪ್ರಮಾಣದಲ್ಲಿ ನಮ್ಮ ದೇಶದಲ್ಲಿ ಬೆಳೆಯಬೇಕಾಗಿತ್ತು, ಆ ಮಟ್ಟದಲ್ಲಿ ಬೆಳೆದಿಲ್ಲ. ನಮ್ಮ ರಾಜ್ಯದಲ್ಲಿ ಸಹ ಬೆಳೆಯುವುದಕ್ಕೆ ಅವಕಾಶ ಇದೆ. ನಾನು ಕೆಲವು

figures ಕೊಡುತ್ತೇನೆ. ಇವತ್ತು ಕಾಂಬೋಡಿಯಾದಲ್ಲಿ ಅವರ ರಾಷ್ಟ್ರದ ಜಿಡಿಪಿಗೆ ಟೂರಿಸಂನಿಂದ 23.5% contribution ಇದೆ. Thailand ಸಣ್ಣ ರಾಷ್ಟ್ರ 20.2%, ಮಲೇಷ್ಯಾದಲ್ಲಿ 16.1%, ಮೆಕ್ಸಿಕೋ 12.6%, ಇಟಲಿ 10.2%, ಸೌತ್ ಆಫ್ರಿಕಾದಲ್ಲಿ 9.7%, ವಿಶ್ವದಲ್ಲಿ average GDPಗೆ contribution 9.5%. ಚೈನಾದಲ್ಲಿ 9.2% ಇದೆ, ಆದರೆ ಭಾರತ ದೇಶದಲ್ಲಿ 6.2% ಇದೆ. ಹಾಗಾಗಿ ಇವತ್ತು ಉದ್ಯೋಗ ಸೃಷ್ಟಿಯಾಗಬೇಕು. ಸರ್ಕಾರಕ್ಕೆ ಆದಾಯ ಬರಬೇಕಾದರೆ tourists ಯಾರು ಬರುತ್ತಾರೆ, ಅವರು ನಗುತ್ತಾ ನಗುತ್ತಾ tax ಕೊಡಬೇಕು. ಮಾನ್ಯ ಶಿವಕುಮಾರ್ 10–20 ಪೈಸೆ ಪವರ್ ರೇಟ್ ಜಾಸ್ತಿ ಮಾಡಿದರೆ ಗಲಾಟೆ ಪ್ರಾರಂಭವಾಗುತ್ತದೆ. ಆದರೆ ಪ್ರವಾಸೋದ್ಯಮ ಏನಿದೆ, ಅವರು ಹಣ ಖರ್ಚು ಮಾಡುವುದಕ್ಕೆ ಬರುತ್ತಾರೆ. They are not worried. ಒಂದು ಸರ್ಕಾರ, ಅದರಲ್ಲೂ ಕರ್ನಾಟಕ ಸರ್ಕಾರ which is highly tax state ಇದಕ್ಕೆ ಹೆಚ್ಚಿನ ಆದಾಯ, revenue generation ಪ್ರವಾಸದಿಂದ ಬರುವುದಕ್ಕೆ ಸಾಧ್ಯವಿದೆ, employment ಜೊತೆಗೆ ಸಾಧ್ಯವಿದೆ. ಈಗ ನೋಡಿ employment ಗೆ ಭಾರತದಲ್ಲಿ ಕೇವಲ 7.7% contribution ಇದೆ, ಅದೇ Combodia ದಲ್ಲಿ it is 20.05%. 20.5% employment generate ಆಗಿದೆ. ಹಾಗಾಗಿ ಉದ್ಯೋಗ ಸೃಷ್ಟಿಯಾಗಬೇಕಾದರೆ, ಸರ್ಕಾರಕ್ಕೆ ಹೆಚ್ಚಿನ ಆದಾಯ ಬರಬೇಕಾದರೆ ಪ್ರವಾಸೋದ್ಯಮ ಬೆಳೆಯಬೇಕು. ಆ ದಿಕ್ಕಿನಲ್ಲಿ ನಾವು ಹಲವಾರು ಕ್ರಮಗಳನ್ನು ತೆಗೆದುಕೊಂಡಿದ್ದೇವೆ. ಮೊದಲನೆಯ ಬಾರಿ ನಾವು Vision Group form ಮಾಡಿ ಅಲ್ಲಿ ಬಹಳ talented ಜನ different fields ನಿಂದ Vision Group report ತೆಗೆದುಕೊಂಡಿದ್ದೇವೆ. Vision Group report accept ಆಗಿದೆ. ಅದರ ಪ್ರಸ್ತಾಪವನ್ನು ತಾವು ನೋಡಿರಬಹುದು. ಇವತ್ತು ಹಲವಾರು ಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದೇವೆ, ಮುಖ್ಯವಾಗಿ ನಮ್ಮ ಮೈಸೂರು ಭಾಗದಲ್ಲಿ Heritage Tourism, Cauvery Development Autority ಮಾಡುತ್ತಿದ್ದೇವೆ. Cubbon Park Development Authority ಮಾಡಬೇಕೆಂಬ ಪ್ರಸ್ತಾವನೆ ಇದೆ. ಅದೇ ಪ್ರಕಾರ 300 and odd, ಎಲ್ಲಾ ಕಡೆಗಳಲ್ಲೂ ಒಂದೇ ಸಾರಿ ಮಾಡುವುದು ಬಹಳ ಕಷ್ಟ. ಆದರೆ ಹಂಪೆ, ನಂದಿ, ಜೋಗ್ ಇರಬಹುದು, ಮೈಸೂರು ಇರಬಹುದು, Gulbarga region ಇರಬಹುದು, ಆ belt, Bijapur ಇವುಗಳಿಗೆ

ನಾವು ಪ್ರಾಧಾನ್ಯತೆಯನ್ನು ಕೊಟ್ಟು, ಕ್ರಮೇಣ ಮೂಲಭೂತ ಸೌಲಭ್ಯಗಳ ನಿರ್ಮಾಣವಾಗಬೇಕು, ಏಕೆಂದರೆ, ಮೂಲಭೂತ ಸೌಲಭ್ಯಗಳಿಲ್ಲವೆಂದರೆ ಯಾವ ಪ್ರವಾಸಿಗಳೂ ಬರುವುದಿಲ್ಲ. ನನ್ನ ಹತ್ತಿರ ಎಲ್ಲಾ statistics ಇದೆ, ಸಮಯಾಭಾವದಿಂದ ನಾನು ಅದೆಲ್ಲವನ್ನೂ ಹೇಳುವುದಿಲ್ಲ. ಆದರೆ ಮುಖ್ಯವಾಗಿ ಇವತ್ತು ನಮ್ಮ ಹೊಸ Tourism Policy ಯನ್ನು ತರುತ್ತಿದ್ದೇವೆ. ಅದನ್ನು ಈಗಾಗಲೇ website ನಲ್ಲಿ ಹಾಕಿದ್ದೇವೆ, ಬರುವ 2–3 ತಿಂಗಳೊಳಗಾಗಿ ಹೊಸ ಪ್ರವಾಸಿ ನೀತಿ ಜಾರಿಗೆ ಬರುತ್ತಿದೆ. ನಾನು ಕೈಗಾರಿಕಾ ಮಂತ್ರಿಯಾಗಿದ್ದಾಗ Industries Facilitation Act ತಂದಿದ್ದೆ. ಅದೇ ರೀತಿಯಲ್ಲಿ ಇಲಾಖೆಯಲ್ಲಿಯೂ ಸಹ investorsಗೆ ಸಹಾಯವಾಗುವುದಕ್ಕೆ Tourism Facilitation ಕಾನೂನನ್ನು ತರುತ್ತಿದ್ದೇವೆ. ಇವತ್ತು ಮುಂಗಡ ಪತ್ರದಲ್ಲಿ ಮಾನ್ಯ ಮುಖ್ಯಮಂತ್ರಿಯವರು ಸಾಕಷ್ಟು ಬಜೆಟ್ support ಕೊಟ್ಟಿದ್ದಾರೆ. First time ಈ ಇಲಾಖೆಗೆ 40 ಕೋಟಿ, 50 ಕೋಟಿ, 80 ಕೋಟಿ, 200 ಕೋಟಿ, ಹೆಚ್ಚಾಗಿ 280 ಕೋಟಿ ರೂ.ಗಳನ್ನು ಕೊಟ್ಟಿದ್ದಾರೆ. ಈ ಬಾರಿ 399 ಕೋಟಿ ರೂ.ಗಳನ್ನು ಕೊಟ್ಟಿದ್ದಾರೆ. ಆದರೆ ನಮ್ಮ dependency finance ಮೇಲೆ ಕಡಿಮೆ ಇರಬೇಕು. ಹಾಗಾಗಿ Infrastructure Corporation ಅನ್ನು form ಮಾಡುತ್ತಿದ್ದೇವೆ. ಎಲ್ಲೆಲ್ಲಿ ನಮಗೆ ಮೂಲಭೂತ ಸೌಕರ್ಯವನ್ನು ನಿರ್ಮಾಣ ಮಾಡುವುದಕ್ಕೆ ಹಣದ ಅವಶ್ಯಕತೆ ಇದೆ? ಆ corporation ಮುಖಾಂತರ raise ಮಾಡುವುದಕ್ಕೆ ಒಂದು Infrastructure Corporation form ಮಾಡುತ್ತಿದ್ದೇವೆ. ಈಗ ರಸ್ತೆಗಳ ಬಗ್ಗೆ, PWD ಸಚಿವರು ಇಲ್ಲೇ ಇದ್ದಾರೆ. ಅವರ ಜೊತೆಯಲ್ಲೂ ಚರ್ಚೆ ಮಾಡಿದ್ದೇನೆ. ಎಲ್ಲೆಲ್ಲಿ PWD ಇವೆ, National Highways, District roads, ಎಲ್ಲೆಲ್ಲಿ ಪ್ರವಾಸಿ destinatioinsಗೆ ಹೋಗುತ್ತವೆ. ಅವರ ಸಹಕಾರ ತೆಗೆದುಕೊಂಡು ಮತ್ತೆ RDPR ನವರ ಸಹಕಾರವನ್ನು ತೆಗೆದುಕೊಂಡು ಆ ರಸ್ತೆಗಳನ್ನು ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ನಬಾರ್ಡ್‌ನಿಂದಲೂ ಸಹ ಈ ವರ್ಷ 80 ಕೋಟಿ ರೂ. ಗಳಷ್ಟು ರಸ್ತೆಗಳನ್ನು ತೆಗೆದುಕೊಂಡಿದ್ದೇವೆ. ಪ್ರತಿಯೊಂದು ಜಿಲ್ಲೆಯಲ್ಲೂ ಏನಾಗುತ್ತದೆಂದರೆ ಪ್ರವಾಸೋದ್ಯಮ ಇಲಾಖೆಯಲ್ಲಿ ಸಿಬ್ಬಂದಿಗಳು ಬಹಳ ಕಡಿಮೆ ಇದ್ದಾರೆ. ಕೆಲವು postಗಳನ್ನು sanction ಮಾಡಿಕೊಂಡಿದ್ದೇವೆ, ಕೆಲವು postಗಳನ್ನು

sanction ಮಾಡಿಕೊಳ್ಳಬೇಕಾಗಿದೆ. ಆದರೆ ಪ್ರತಿಯೊಂದು ಜಿಲ್ಲೆಗೂ ಒಬ್ಬ Consultant (professionals) ಅನ್ನು appoint ಮಾಡುತಿದ್ದೇವೆ. ಈಗ ಮೈಸೂರಿಗೆ ಆ ಜಿಲ್ಲೆಗೆ ಒಬ್ಬರು Consultant ಇರುತ್ತಾರೆ, ಅವರೇ ಅಲ್ಲೆ professional ಆಗಿ project ನ್ನು ready ಮಾಡಬೇಕು. ಅದಕ್ಕೆ ಹಣಕಾಸು ಇಲಾಖೆಯು ಮಾನ್ಯತೆ ಕೊಟ್ಟಿದೆ, ಬರುವ 15 ದಿವಸಗಳು ಅಥವಾ ಒಂದು ತಿಂಗಳೊಳಗಾಗಿ Consultants will come. ಇನ್ನು District Councils, ಇದಕ್ಕೆ ಜಿಲ್ಲಾಧಿಕಾರಿಗಳು ಅಧ್ಯಕ್ಷರಾಗಿರುತ್ತಾರೆ, ಶಾಸಕರೂ ಸದಸ್ಯರಾಗಿರುತ್ತಾರೆ. ಆದರೆ stake holdersಗೆ ಅನುಮತಿ ಇರುವುದಿಲ್ಲ. ಅದು Taxi Association ಇರಬಹುದು, Industries Association ಇರಬಹುದು, ಅವರಿಗೆ ಈ ಬಾರಿ ನಾವು ಅವಕಾಶ ಮಾಡಿಕೊಟ್ಟಿದ್ದೇವೆ. ಪ್ರತಿಯೊಂದು ಜಿಲ್ಲಾ Deputy Commissioner ಗಳಿಗೆ ಮೊದಲ ಬಾರಿಗೆ 10 ಲಕ್ಷ ರೂ. ಗಳಂತೆ ಬಿಡುಗಡೆ ಮಾಡಿದ್ದೇವೆ. ಏಕೆಂದರೆ, ಪ್ರವಾಸೋದ್ಯಮ ಬೆಳೆಯಬೇಕೆಂದರೆ ಒಳ್ಳೆಯ Guides ಬೇಕು, ನಮ್ಮಲ್ಲಿ ಒಳ್ಳೆಯ Guides ಇಲ್ಲ.

ಶ್ರೀ ಕೆ.ಶಿವಮೂರ್ತಿ:- Sir, Mediaದವರಿಗೆ ಹಾಕಿ.

ಶ್ರೀ ಆರ್.ವಿ.ದೇಶಪಾಂಡೆ:- Guides ಇಲ್ಲ, Guides ಕನ್ನಡ ಭಾಷೆಯಲ್ಲಿ ಮಾತನಾಡುತ್ತಿರಬಹುದು. ಆದರೆ ವಿಶ್ವದಿಂದ ಬರುವ ಪ್ರವಾಸಿಗಳಿಗೆ ತಿಳಿಸುವುದಕ್ಕೆ ಇಂಗ್ಲೀಷ್ ಭಾಷೆ ಬರಬೇಕಾಗುತ್ತದೆ. ಅದೇ ರೀತಿಯಲ್ಲಿ ರಷ್ಯಾ, ಜರ್ಮನ್ ಭಾಷೆಗಳು ಬರಬೇಕಾಗುತ್ತದೆ. ಆ ದಿಕ್ಕಿನಲ್ಲಿ ಕ್ರಮ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಮುಖ್ಯವಾಗಿ ಮಹಿಳೆಯರ ಸಂರಕ್ಷಣೆ Green Police concept ತರುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಹೀಗೆ ನಾವು ಹಲವಾರು ವಿಚಾರಗಳನ್ನು ಜಾರಿಗೆ ತರುತ್ತಿದ್ದೇವೆ. ನಮಗೆ ಯಾತ್ರಿ ನಿವಾಸ್‌ಗಳದ್ದು ದೊಡ್ಡ ಸಮಸ್ಯೆಯಾಗಿದೆ, ನಾವು ಯಾತ್ರಿ ನಿವಾಸ್‌ಗಳನ್ನು ಕಟ್ಟಿ ಬಿಟ್ಟಿದ್ದೇವೆ. ಈಗ 70-80 ಯಾತ್ರಿ ನಿವಾಸ್‌ಗಳು ರೆಡಿಯಾಗಿವೆ. ಕೆಲವು ಮಠಾಧೀಶರು ಇದನ್ನು ತೆಗೆದುಕೊಳ್ಳುತ್ತೇವೆಂದು ಹೇಳಿದ್ದಾರೆ, ಕೆಲವರು ಇಲ್ಲವೆಂದು ಹೇಳಿದ್ದಾರೆ. ಜಿಲ್ಲಾಧಿಕಾರಿಗಳಿಂದ report ತರಿಸುತ್ತಿದ್ದೇವೆ, ಏಕೆಂದರೆ ನಮ್ಮ ಇಲಾಖೆಯಲ್ಲಿ

staff ಇಲ್ಲ, ಜನ ಇಲ್ಲ. ನಮಗೆ maintain ಮಾಡುವುದಕ್ಕೆ ಆಗುವುದಿಲ್ಲ. ಹಾಗಾಗಿ ಅಲ್ಲಲ್ಲಿ ಇರುವ ಮಠಾಧೀಶರುಗಳು ಮುಂದೆ ಬಂದರೆ ಅವರಿಗೆ ಇದನ್ನು ಕೊಡುವ ವ್ಯವಸ್ಥೆ ಮಾಡುತ್ತಿದ್ದೇವೆ, ಎಲ್ಲಿ ಇಲ್ಲ ಅಲ್ಲಿ ಪಾರದರ್ಶಕವಾಗಿ ಟೆಂಡರ್ ಮಾಡಿ ಕೊಡುವ ವ್ಯವಸ್ಥೆ ಮಾಡುತತಿದ್ದೇವೆ. ಹಾಗಾಗಿ ರಾಜ್ಯದಲ್ಲಿ ಪ್ರವಾಸೋದ್ಯಮ ಸಾಕಷ್ಟು ಬೆಳೆಯುವುದಕ್ಕೆ ಅವಕಾಶಗಳಿವೆ. ಈಗ ಸಮಯದ ಅಭಾವದಿಂದ ನನಗೆ ಹೆಚ್ಚು ಮಾತನಾಡುವುದಕ್ಕೆ ಆಗುತ್ತಿಲ್ಲ.

ಶ್ರೀ ಕೆ.ಶಿವಮೂರ್ತಿ:– ಸಾರ್, publicity ಮಾಡುವುದಕ್ಕೆ Mediaದವರಿಗೆ ಕೊಡಿ.

ಶ್ರೀ ಜಿ.ಹೆಚ್.ಶ್ರೀನಿವಾಸ್:– ಮಾನ್ಯ ಸಚಿವರು, ಕೆಮ್ಮಣ್ಣುಗುಂಡಿಯ ಬಗ್ಗೆ ಮಾತನಾಡಬೇಕು.

ಶ್ರೀ ಆರ್.ವಿ.ದೇಶಪಾಂಡೆ:– ಬೆಂಗಳೂರು Airport ನಲ್ಲಿ Convention Centre ಮಾಡಬೇಕೆಂದು ಪ್ರಸ್ತಾವನೆ ಇದೆ. Internatonl ಮಟ್ಟದಲ್ಲಿ ಒಂದು Convention Centre ಅನ್ನು 35 ಎಕರೆಯಲ್ಲಿ ಮಾಡಬೇಕೆಂದು ಒಂದು ಪ್ರಸ್ತಾವನೆಯನ್ನು ಸಿದ್ಧಪಡಿಸಿದ್ದೇವೆ.

ಶ್ರೀ ಬಿ.ನಾರಾಯಣಗೌಡ:– ಮಾನ್ಯ ಮಂತ್ರಿಯವರೆ, ಕೆ.ಆರ್.ಪೇಟೆಯ ಬಗ್ಗೆ ಮಾತನಾಡಬೇಕಾಗಿದೆ.

ಶ್ರೀ ಆರ್.ವಿ.ದೇಶಪಾಂಡೆ:– ಹೀಗೆ ಪ್ರವಾಸಿ ಮಂದಿರಗಳಲ್ಲಿ ಮೂಲಭೂತ ಸೌಕರ್ಯಗಳು, ಇಲಾಖೆಯಲ್ಲಿ ಮಾನವ ಸಂಪನ್ಮೂಲವನ್ನು ನಿರ್ಮಾಣ ಮಾಡಿ, first phaseನಲ್ಲಿ important ಇರುವುದನ್ನು ತೆಗೆದುಕೊಳ್ಳುತ್ತೇವೆ. ಕೇಂದ್ರ ಸರ್ಕಾರದಿಂದ ಮಂಜೂರು ಮಾಡಿಕೊಂಡು ಬಂದಿದ್ದೇವೆ. ಮುಖ್ಯವಾಗಿ coastalsನಲ್ಲಿ, ಗೋವಾದಿಂದ ಮಂಗಳೂರಿನವರೆಗೆ 20–22 ಬೀಚ್‌ಗಳನ್ನು ಡೆವಲಪ್ ಮಾಡುವುದಕ್ಕೆ ಕೇಂದ್ರಸರ್ಕಾರ 50 ಕೋಟ ರೂ.ಗಳನ್ನು Coastal Circuit ಗೆಂದು ಹಣವನ್ನು ಮಂಜೂರು ಮಾಡಿದೆ. ಹಾಗಾಗಿ ಇವತ್ತು Circuits ಎಲ್ಲೆಲ್ಲಿ

ಮಾಡಲಿಕ್ಕೆ ಸಾಧ್ಯವಿದೆ, ಅದು ಬಿಜಾಪುರದ ಬಗ್ಗೆ ಬಜೆಟ್‌ನಲ್ಲಿ ಅದರ ಪ್ರಸ್ತಾವನೆ ಇದೆ. ನಾನು ಬಜೆಟ್‌ನಲ್ಲಿರುವ ಹಲವಾರು ವಿಚಾರಗಳನ್ನು ಹೇಳಿದ್ದೇನೆ. ಈಗ ಸಮಯದ ಅಭಾವವಿರುವುದರಿಂದ ಇನ್ನೂ ಎಚ್ಚು ಹೇಳದೇ ಇಲಾಖೆಯ ಬೇಡಿಕೆ ಸಂಖ್ಯೆ 12ಕ್ಕೆ ಅನುಮತಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಜಿ.ಹೆಚ್.ಶ್ರೀನಿವಾಸ್:– ಮಾನ್ಯ ಉಪಾಧ್ಯಕ್ಷರೆ, ದಯವಿಟ್ಟು ಕೆಮ್ಮಣ್ಣುಗುಂಡಿಯ ಬಗ್ಗೆ ಮತನಾಡುವುದಕ್ಕೆ ಹೇಳಿ. ಮಾನ್ಯ ಮಂತ್ರಿಯವರೆ ಕೆಮ್ಮಣ್ಣಗುಂಡಿಯ ಬಗ್ಗೆ ಹೇಳಬೇಕು.

(ಗೊಂದಲ)

ಶ್ರೀ ಬಿ.ನಾರಾಯಣಗೌಡ:– Tourism ಬಗ್ಗೆ ಮೊನ್ನೆ ನನಗೆ ...

(ಗೊಂದಲ)

ಶ್ರೀ ಜೆ.ಟಿ.ಪಾಟೀಲ್:– ಮಾನ್ಯ ಉಪಾಧ್ಯಕ್ಷರೆ, ಬಿಜಾಪುರ ಸುತ್ತಮುತ್ತಲೂ ಪ್ರವಾಸಿ ಕೇಂದ್ರಗಳು ಇವೆ. ದಯಮಾಡಿ ತಾವು Chalukya Tourism Corridor ಅನ್ನು ಸ್ಥಾಪನೆ ಮಾಡಬೇಕು. ಮಾನ್ಯ ಮಂತ್ರಿಯವರು ದಯವಿಟ್ಟು ಉತ್ತರ ಕೊಡಬೇಕು.

ಶ್ರೀ ಆರ್.ವಿ.ದೇಶಪಾಂಡೆ:– ಮಾನ್ಯ ಉಪಾಧ್ಯಕ್ಷರೆ, ಕರ್ನಾಟಕದಲ್ಲಿ ಎಲ್ಲಾ ತರಹದ tourism ಇದೆ. Beach tourism ಇದೆ, religious tourism ಇದೆ, medical tourism ಇದೆ, ಎಲ್ಲಾ ಇದೆ, ಎಲ್ಲವನನ್ನೂ ಒಂದೇ ಸಾರಿ ಮಾಡುವುದಕ್ಕೆ ಆಗುವುದಿಲ್ಲ, ಕ್ರಮೇಣ ಖಂಡಿತವಾಗಿ ಇವುಗಳ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಜಿ.ಹೆಚ್.ಶ್ರೀನಿವಾಸ್:– ಮಾನ್ಯ ಉಪಾಧ್ಯಕ್ಷರೆ, ಕೆಮ್ಮಣ್ಣುಗುಂಡಿ ಬಗ್ಗೆ ಮಾತನಾಡಬೇಕು.

ಶ್ರೀ ಉಪಾಧ್ಯಕ್ಷರು:– ಈಗ ಸಮಯವಿಲ್ಲ, ಇನ್ನು ಪ್ರಾಥಮಿಕ ಶಿಕ್ಷಣ ಸಚಿವರು ಉತ್ತರ ಕೊಡಬೇಕು. ತಾವು ಆಮೇಲೆ ಮಾನ್ಯ

ಮಂತ್ರಿಯವರೊಂದಿಗೆ ಮಾತನಾಡಿ, ಎಲ್ಲವೂ assembly ಯಲ್ಲೆ ಆಗಬೇಕೆಂದರೆ ಆಗುತ್ತದೆಯೇ? ತಾವು ಮಾನ್ಯ ಮಂತ್ರಿಯವರೊಂದಿಗೆ ಏನೇನು projects ಬೇಕೆಂಬುದನ್ನು ಮಾತನಾಡಿ.

ಶ್ರೀ ಬಿ.ನಾರಾಯಣಗೌಡ:- ಮಾನ್ಯ ಉಪಾಧ್ಯಕ್ಷರೆ, ಮೊನ್ನೆ ತಾನೇ ನಮ್ಮ ತಾಲ್ಲೂಕು ಬಗ್ಗೆ ಮಾನ್ಯ ಸಚಿವರು ಪ್ರವಾಸೋದ್ಯಮ ಬಗ್ಗೆ ಮಾಹಿತಿಯನ್ನು ಕೊಟ್ಟಿದ್ದಾರೆ. ಆದರೆ ಅವರು ಇರಲಿಲ್ಲ, ನಮ್ಮ ಕೆ.ಆರ್.ಪೇಟೆ ತಾಲ್ಲೂಕಿನಲ್ಲಿ 3 ಪ್ರವಾಸೋದ್ಯಮಕ್ಕೆ 80 ಲಕ್ಷ ರೂ.ಗಳಂತೆ ಕೊಟ್ಟಿದ್ದಾರೆ. ಕಳೆದ 2011–12ನೇ ಸಾಲಿನಲ್ಲಿ ಇದನ್ನು ಕೊಟ್ಟಿದ್ದೇವೆಂದು ಹೇಳಿದ್ದಾರೆ. ಇದರ ಬಗ್ಗೆ ಇದುವರೆಗೂ ಏನು development ಆಗಿಲ್ಲ, ಮತ್ತೆ ಬೆಂಗಳೂರು–ಜಲ್ಸೂರು road ಅನ್ನು ... ಮೈಸೂರಿನಿಂದ ಏನಾದರೂ ಕೂರ್ಗ್‌ಗೆ ಹೋಗಬೇಕಾದರೆ ಶನಿವಾರ, ಭಾನುವಾರ ಅಥವಾ ಶುಕ್ರವಾರ 7 ರಿಂದ 8 ಗಂಟೆಗಳ ಕಾಲವಾಗುತ್ತದೆ. ನಾಗಮಂಗಲ–ಕೆ.ಆರ್.ಪೇಟೆ ಮತ್ತು ಕೆ.ಆರ್.ನಗರದ ಮಾರ್ಗದಲ್ಲಿ ಹೋದರೆ 3 ಗಂಟೆಗಳ ಅವಧಿಯಲ್ಲಿ ಹೋಗಬಹುದು.

ಶ್ರೀ ಉಪಾಧ್ಯಕ್ಷರು:- ಇದಕ್ಕೂ ರಸ್ತೆಗೂ ಏನು ಸಂಬಂಧವಿದೆ?

ಶ್ರೀ ಬಿ.ನಾರಾಯಣಗೌಡ:- ಮಾನ್ಯ ಉಪಾಧ್ಯಕ್ಷರೆ, ಇದು tourism ನಲ್ಲೇ ಇದೆ, ನಾಲ್ಕು ರಸ್ತೆಗಳನ್ನು ಮಾಡಿಕೊಡುತ್ತೇವೆಂದು ಮೊದಲು sanction ಆಗಿದೆ. ಅದು ಮಧ್ಯದಲ್ಲೇ ನಿಂತಿದೆ. ಮಾನ್ಯ ಸಚಿವರಲ್ಲಿ ಮನವಿ ಮಾಡುವುದೇನೆಂದರೆ, ಆ ಭಾಗದಲ್ಲಿ ಟೂರಿಸಂಗೆ ಒಳ್ಳೆಯ ಅವಕಾಶಗಳಿವೆ. ನಾನು ಇಲಾಖೆಯ Principal Secretary ಯವರನ್ನು ಭೇಟಿ ಮಾಡಿದ್ದೇನೆ. ನಮ್ಮ ಕೆ.ಆರ್.ಪೇಟೆ ತಾಲ್ಲೂಕು, ನಾಗಮಂಗಲ ಮತ್ತು ಕೆ.ಆರ್.ನಗರ ತಾಲ್ಲೂಕಿನಲ್ಲಿ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಆರ್.ವಿ.ದೇಶಪಾಂಡೆ:- ಮಾನ್ಯ ಉಪಾಧ್ಯಕ್ಷರೆ, ನಾನು ಗೌರವಾನ್ವಿತ ಸದಸ್ಯರಿಗೆ ಒಳ್ಳೆಯ Tourism Project ಅನ್ನು ಪ್ರಾರಂಭ ಮಾಡಿ ಎಂದು ಹೇಳಿದ್ದೆ, ಅವರು ಅದನ್ನು ಮಾಡುತ್ತಿಲ್ಲ. ತಾವು ಅದನ್ನು ಪ್ರಾರಂಭ ಮಾಡಿ,

ರಸ್ತೆ ಇನ್ನಿತರ ಸೌಲಭ್ಯಗಳು automatic ಆಗಿ ಎಲ್ಲಾ ಅಲ್ಲಿಗೆ ಬಂದು ಬಿಡುತ್ತದೆ. ಮಂಡ್ಯ ಜಿಲ್ಲೆ, ಚಾಮರಾಜ ನಗರ, ಮೈಸೂರು ಮತ್ತು ಕೊಡಗು ಈ ಭಾಗಗಳಲ್ಲೂ ಸಹ ಪ್ರವಾಸೋದ್ಯಮಕ್ಕೆ ಸಾಕಷ್ಟು ಅವಕಾಶಗಳಿವೆ. Potential ಇದೆ. ಆ potential ಅನ್ನು ಕ್ರಮೇಣ ನಾವು definitely trap ಮಾಡುತ್ತೇವೆ.

ಶ್ರೀ ಉಪಾಧ್ಯಕ್ಷರು:- Ok.

ಶ್ರೀ ಬಿ.ನಾರಾಯಣಗೌಡ:- ತಾವು ಪ್ರೈವೇಟ್‌ನವರಿಗೆ ಅವಕಾಶ ಕೊಟ್ಟರೆ, ಅದನ್ನು ಮುಂದುವರೆಸುವುದಕ್ಕೆ ಸಾಧ್ಯವಾಗುತ್ತದೆ.

ಶ್ರೀ ಉಪಾಧ್ಯಕ್ಷರು:- ತಾವು ಆಮೇಲೆ ಮಾತನಾಡಿ, ಈಗ ಮಾನ್ಯ ಮಂತ್ರಿಯವರು ಉತ್ತರ ಕೊಡಲಿ.

ಆ. 2014-15ನೇ ಸಾಲಿನ ಶಿಕ್ಷಣ ಇಲಾಖೆಯ ಬೇಡಿಕೆಯ ಮೇಲೆ ನಡೆದ ಚರ್ಚೆಗೆ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರಿಂದ ಉತ್ತರ

ಶ್ರೀ ಕಿಮ್ಮನೆ ರತ್ನಾಕರ್(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):- ಸನ್ಮಾನ್ಯ ಉಪಾಧ್ಯಕ್ಷರೆ, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆಯು ಸುಮಾರು 16,000 ಕೋಟಿ ರೂಪಾಯಿಗಳ ವೆಚ್ಚದಲ್ಲಿ ನಡೆಯುತ್ತಿದೆ. ಬಹಳಷ್ಟು ಸದ್ಯರಿಗೆ ಮತ್ತು ಸಾರ್ವಜನಿಕವಾಗಿಯೂ ಕೂಡ ಶಿಕ್ಷಣ ಇಲಾಖೆಗೆ ಬಹಳಷ್ಟು ಹಣ ಹೋಗುತ್ತಿದೆ, ಅದು ಎಲ್ಲಿ ಹೋಗುತ್ತಿದೆ ಎನ್ನುವ ಗೊಂದಲಗಳು, ಅನುಮಾನಗಳಿದ್ದು, ಸಾರ್ವತ್ರಿಕವಾಗಿ ಅನೇಕ ಹೇಳಿಕೆಗಳೂ ಬಂದಿವೆ. ವಾಸ್ತವಿಕವಾಗಿ ಯಾವ ಯಾವ ವೆಚ್ಚಕ್ಕೆ ಈ ಹಣ ವಿನಿಯೋಗವಾಗುತ್ತದೆ ಎನ್ನುವುದನ್ನು ನಾನು ಹೇಳಬಯಸುತ್ತೇನೆ. ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆಗೆ ಸಂಬಂಧಪಟ್ಟ ಚರ್ಚೆಯಲ್ಲಿ ಸನ್ಮಾನ್ಯ ಸದಸ್ಯರಾಗಿರುವಂಥ ಕೋನರೆಡ್ಡಿಯವರು, ವಿಶ್ವೇಶ್ವರ ಹೆಗಡೆ ಕಾಗೇರಿಯವರು, ಈಶ್ವರ ಖಂಡ್ರೆಯವರು, ಡಿ.ಸಿ.ತಮ್ಮಣ್ಣನವರು, ರಾಜೀವ್ ಕುಡಚಿಯವರು, ರುದ್ರಪ್ಪ ಮಾನಪ್ಪ ಲಮಾಣಿಯವರು, ತಿಪ್ಪರಾಜುರವರು ಮತ್ತು ಡಾ:- ಅಶ್ವತ್ಥನಾರಾಯಣರವರು ಇವರೆಲ್ಲರೂ ಪ್ರಮುಖವಾಗಿ ನಮ್ಮ